ವೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 17 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 121 | ಪುಟಗಳು: 12
ಜಾಹೀರಾತು: ad@mysurumithra.com, website: www.mysurumithra.com
ಸುದ್ದಿ, ಫೋಟೋಗೆ: news@mysurumithra.com

₹4

ಲಕ್ಷಾಂತರ ಕೋಟಿ ಖರ್ಚಾದರೂ ಪರಿಶಿಷ್ಟರ ಸ್ಥಿತಿ ಸುಧಾರಿಸಿಲ್ಲ

● ಅಧಿಕಾರಿಗಳ ತರಾಟೆಗೆ ತೆಗೆದುಕೊಂಡ ಸಿಎಂ ಸಿದ್ದರಾಮಯ್ಯ ● ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ 2.97 ಲಕ್ಷ ಕೋಟಿ ವೆಚ್ಚ ● ಪರಿಶಿಷ್ಟರ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಎಚ್ಚರಿಕೆ



ಅನುಸೂಚಿತ ಜಾತಿ, ಪಂಗಡಗಳ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಈ ವೇಳೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಇನ್ನಿತರರಿದ್ದರು.

> "ಪ್ರಸಕ್ತ ಸಾಲಿನಲ್ಲಿ 42,017.51 ಕೋಟಿ ರೂ. ಹಂಚಿಕೆ ಮಾಡಲಾಗಿದೆ. ಅನುದಾನ ಸಮರ್ಪಕ ವೆಚ್ಚ ಮಾಡಲು ಆದಷ್ಟು ಬೇಗ ಕ್ರಿಯಾ ಯೋಜನೆ ರೂಪಿಸಿ ಪರಿಣಾಮಕಾರಿ ಅನುಷ್ಠಾನ ಕಾರ್ಯ ಕೈಗೊಳ್ಳಬೇಕು, ಯಾವುದೇ ಕಾರಣಕ್ಕೂ ಅನುದಾನ ಬಾಕಿ ಉಳಿಯಬಾರದು. ಶೇ.100ರಷ್ಟು ಪ್ರಗತಿ ಸಾಧಿಸಲೇಬೇಕು, ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳ ವಿರುದ್ಧ ಕಾಯ್ದೆ ಪ್ರಕಾರ ಶಿಕ್ಷೆ ವಿಧಿಸುವ ಕಾರ್ಯ ಆಗಬೇಕು.
>
> –ಸಿದ್ದರಾಮಯ್ಯ, ಮುಖ್ಯಮಂತ್ರಿ

ಬೆಂಗಳೂರು, ಆ.16(ಕೆಎಂಶಿ)–ಪರಿಶಿಷ್ಟ ಜಾತಿ, ವರ್ಗದ ಕಲ್ಯಾಣ ಕಾರ್ಯಕ್ರಮಗಳಿಗೆ ಲಕ್ಷಾಂತರ ಕೋಟಿ ರೂ. ಖರ್ಚು ಮಾಡಿದರೂ ಈ ಸಮುದಾಯದ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಜೀವನಮಟ್ಟ ಸುಧಾರಣೆ ಆಗದಿರುವುದು ನಾಚಿಕೆಗೇಡು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದ್ದಾರೆ.

ಅನುಸೂಚಿತ ಜಾತಿ ಹಾಗೂ ಪಂಗಡಗಳ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಮಾತನಾಡಿದ ಅವರು, ನಮ್ಮ ಸರ್ಕಾರ ಬಂದ ನಂತರ ಈ ಯೋಜನೆಗಳಿಗೆ 2.97 ಲಕ್ಷ ಕೋಟಿ ರೂ. ವೆಚ್ಚ ಮಾಡಿದ್ದೇವೆ. ಆದರೆ, ಸಾಮಾಜಿಕ, ಶೈಕ್ಷಣಿಕವಾಗಿ ಸುಧಾರಣೆ ಮಾಡುವಲ್ಲಿ ಅಧಿಕಾರಿಗಳು ವಿಫಲರಾಗಿರುವುದು ನಾಚಿಕೆಗೇಡಿನ ವಿಷಯ. ಹಣ ಬಳಕೆಯಲ್ಲಿ ಪ್ರಗತಿ ತೋರಿಸಿದ್ದೀರಿ, ಆದರೆ, ಅವರ ಸಾಮಾಜಿಕ ಜೀವನ ಶೈಲಿಯಲ್ಲಿ ಬದಲಾವಣೆ ಕಾಣುತ್ತಿಲ್ಲ. ನೀವು ಇತ್ತ ಕಡೆ ಹೆಚ್ಚಿನ ಗಮನಹರಿಸಿ ಎಂದು ಕಿವಿಮಾತು ಹೇಳಿದರು.

ಕಳೆದ ವರ್ಷ ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಲ್ಯಾಣ ಕಾರ್ಯಕ್ರಮಗಳಿಗೆ ಬಿಡುಗಡೆಯಾದ 38,793 ಕೋಟಿ ರೂ.ಗಳಲ್ಲಿ ರೂ. 38,717ಕೋಟಿ ವೆಚ್ಚ ಮಾಡಿ ಶೇ.97 ರಷ್ಟು ಪ್ರಗತಿ ಸಾಧಿಸಿದ್ದೇವೆ. ಕೇಂದ್ರದಿಂದ ಬರಬೇಕಾದ 880 ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡ ಜನಸಂಖ್ಯೆ ಹೆಚ್ಚಿರುವ 39 ತಾಲೂಕುಗಳನ್ನು ಗುರುತಿಸಿ ಅಧ್ಯಯನ ಕೈಗೊಳ್ಳಲಾಗಿದೆ, ಶಿಕ್ಷಣ, ಆರೋಗ್ಯ, ಜೀವನಮಟ್ಟ ಸುಧಾರಣೆ, ಬಡತನ ನಿರ್ಮೂಲನೆ ಮಾನದಂಡ ಪರಿಗಣಿಸಿ ಸಮೀಕ್ಷೆ ನಡೆಸಲಾಗಿದೆ. ಅಭಿವೃದ್ಧಿ ಅನುದಾನ ಬಿಡುಗಡೆಯಲ್ಲಿ ಶೇ.9.6ರಷ್ಟು ವಾರ್ಷಿಕ ಪ್ರಗತಿ ಸಾಧಿಸಲಾಗಿದೆ, ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಕಳೆದ 10 ವರ್ಷಗಳಲ್ಲಿ ವಿವಿಧ ಮಾನದಂಡಗಳಲ್ಲಿ ಮುಂಚೂಣಿಯಲ್ಲಿರುವುದು ಸ್ಪಷ್ಟವಾಗಿದೆ. ಕಾಯ್ದೆ ಜಾರಿ ಬಳಿಕ ಒಟ್ಟು 2.97 ಲಕ್ಷ ಕೋಟಿ ರೂ. ವೆಚ್ಚ ಮಾಡಲಾಗಿದೆ, ಯೋಜನೆ ಸಮರ್ಪಕ ಅನುಷ್ಠಾನವಾಗುತ್ತಿದೆಯೇ ಎಂಬುವುದರ ಬಗ್ಗೆ ಪರಿಶೀಲನೆ ನಡೆಸಬೇಕು ಎಂದರು.

ಯಾವುದೇ ಕಾರಣಕ್ಕೂ ಕಾಯ್ದೆಯ ಆಶಯಕ್ಕೆ ಭಂಗ ಬರಬಾರದು, ಆಯಾ ಇಲಾಖೆ ▶ 6ನೇ ಪುಟಕ್ಕೆ

ಬಳ್ಳಾರಿ ಜೈಲಿಗೆ ದರ್ಶನ್?

ಜಗದೀಶ್, ಲಕ್ಷ್ಮಣ್ ಶಿವಮೊಗ್ಗ, ನಾಗರಾಜ್ ಗುಲ್ಬರ್ಗಾ, ಪ್ರದೋಷ್ ಬೆಳಗಾವಿ, ಪವಿತ್ರಾಗೌಡ, ಅನುಕುಮಾರ್ ಬೆಂಗಳೂರು ಪರಪ್ಪನ ಅಗ್ರಹಾರ



ಬೆಂಗಳೂರು, ಆ.16(ಕೆಎಂಶಿ)– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧಿತ ನಟ ದರ್ಶನ್, ನಟಿ ಪವಿತ್ರಾಗೌಡ ಮತ್ತು ಇತರ ಸಹ ಆರೋಪಿಗಳನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ರಾಜ್ಯದ ವಿವಿಧ ಜೈಲುಗಳಿಗೆ ಸ್ಥಳಾಂತರಿಸಲು ಅಧಿಕಾರಿಗಳು ಮುಂದಾಗಿದ್ದಾರೆ.

ಆರೋಪಿಗಳ ಭದ್ರತೆ ಮತ್ತು ಆಡಳಿತಾತ್ಮಕ ಕಾರಣಗಳಿಂದ ಇತರೆ ಜೈಲುಗಳಿಗೆ ಸ್ಥಳಾಂತರಿಸಲು ನಿರ್ಧರಿಸಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿದೆ.

ಜೈಲು ಅಧಿಕಾರಿಗಳು, ಆರೋಪಿಗಳನ್ನು ಬೇರೆ ಜೈಲುಗಳಿಗೆ ವರ್ಗಾಯಿಸುವಂತೆ ಕೋರಿ 64ನೇ ಸೆಷನ್ಸ್ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿತ್ತಾದರೂ, ಜೈಲು ಅಧಿಕಾರಿಗಳಿಂದ ನೇರ ಅರ್ಜಿ ಸ್ವೀಕರಿಸಲು ನಿರಾಕರಿಸಿದ ನ್ಯಾಯಾಲಯ, ಪ್ರಕರಣದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಮೂಲಕವೇ ಅರ್ಜಿ ಸಲ್ಲಿಸುವಂತೆ ಸೂಚಿಸಿದೆ. ▶ 6ನೇ ಪುಟಕ್ಕೆ

ಅಭಿಮಾನಿಗಳಿಗೆ ಪತ್ನಿ ಮೂಲಕ ಸಂದೇಶ

ಬೆಂಗಳೂರು: ಜೈಲು ಸೇರಿದ ಎರಡೇ ದಿನಕ್ಕೆ ಜೈಲಿನಿಂದಲೇ ತಮ್ಮ ಅಭಿಮಾನಿಗಳಿಗೆ ಸಂದೇಶವೊಂದನ್ನು ಪತ್ನಿ ವಿಜಯಲಕ್ಷ್ಮಿ ಮೂಲಕ ರವಾನಿಸಿದ್ದಾರೆ. ನಟ ದರ್ಶನ್ ಪತ್ನಿ ವಿಜಯಲಕ್ಷ್ಮಿ ಅವರು ದರ್ಶನ್ ಕಳಿಸಿರುವ ಸಂದೇಶವನ್ನು ತಮ್ಮ ಸಾಮಾಜಿಕ ಜಾಲತಾಣದ ಮೂಲಕ ಹಂಚಿಕೊಂಡಿದ್ದಾರೆ. 'ಎಲ್ಲರಿಗೂ ನಮಸ್ಕಾರ, ನಾನು ವಿಜಯಲಕ್ಷ್ಮಿ ದರ್ಶನ್. ನಿಮ್ಮ ಪ್ರೀತಿಯ ದರ್ಶನ್‌ರವರು ನಿಮಗೆ ಕಳಿಸಿರುವ ಸಂದೇಶ' ಎಂದು ವಿಜಯಲಕ್ಷ್ಮಿ ಇನ್‌ಸ್ಟಾಗ್ರಾಂನಲ್ಲಿ ಬರೆದುಕೊಂಡಿದ್ದಾರೆ.

'ಕನ್ನಡ ಕಲಾಭಿಮಾನಿಗೆ ಹಾಗೂ ನನ್ನ ಸೆಲೆಬ್ರಿಟಿಗಳಿಗೆ ಈ ನಿಮ್ಮ ಪ್ರೀತಿಯ ದಾಸನ ಶಿರ ಸಾಷ್ಟಾಂಗ ನಮಸ್ಕಾರಗಳು. ನನ್ನ ಸುಖದಲ್ಲಿ ಭಾಗಿಯಾಗಿ, ಕಷ್ಟದಲ್ಲಿ ಬೆನ್ನೆಲುಬಾಗಿ ನಿಂತ ನಿಮ್ಮ ಪ್ರೀತಿ ಅಭಿಮಾನಕ್ಕೆ ನಾನು ಜೀವನ ಪರ್ಯಂತ ಆಭಾರಿ. ನಾನು ಎಲ್ಲೆ ಇದ್ದರೂ ಹೇಗೆ ಇದ್ದರು ನಿಮ್ಮಗಳ ಶ್ರೇಯೋಭಿಲಾಷೆಯನ್ನೆ ಬಯಸುತ್ತೇನೆ. ಪ್ರಸಕ್ತ ವಿದ್ಯಮಾನ ಏನೇ ಇದ್ದರು, ನನ್ನ ನಂಬಿ ಕನಸು ಕಂಡಿರುವ ನಿರ್ದೇಶಕರ ಹಾಗೂ ನನ್ನ ಮೇಲೆ ಕೋಟ್ಯಂತರ ಹಣ ಹೂಡಿರುವ ನಿರ್ಮಾಪಕರ ಬೆಂಬಲವಾಗಿ ನಿಲ್ಲಬೇಕಾದ್ದು ನನ್ನ ಆದ್ಯ ಕರ್ತವ್ಯ, ಹಾಗಾಗಿ ನನ್ನ 'ದಿ ಡೆವಿಲ್' ಚಿತ್ರದ ಎಲ್ಲಾ ಕೆಲಸ ಕಾರ್ಯಗಳು ಯಾವುದೇ ಅಡೆತಡೆ ಇಲ್ಲದೆ ಸಾಗಲಿ ಎಂಬುದು ನನ್ನ ಆಶಯ. ಹಾಗಾಗಿ ಅದಕ್ಕೆ ನನ್ನ ಸಂಪೂರ್ಣ ಸಹಕಾರವಿದೆ ಎಂದು ಈ ಮೂಲಕ ತಿಳಿಸುತ್ತಿದ್ದೇನೆ. ಹಾಗೂ ಇದಕ್ಕೆ ನನ್ನ ಸೆಲೆಬ್ರಿಟಿಗಳ ಸಹಮತವಿದೆಯೆಂದು ದೃಢವಾಗಿ ನಂಬಿದ್ದೇನೆ. ಸಿನಿಮಾ ಒಂದು ಮನರಂಜನೆಯ ಮಾಧ್ಯಮ. ಅದನ್ನು ಕೇವಲ ಮನರಂಜನೆಯ ದೃಷ್ಟಿಯಿಂದ ಮಾತ್ರ ನೋಡಬೇಕು. ನಿಮ್ಮ ಪ್ರೀತಿಯ ದಾಸ' ಎಂದು ದರ್ಶನ್ ಸಂದೇಶ ನೀಡಿದ್ದಾರೆ.

ಫಾಸ್ಟ್‌ಟ್ರ್ಯಾಕ್ ಕೋರ್ಟ್‌ಗೆ ಮನವಿಗೆ ಸಿದ್ಧತೆ

ಬೆಂಗಳೂರು: ಮತ್ತೆ ಜೈಲು ಸೇರಿರುವ ರೇಣುಕಾಸ್ವಾಮಿ ಕೊಲೆ ಪ್ರಕರಣದ ವಿಚಾರಣೆ ಫಾಸ್ಟ್‌ಟ್ರ್ಯಾಕ್ ಕೋರ್ಟ್ ರಚನೆಗೆ ಮನವಿ ಸಲ್ಲಿಸಲು ಪೊಲೀಸರು ತಯಾರಿ ನಡೆಸಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ಇತ್ತೀಚೆಗೆ ಜಾಮೀನು ರದ್ದುಗೊಳಿಸಿದ ಸುಪ್ರೀಂಕೋರ್ಟ್ ತ್ವರಿತಗತಿಯಲ್ಲಿ ಕೇಸ್ ಇತ್ಯರ್ಥಕ್ಕೆ ಸೂಚನೆ ನೀಡಿತ್ತು. ಹೀಗಾಗಿ ಫಾಸ್ಟ್‌ಟ್ರ್ಯಾಕ್ ಕೋರ್ಟ್ ರಚಿಸುವಂತೆ ಸರ್ಕಾರಕ್ಕೆ ಮನವಿ ಮಾಡಲು ಪೊಲೀಸರು ತಯಾರಿ ನಡೆಸಿದ್ದಾರೆ. 6 ತಿಂಗಳ ಒಳಗೆ ಟ್ರಯಲ್ ಮುಗಿಸಿ ಸುಪ್ರೀಂಕೋರ್ಟ್‌ಗೆ ಮಾಹಿತಿ ನೀಡುವುದಲ್ಲದೇ ಆರೋಪಿಗಳಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. ಅದಕ್ಕಾಗಿ ಪೊಲೀಸರು ಈ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಕಾನೂನು ಇಲಾಖೆ ಜೊತೆಗೆ ಚರ್ಚಿಸಿ ಸೋಮವಾರ ಸರ್ಕಾರಕ್ಕೆ ಮನವಿ ಮಾಡುವ ಸಾಧ್ಯತೆಗಳಿಗೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಇಂದು ಶುಭಾಂಶು ಶುಕ್ಲಾ ಭಾರತಕ್ಕೆ: ಮೋದಿ ಭೇಟಿ

ನವದೆಹಲಿ: ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಐತಿಹಾಸಿಕ ಭೇಟಿ ನೀಡಿದ ನಂತರ ಮೊದಲ ಬಾರಿಗೆ ಗಗನಯಾತ್ರಿ ಶುಭಾಂಶು ಶುಕ್ಲಾ ಅವರು ಭಾನುವಾರ ಭಾರತಕ್ಕೆ ಮರಳುತ್ತಿದ್ದಾರೆ. 2027ರಲ್ಲಿ ಇಸ್ರೋ ತನ್ನ ಮೊದಲ ಮಾನವ ಬಾಹ್ಯಾಕಾಶ ಹಾರಾಟ ಎದುರು ನೋಡುತ್ತಿರುವುದರಿಂದ ತಮ್ಮ ಅನುಭವಗಳನ್ನು ಸ್ನೇಹಿತರು ಹಾಗೂ ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳಲು ಶುಭಾಂಶು ಉತ್ಸುಕರಾಗಿದ್ದಾರೆ. ಕಳೆದೊಂದು ವರ್ಷದಿಂದ ISSUE Axiom-4 ▶ 6ನೇ ಪುಟಕ್ಕೆ



ಶುಭಾಂಶು ಶುಕ್ಲಾ

ಚಾಮುಂಡೇಶ್ವರಿ ಪ್ರೇರಣೆಯಾದರೂ ದರ್ಶನ ಭಾಗ್ಯ ಕಲ್ಪಿಸದ ಪೂಜಾರಿಗಳು!

ಬೆಂಗಳೂರು ಭಕ್ತರಿಗೆ ದರ್ಶನಕ್ಕೆ ನಿರಾಕರಣೆ

ಮೈಸೂರು, ಆ.16– ನಾಡದೇವಿ ಶ್ರೀ ಚಾಮುಂಡೇಶ್ವರಿ ದರ್ಶನಕ್ಕೆಂದು ಬೆಂಗಳೂರಿನಿಂದ ಬಂದಿದ್ದ ಹತ್ತಾರು ಮಂದಿ, ಗರ್ಭಗುಡಿವರೆಗೆ ಹೋಗಿ ಅರ್ಚಕರ ಅಚಾತುರ್ಯದಿಂದ ತಾಯಿಯ ದರ್ಶನ ಸಿಗದೆ ಬೇಸರದಿಂದ ವಾಪಸ್ಸಾದ ಘಟನೆ ಶನಿವಾರ ರಾತ್ರಿ ನಡೆದಿದೆ.



ಬೆಂಗಳೂರಿನಿಂದ ಆಗಮಿಸಿದ್ದ 10–12 ಮಂದಿ ರಾತ್ರಿ 9.15ರ ವೇಳೆಗೆ ದೇವಸ್ಥಾನ ಪ್ರವೇಶಿಸಿದ್ದಾರೆ. ಅವರು ಗರ್ಭಗುಡಿ ಬಳಿ ಹೋಗುವಷ್ಟರಲ್ಲಿ ಅಲ್ಲಿದ್ದ ಅರ್ಚಕರು ಪರದೆ ಸರಿಸಿದ್ದಾರೆ. ಮಂಗಳಾರತಿ ಆಗುತ್ತಿರಬಹುದು, ಕೆಲ ಹೊತ್ತಿನ ಬಳಿಕ ಪರದೆ ಸರಿಸಬಹುದು ಎಂದೆಣಿಸಿ ಕಾದಿದ್ದ ಭಕ್ತರಿಗೆ ನಿರಾಸೆಯಾಗಿದೆ. ಗರ್ಭಗುಡಿಯಿಂದ ಹೊರಬಂದ ಅರ್ಚಕರು, ಪರದೆ ಸರಿಸಿದ ಮೇಲೆ ಮತ್ತೆ ತೆಗೆಯುವುದಿಲ್ಲ ಹೋಗಿ... ಹೋಗಿ... ಎಂದಿದ್ದಾರೆ. ಈ ಬಗ್ಗೆ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ▶ 6ನೇ ಪುಟಕ್ಕೆ

> "ವಿಷಯ ತಿಳಿಯಿತು. ಈ ಬಗ್ಗೆ ವಿಚಾರಿಸಿದಾಗ ಗರ್ಭಗುಡಿ ಬಳಿ ಭಕ್ತರು ಕಾಣಿಸದ ಕಾರಣ ಪರದೆ ಸರಿಸಿದೆವು. ರಾತ್ರಿ ಪರದೆ ಸರಿಸಿದರೆ ಬೆಳಗ್ಗೆವರೆಗೆ ಮತ್ತೆ ತೆಗೆಯುವಂತಿಲ್ಲ ಎಂದು ಅರ್ಚಕರು ತಿಳಿಸಿದ್ದಾರೆ. ಆದರೆ ಭಕ್ತರು ದರ್ಶನಕ್ಕೆ ಅನುವು ಮಾಡಿಕೊಡುವಂತೆ ಪಟ್ಟು ಹಿಡಿದಿದ್ದರಂತೆ. ಕೊನೆಗೆ ದೇವಸ್ಥಾನದ ಆಚರಣೆ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಟ್ಟು, ಬೆಳಗ್ಗೆ ದರ್ಶನಕ್ಕೆ ಬರುವಂತೆ ಹೇಳಿ ಕಳುಹಿಸಲಾಗಿದೆ. ಈ ರೀತಿಯ ಘಟನೆ ಎಂದೂ ಆಗಿರಲಿಲ್ಲ. ಯಾವ ಅರ್ಚಕರು ಬೇಕಂತಲೇ ಪರದೆ ಸರಿಸುವುದಿಲ್ಲ. ಆದರೂ ಇಂತಹ ಪ್ರಸಂಗ ಮರುಕಳಿಸದಂತೆ ಎಚ್ಚರಿಕೆ ವಹಿಸಲು ತಿಳಿಸಲಾಗುವುದು.
>
> –ಎಂ.ಜೆ.ರೂಪಾ, ಕಾರ್ಯದರ್ಶಿ
> ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಮೈಸೂರು ನೂತನ ಬಿಷಪ್ ಫ್ರಾನ್ಸಿಸ್ ಸೆರ್ರಾವ್

ಮೈಸೂರು,ಆ.16(ಪಿಎಂ)–ಪ್ರಸ್ತುತ ಶಿವಮೊಗ್ಗ ಡಯಾಸಿಸ್‌ನ ಬಿಷಪ್ ಆಗಿರುವ ಹಾಗೂ ಸಿಸಿಬಿಐ (ಕಾನ್ಫರೆನ್ಸ್ ಆಫ್ ಕ್ಯಾಥೋಲಿಕ್ ಬಿಷಪ್ಸ್ ಆಫ್ ಇಂಡಿಯಾದ) ಅಧ್ಯಕ್ಷರಾಗಿರುವ ಫ್ರಾನ್ಸಿಸ್ ಸೆರ್ರಾವ್ ಅವರನ್ನು ಮೈಸೂರು ಧರ್ಮ ಕ್ಷೇತ್ರದ (ಮೈಸೂರು ಡಯೋಸಿಸ್) ನೂತನ ಬಿಷಪ್ ಆಗಿ, ಪೂಜ್ಯ ಪೋಪ್ ಲಿಯೋ XIV ಅವರು ನೇಮಕ ಮಾಡಿದ್ದಾರೆ. ಈ ಘೋಷಣೆಯನ್ನು ಆ.15ರಂದು ಮಧ್ಯಾಹ್ನ 3.30ಕ್ಕೆ (ಐಎಸ್‌ಟಿ) ರೋಮ್‌ನಲ್ಲಿ ಮಾಡಲಾಯಿತು ಎಂದು ಮೈಸೂರು ಡಯಾಸಿಸ್‌ನ ಆಡಳಿತಾಧಿಕಾರಿಯೂ ಆದ ಆರ್ಚ್ ಬಿಷಪ್ ಪೂಜ್ಯ ಬರ್ನಾರ್ಡ್ ಮೊರಾಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಫ್ರಾನ್ಸಿಸ್ ಸೆರ್ರಾವ್

ಫ್ರಾನ್ಸಿಸ್ ಸೆರ್ರಾವ್ ಅವರನ್ನು 2014ರ ಮಾ.19ರಂದು ಶಿವಮೊಗ್ಗದ ಬಿಷಪ್ ಆಗಿ ನೇಮಿಸಲಾಯಿತು. ಅದೇ ವರ್ಷದ ಮೇ 7ರಂದು ಅವರು ದೀಕ್ಷೆ ಪಡೆದುಕೊಂಡರು. 1959ರ ಆ.15ರಂದು ಮಂಗಳೂರು ಡಯಾಸಿಸ್‌ನ ಮೂಡುಬಿದಿರೆಯಲ್ಲಿ ಜನಿಸಿದ ಫ್ರಾನ್ಸಿಸ್ ಸೆರ್ರಾವ್, 1979ರ ಜ.3ರಂದು ಬೆಂಗಳೂರಿನ ಮೌಂಟ್‌ಸೆಂಟ್ ಜೋಸೆಫ್‌ನಲ್ಲಿ ಜೀಸಸ್ ಸೊಸೈಟಿಗೆ ಸೇರಿದರು. ಫ್ರಾನ್ಸಿಸ್ ಸೆರ್ರಾವ್ ಅವರು ಈಗ ಮೈಸೂರು ಧರ್ಮ ಕ್ಷೇತ್ರದ 9ನೇ ಬಿಷಪ್ ಆಗಿ ನೇಮಕವಾಗಿದ್ದಾರೆ. 2024ರಲ್ಲಿ ಮೈಸೂರು ಧರ್ಮಕ್ಷೇತ್ರದ ಬಿಷಪ್ ಸ್ಥಾನ ಖಾಲಿಯಾಗಿ ಆರ್ಚ್ ಬಿಷಪ್ ಬರ್ನಾರ್ಡ್ ಮೊರಾಸ್ ಅವರು ಆಡಳಿತಾಧಿಕಾರಿಯಾಗಿ ಈವರೆಗೆ ಕಾರ್ಯನಿರ್ವಹಿಸುತ್ತಿದ್ದರು.

ಅಪಪ್ರಚಾರ ಖಂಡಿಸಿ ಧರ್ಮಸ್ಥಳದಲ್ಲಿ ಇಂದು ಬಿಜೆಪಿ ಭಾರಿ ಪ್ರತಿಭಟನೆ

ಈಗಾಗಲೇ ಶ್ರೀ ಕ್ಷೇತ್ರದಲ್ಲಿ ಬಿಡಾರ ಹೂಡಿರುವ ಬಿಜೆಪಿ ಶಾಸಕರು

ಬೆಂಗಳೂರು,ಆ.16(ಕೆಎಂಶಿ)–ಧರ್ಮಸ್ಥಳ ವಿರುದ್ಧದ ಅಪಪ್ರಚಾರ ಖಂಡಿಸಿ ರಾಜ್ಯ ಬಿಜೆಪಿ ನಾಳೆ (ಭಾನುವಾರ) ಶ್ರೀ ಕ್ಷೇತ್ರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ. ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನ ಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಸೇರಿದಂತೆ ಪಕ್ಷದ 30ಕ್ಕೂ ಹೆಚ್ಚು ಶಾಸಕರು ಹಾಗೂ ಮುಖಂಡರು 500 ಕಾರುಗಳಲ್ಲಿ ಧರ್ಮಸ್ಥಳ ಚಲೋ ನಡೆಸಿದ್ದಾರೆ. ಶ್ರೀ ಕ್ಷೇತ್ರದಲ್ಲಿ ಪ್ರತಿಭಟನೆ ನಡೆಸುವ ಮೂಲಕ ಪಕ್ಷ ಮತ್ತು ಜನತೆ ಧರ್ಮಸ್ಥಳದ ಪರವಾಗಿದೆ. ಎಲ್ಲಾ ಹೋರಾಟದಲ್ಲಿ ಸಹಕರಿಸಲಿದೆ ಎಂದು ಧರ್ಮಾಧಿಕಾರಿಗಳಿಗೆ ಬೆಂಬಲ ವ್ಯಕ್ತಪಡಿಸಲಿದ್ದಾರೆ. ಹಿಂದೂ ವಿರೋಧಿಗಳು ಧರ್ಮಸ್ಥಳವನ್ನು ಗುರಿಯಾಗಿಟ್ಟುಕೊಂಡು ಅಪಪ್ರಚಾರ ಮಾಡುತ್ತಿದ್ದಾರೆ. ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವೂ ಕೈಜೋಡಿಸಿದಂತಿದೆ. ಕಾಣದ ಕೈಗಳು ನೀಡಿದ ದೂರನ್ನೇ ಆಧರಿಸಿ ಮುಖ್ಯಮಂತ್ರಿ, ಎಸ್‌ಐಟಿ ರಚಿಸಿದ್ದು, ಕಳೆದ ಎರಡು–ಮೂರು ವಾರಗಳಿಂದ ಶ್ರೀಕ್ಷೇತ್ರ ವ್ಯಾಪ್ತಿಯಲ್ಲಿ ವ್ಯಾಪಕ ಶೋಧಕಾರ್ಯ ನಡೆಸಿದೆ. ಅನಾಮಿಕ ಮುಸುಕುಧಾರಿ ▶ 6ನೇ ಪುಟಕ್ಕೆ

ಬಿಜೆಪಿ ರಾಜಕೀಯ ಮಾಡುತ್ತಿದೆ

ಬೆಂಗಳೂರು,ಆ.16(ಕೆಎಂಶಿ)–ಧರ್ಮಸ್ಥಳ ಪ್ರದೇಶದಲ್ಲಿ ಸಂಶಯಾಸ್ಪದ ಸಾವುಗಳ ಕುರಿತು ಮುಸುಕುಧಾರಿ ವ್ಯಕ್ತಿ ನ್ಯಾಯಾಲಯದಲ್ಲಿ ದೂರು ಕೊಟ್ಟಾಗ ಪ್ರತಿಕ್ರಿಯಿಸದ ಬಿಜೆಪಿ ನಾಯಕರು ಈಗ ರಾಜಕೀಯ ಮಾಡುತ್ತಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಟೀಕಿಸಿದ್ದಾರೆ. ಹಿಂದೂತ್ವ ತಮ್ಮ ಮನೆ ಆಸ್ತಿ ಎಂಬುದಾಗಿ ಭಾವಿಸಿರುವ ಬಿಜೆಪಿಯವರಿಗೆ ಧರ್ಮಸ್ಥಳದ ಮೇಲೆ ಪ್ರೀತಿ ಇಲ್ಲ, ಬರೀ ರಾಜಕೀಯಕ್ಕಾಗಿ ಧರ್ಮಸ್ಥಳ ಬೇಕಾಗಿದೆ ಎಂದಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದೂತ್ವ ಯಾರೊಬ್ಬರ ಆಸ್ತಿಯಲ್ಲ, ಅವರವರ ಭಕ್ತಿ, ನಂಬಿಕೆ ಭಾವನೆಗೆ ಸಂಬಂಧಿಸಿದ್ದು. ಎಸ್‌ಐಟಿ ರಚಿಸಿದ ಮೊದಲ ದಿನ ಬಿಜೆಪಿ ಏಕೆ ಮಾತನಾಡಲಿಲ್ಲ, ಧರ್ಮಸ್ಥಳದ ಗೌರವ ಕಾಪಾಡುವುದು ನಮ್ಮ ಚಿಂತನೆ, ತಪ್ಪು ಯಾರೇ ಮಾಡಿದ್ದರೂ ಶಿಕ್ಷೆ ಆಗಲಿ ಎನ್ನುವವರು ನಾವು, ನ್ಯಾಯಾಲಯದ ಮುಂದೆ ದೂರು ನೀಡಿದ ನಂತರವೂ ಸರ್ಕಾರ ತನಿಖೆ ಮಾಡದಿದ್ದರೇ ಬಿಜೆಪಿಯವರು ಏನು ಹೇಳುತ್ತಿದ್ದರು, ಅವರೇ ಟೀಕೆ ಮಾಡುತ್ತಿರಲಿಲ್ಲವೇ? ಈಗ ರಾಜಕಾರಣ ಮಾಡುತ್ತಿದ್ದು, ಇದಕ್ಕೆ ತಲೆಕೆಡಿಸಿಕೊಳ್ಳುವುದಿಲ್ಲ. ಎಸ್‌ಐಟಿ ತನಿಖೆ ಸ್ವಾಗತಿಸಿದವರು, ಈಗ ಬೇರೆ ರೀತಿ ಮಾತನಾಡುತ್ತಿದ್ದಾರೆ. ಎಷ್ಟು ಗುಂಡಿ ತೆಗೆಯಬೇಕು, ಬೇಡ ಎಂಬುದನ್ನು ತನಿಖಾಧಿಕಾರಿಗಳು ನಿರ್ಧರಿಸುತ್ತಾರೆ. ತನಿಖೆಯಲ್ಲಿ ನಾವ್ಯಾರೂ ಹಸ್ತಕ್ಷೇಪ ಮಾಡುವುದಿಲ್ಲ. ಬಿಜೆಪಿಗೆ ಮುನ್ನ ಧರ್ಮಸ್ಥಳದ ಪರ ಕಾಂಗ್ರೆಸ್ ▶ 6ನೇ ಪುಟಕ್ಕೆ



ವಾರ್ಷಿಕ ಫಾಸ್ಟ್‌ಟ್ಯಾಗ್ ಪಾಸ್‌ಗೆ ಚಾಲನೆ



ನವದೆಹಲಿ: ಖಾಸಗಿ ಕಾರುಗಳು, ಜೀಪ್‌ಗಳು ಮತ್ತು ವ್ಯಾನ್‌ಗಳಿಗೆ ವಾರ್ಷಿಕ ಫಾಸ್ಟ್‌ಟ್ಯಾಗ್ ಪಾಸ್‌ಗೆ (FASTag Annual Pass) ಇಂದು ಚಾಲನೆ ನೀಡಲಾಗಿದೆ. ಫಾಸ್ಟ್‌ಟ್ಯಾಗ್ ಆಧಾರಿತ ವಾರ್ಷಿಕ ಪಾಸ್‌ಗಳಿಗಾಗಿ ಒಂದು ದಿನಕ್ಕೂ ಮುಂಚಿತವಾಗಿ ಪೂರ್ವ–ಬುಕಿಂಗ್ ವ್ಯವಸ್ಥೆಯನ್ನು ಕೇಂದ್ರ ಸರ್ಕಾರ ಆರಂಭಿಸಿದೆ.

ಇದು ರೇಡಿಯೊ ಫ್ರೀಕ್ವೆನ್ಸಿ ಐಡೆಂಟಿಫಿಕೇಶನ್(RFID) ತಂತ್ರಜ್ಞಾನವನ್ನು ಬಳಸಿ, ವಾಹನಕ್ಕೆ ಲಿಂಕ್ ಮಾಡಲಾದ ಪ್ರಿಪೇಯ್ಡ್ ಖಾತೆಯಿಂದ ಸ್ವಯಂಚಾಲಿತವಾಗಿ ಟೋಲ್ ಶುಲ್ಕವನ್ನು ಕಡಿತಗೊಳಿಸುತ್ತದೆ.

ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್: ಕಾರುಗಳು, ಜೀಪ್‌ಗಳು ಮತ್ತು ವ್ಯಾನ್‌ಗಳಂತಹ ವಾಣಿಜ್ಯೇತರ ಖಾಸಗಿ ವಾಹನಗಳಿಗೆ ಮಾತ್ರ ಅನ್ವಯವಾಗುವ ಪ್ರಿಪೇಯ್ಡ್ ಪಾಸ್ ಆಗಿದೆ. ಟೋಲ್ ಪಾವತಿಗಳಿಗಾಗಿ ಫಾಸ್ಟ್ ಟ್ಯಾಗ್ ಕಾರ್ಡ್‌ಗಳನ್ನು ಪದೇ ಪದೆ ರೀಚಾರ್ಜ್ ಮಾಡುವ ಅಗತ್ಯ ಇರಲ್ಲ. ಆ ಮೂಲಕ ರಾಷ್ಟ್ರೀಯ ಹೆದ್ದಾರಿಗಳಲ್ಲಿ ತಡೆರಹಿತ ಪ್ರಯಾಣಕ್ಕೆ ಅವಕಾಶ ನೀಡುತ್ತದೆ.

ವಾರ್ಷಿಕ ಪಾಸ್ ರಾಷ್ಟ್ರೀಯ ಹೆದ್ದಾರಿ (NH) ಮತ್ತು ರಾಷ್ಟ್ರೀಯ ಎಕ್ಸ್‌ಪ್ರೆಸ್‌ವೇ (NE)ಟೋಲ್ ಪ್ಲಾಜಾಗಳಲ್ಲಿ ಮಾತ್ರ ಮಾನ್ಯವಾಗಿರುತ್ತದೆ. ಹೆದ್ದಾರಿ ಅಥವಾ ಎಕ್ಸ್‌ಪ್ರೆಸ್‌ವೇ ರಾಜ್ಯ ಅಥವಾ ಖಾಸಗಿಯಾಗಿದ್ದರೆ, ವಾರ್ಷಿಕ ಫಾಸ್ಟ್‌ಟ್ಯಾಗ್ ಪಾಸ್‌ನೊಂದಿಗೆ ಉಚಿತ ಪ್ರವೇಶಕ್ಕೆ ಅವಕಾಶ ದೊರೆಯದು.

ಪಾಸ್ ಖರೀದಿ: ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್‌ಗಾಗಿ ಮೀಸಲಾದ ಲಿಂಕ್ ರಾಜಮಾರ್ಗ್ ಯಾತ್ರಾ ಅಪ್ಲಿಕೇಶನ್‌ನಲ್ಲಿ (Rajmarg Yatra app)ಲಭ್ಯವಿದೆ. ಈ ಲಿಂಕ್ ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ಮತ್ತು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ (MoRTH) ▶ 6ನೇ ಪುಟಕ್ಕೆ

ಮೈಸೂರಲ್ಲಿ 390 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆ ಪ್ರಕರಣ

ಎನ್‌ಐಎ ತನಿಖೆಗೆ ಒಪ್ಪಿಸಲು ರಾಜ್ಯಪಾಲರ ಮಧ್ಯ ಪ್ರವೇಶಕ್ಕೆ ಮೈಸೂರು ಬಿಜೆಪಿ ಆಗ್ರಹ

ಈ ಸಂಬಂಧ ಶೀಘ್ರ ರಾಜ್ಯಪಾಲರಿಗೆ ಮನವಿ: ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ

ಮೈಸೂರು, ಆ.16(ಬಿಎಲ್‌ಯು)– ಮೈಸೂರಿನಲ್ಲಿ ಪತ್ತೆಯಾದ 390 ಕೋಟಿ ಮೌಲ್ಯದ ಡ್ರಗ್ಸ್ ಪ್ರಕರಣವನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವಹಿಸಲು ಮಧ್ಯ ಪ್ರವೇಶಿಸುವಂತೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿ ಮನವಿ ಮಾಡುತ್ತೇವೆ ಎಂದು ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ತಿಳಿಸಿದರು.

ಮೈಸೂರು ಬಿಜೆಪಿ ಕಚೇರಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಡ್ರಗ್ಸ್ ಜಾಲದಲ್ಲಿ ಸರ್ಕಾರದ ಪ್ರಭಾವಿಗಳ ಕೈವಾಡ ಇರುವ ಬಗ್ಗೆ ಅನುಮಾನವಿದೆ ಎಂದು ಆರೋಪಿಸಿದರು. ಸಾಂಸ್ಕೃತಿಕ ನಗರಿ ಮೈಸೂರು ಈಗ 'ಡ್ರಗ್ಸ್ ನಗರಿ'ಯಾಗಿ ಮಾರ್ಪಟ್ಟಿದೆ. ಮೈಸೂರಿನಲ್ಲಿ 390 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆಯಾಗಿದ್ದು, ಇದು ಇಡೀ ಕರ್ನಾಟಕದಲ್ಲೇ ಭಾರಿ ದೊಡ್ಡ ಡ್ರಗ್ಸ್ ಪತ್ತೆ ಕಾರ್ಯಾಚರಣೆಯಾಗಿದೆ. ಮುಂಬೈ ಪೊಲೀಸರು ಮೈಸೂರಿಗೆ ಬಂದು ಡ್ರಗ್ಸ್ ಜಾಲ ಬಯಲು ಮಾಡುವ ತನಕ ಮೈಸೂರು ಪೊಲೀಸರು ಏನು ಮಾಡುತ್ತಿದ್ದರು ಎಂದು ಪ್ರಶ್ನಿಸಿದ ರಘು ಕೌಟಿಲ್ಯ, ಮುಡಾ ಹಗರಣದ ನಂತರ ಮೈಸೂರಿನಲ್ಲಿ ಪತ್ತೆಯಾದ ಎರಡನೇ ಅತೀ ದೊಡ್ಡ ಹಗರಣ ಇದಾಗಿದೆ ಎಂದರು.

ಪ್ರಭಾವಿಗಳು ಇದರ ಹಿಂದಿದ್ದಾರೆ: ಪೊಲೀಸರನ್ನು ನಿಯಂತ್ರಿಸುವ ಪ್ರಭಾವಿಗಳು ಇದರ ಹಿಂದಿದ್ದಾರೆ. ನರಸಿಂಹರಾಜ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ ತಳವಾರ್ ಅವರನ್ನು ಅಮಾನತು ಮಾಡಿ ಕೇವಲ 24 ಗಂಟೆಯೊಳಗೆ ಅಮಾನತು ಆದೇಶ ವಾಪಸು ಪಡೆಯಲಾಯಿತು. ಈ ಬೆಳವಣಿಗೆ ಬಹಳಷ್ಟು ಅನುಮಾನಕ್ಕೆ ಕಾರಣವಾಗಿದೆ ಎಂದು ರಘು ಕೌಟಿಲ್ಯ ಆಪಾದಿಸಿದರು.

ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದ್ದು, ಗೃಹ ಇಲಾಖೆ ತನ್ನ ಕಾರ್ಯ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲವಾಗಿದೆ. ಡ್ರಗ್ಸ್ ಜಾಲದ ಹಿಂದೆ ಸರ್ಕಾರದ ಪ್ರಭಾವಿಗಳು ಭಾಗಿಯಾಗಿದ್ದಾರೆ. ಇದನ್ನು ಬಯಲು ಮಾಡಲು ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸಬೇಕು ಎಂದು ಆಗ್ರಹಿಸಿದರು.

390 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆಯಾದ ಮೇಲೆ ಮೈಸೂರು ಪೊಲೀಸರು ಇದರ ಬಗ್ಗೆ ತನಿಖೆ ▶ 6ನೇ ಪುಟಕ್ಕೆ



ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಗೋಷ್ಠಿಯಲ್ಲಿ ಮಾತನಾಡಿದರು.

> "ಅದೂ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಲ್ಲಿ ಈ ಪ್ರಕರಣ ನಡೆದಿದೆ. ಇದರ ಗಂಭೀರತೆ ಅರಿತು ಸಿದ್ದರಾಮಯ್ಯ ಅವರು ಈ ಪ್ರಕರಣವನ್ನು ಎನ್‌ಐಎ ತನಿಖೆಗೆ ಒಪ್ಪಿಸಬೇಕು. ಯುವ ಪೀಳಿಗೆ ಡ್ರಗ್ಸ್ ಜಾಲಕ್ಕೆ ಸಿಲುಕಿ ತಮ್ಮ ಭವಿಷ್ಯ ಹಾಳು ಮಾಡಿಕೊಳ್ಳುತ್ತಿದೆ. ಒಂದು ಬಾರಿ ಡ್ರಗ್ಸ್ ಸೇವಿಸಿದರೆ ಚಕ್ರವ್ಯೂಹದೊಳಗೆ ಸಿಲುಕಿದಂತೆ. ಹೊರಗೆ ಬರಲು ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಡ್ರಗ್ಸ್ ಜಾಲವನ್ನು ಮಟ್ಟ ಹಾಕಬೇಕು. –ರಘು ಕೌಟಿಲ್ಯ

ಮಕ್ಕಳಿಗೆ ನೆರವಾಗುವ ಮೂಲಕ ಹುಯಿಲಾಳು ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವ



ಹುಯಿಲಾಳು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಸ್ವಾತಂತ್ರ್ಯೋತ್ಸವ ದಿನಾಚರಣೆ ವೇಳೆ ಶ್ರೀ ಮನೆ ಮಂಚಮ್ಮ ದೇವಸ್ಥಾನದ ಟ್ರಸ್ಟ್ ವತಿಯಿಂದ ಜಮಖಾನ ನೀಡಲಾಯಿತು.

ಮೈಸೂರು, ಆ.16(ಎಸ್‌ಬಿಡಿ)– ತಾಲೂಕಿನ ಹುಯಿಲಾಳು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 79ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಗ್ರಾಪಂ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ, ಸಮಾರಂಭಗಳಲ್ಲಿ ಮಕ್ಕಳು ಕುಳಿತುಕೊಳ್ಳಲು ಅಗತ್ಯವಾಗಿದ್ದ ಜಮಖಾನವನ್ನು ಶ್ರೀ ಮನೆ ಮಂಚಮ್ಮ ದೇವಸ್ಥಾನದ ಟ್ರಸ್ಟ್ ವತಿಯಿಂದ ನೀಡಿದರು. ಇದೇ ವೇಳೆ ಮಾತನಾಡಿದ ಅವರು, ಶ್ರೀ ಮನೆ ಮಂಚಮ್ಮ ದೇವಸ್ಥಾನದ ಟ್ರಸ್ಟ್ ವತಿಯಿಂದ ಕಂಪ್ಯೂಟರ್ ಟೇಬಲ್, ಚೇರ್, ನೋಟ್ ಪುಸ್ತಕಗಳು ಹೀಗೆ ಪ್ರತಿ ವರ್ಷ ಒಂದೊಂದು ಅಗತ್ಯತೆಯನ್ನು ಪೂರೈಸುವ ಪ್ರಯತ್ನ ಮಾಡಿಕೊಂಡು ಬರಲಾಗಿದೆ. ಶಾಲೆಯ ಆಡಳಿತ ಮಂಡಳಿ ಹಾಗೂ ಗ್ರಾಮಸ್ಥರು ಸಹಕಾರ ನೀಡಿದರೆ ಮುಂದಿನ ವರ್ಷ ಬಯಲು ರಂಗ ಮಂದಿರ ನಿರ್ಮಾಣಕ್ಕೆ ಬದ್ಧರಾಗಿದ್ದೇವೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯ ನಾಗಸುಂದರ್, ಎಸ್‌ಡಿಎಂಸಿ ಅಧ್ಯಕ್ಷ ಮಂಜು, ಸಿಂಡಿಕೇಟ್ ಸದಸ್ಯ ಶಂಕರ್, ಮುಖಂಡ ಬೀರೇಶ್ ಕಿಂಗ್, ಸಹ ಶಿಕ್ಷಕರಾದ ರತ್ನಮ್ಮ, ತುಳಸಿ, ಗ್ರಾಪಂ ಸದಸ್ಯೆ ಶೃತಿ, ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿ ಲಕ್ಷ್ಮೀ, ಅಧ್ಯಕ್ಷೆ ಪಲ್ಲವಿ, ಉಪಾಧ್ಯಕ್ಷೆ ಲಕ್ಷ್ಮೀ, ನಿರ್ದೇಶಕರು, ಮಹಿಳಾ ಸಂಘದವರು, ಗ್ರಾಮಸ್ಥರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ದಸರಾ ಉಪಸಮಿತಿಗಳಲ್ಲಿ ಸಂಘ–ಸಂಸ್ಥೆಗಳ ಪದಾಧಿಕಾರಿಗಳಿಗೆ ಸ್ಥಾನ ಕಲ್ಪಿಸಲು ಆಗ್ರಹ

ಮೈಸೂರು,ಆ.16(ಎಂಕೆ)–ಪ್ರಸಕ್ತ ಸಾಲಿನ ದಸರಾ ಮಹೋತ್ಸವದ ಉಪ ಸಮಿತಿಗಳಲ್ಲಿ ಸಂಘ–ಸಂಸ್ಥೆಗಳ ಪದಾಧಿಕಾರಿಗಳಿಗೆ ಅವಕಾಶ ಮಾಡಿಕೊಡುವಂತೆ ಸರ್ವ ಜನಾಂಗ ಹಿತರಕ್ಷಣಾ ವೇದಿಕೆ ಆಗ್ರಹಿಸಿದೆ.


ದಸರಾ ಮಹೋತ್ಸವ ಆಚರಣೆಯ ಉಪಸಮಿತಿಗಳಲ್ಲಿ ವಿವಿಧ ರಾಜಕೀಯ ಪಕ್ಷಗಳ ಪದಾಧಿಕಾರಿಗಳು, ಸಂಘ– ಸಂಸ್ಥೆಗಳ ಪದಾಧಿಕಾರಿಗಳನ್ನು ನೇಮಕ ಮಾಡಲಾಗುತ್ತಿತ್ತು. ಆದರೆ, ಇತ್ತೀಚೆಗೆ ಏಕಪಕ್ಷೀಯವಾಗಿ ಉಪ ಸಮಿತಿ ಪದಾಧಿಕಾರಿಗಳನ್ನು ನೇಮಕ ಮಾಡಿ, ಬೇರೆ ಪಕ್ಷಗಳು ಮತ್ತು ಸಂಘ–ಸಂಸ್ಥೆ ಪದಾಧಿಕಾರಿಗಳನ್ನು ಕೈಬಿಡಲಾಗುತ್ತಿದೆ. ದಸರಾ ಯಶಸ್ಸಿನ ದೃಷ್ಟಿಯಿಂದ ಎಲ್ಲಾ ಪಕ್ಷ ಸಂಘ–ಸಂಸ್ಥೆಗಳ ಪದಾಧಿಕಾರಿಗಳಿಗೂ ಉಪಸಮಿತಿಗಳ ರಚನೆಯಲ್ಲಿ ಅವಕಾಶ ಮಾಡಿಕೊಡಬೇಕು ಎಂದು ಪ್ರಕಟಣೆ ಮೂಲಕ ಒತ್ತಾಯಿಸಿದೆ.

ವಿಕ್ರಾಂತ್ ಟೈರ್ಸ್ ಎಂಪ್ಲಾಯೀಸ್ ಯೂನಿಯನ್‌ನ ಪದಾಧಿಕಾರಿಗಳು



ವಿಕ್ರಾಂತ್ ಟೈರ್ಸ್ ಎಂಪ್ಲಾಯೀಸ್ ಯೂನಿಯನ್‌ನ 2025–27ನೇ ಸಾಲಿನ ನೂತನ ಪದಾಧಿಕಾರಿಗಳು. ಬಿ.ಆರ್.ಕಾಂತರಾಜು–ಅಧ್ಯಕ್ಷ, ಹೆಚ್.ಬಿ.ಕೃಷ್ಣ ಹಾಗೂ ಎಸ್.ಚೌಡಯ್ಯ–ಉಪಾಧ್ಯಕ್ಷರು, ಬಿ.ಚನ್ನಕೇಶವ–ಪ್ರಧಾನ ಕಾರ್ಯದರ್ಶಿ, ಎಂ.ನಾಗರಾಜು, ಹೆಚ್.ಕೆ.ಅರವಿಂದ–ಜಂಟಿ ಕಾರ್ಯದರ್ಶಿಗಳು, ಮಂಜುನಾಥ್–ಖಜಾಂಚಿ.

ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ಮೊದಲ ಪೀಠಾಧಿಪತಿ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ನಿಧನ



ಬೆಂಗಳೂರು, ಆ.16– ಮೈಸೂರು–ಬೆಂಗಳೂರು ರಸ್ತೆಯ ಕೆಂಗೇರಿ ಬಳಿ ಇರುವ ವಿಶ್ವ ಒಕ್ಕಲಿಗ ಮಹಾಸಂಸ್ಥಾನದ ಪ್ರಥಮ ಮಠಾಧೀಶರಾದ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ(82) ಶುಕ್ರವಾರ ಮಧ್ಯರಾತ್ರಿ ನಿಧನರಾದರು.

ವಯೋಸಹಜ ಕಾಯಿಲೆಯಿಂದ ಶ್ರೀ ಚಂದ್ರಶೇಖರನಾಥ ಸ್ವಾಮೀಜಿಯವರು ಬಳಲುತ್ತಿದ್ದರು. ಸ್ವಾಮೀಜಿಗಳ ಪಾರ್ಥಿವ ಶರೀರವನ್ನು ಮಠದ ಆವರಣದಲ್ಲಿ ಇಡಲಾಗಿತ್ತು. ಅಪಾರ ಸಂಖ್ಯೆಯಲ್ಲಿ ಭಕ್ತರು, ಗಣ್ಯರು ಅಂತಿಮ ದರ್ಶನ ಪಡೆದರು. ಅಂತಿಮ ವಿಧಿ ವಿಧಾನಗಳನ್ನು ಮಠದ ಆವರಣದಲ್ಲಿ ಶನಿವಾರವೇ ನೆರವೇರಿಸಲಾಯಿತು.

ಶ್ರೀ ಚಂದ್ರಶೇಖರನಾಥ ಸ್ವಾಮೀಜಿಯವರು, 2024ರ ಡಿಸೆಂಬರ್‌ನಲ್ಲಿ ನಡೆದ ಸಮಾರಂಭದಲ್ಲಿ ಶ್ರೀ ನಿಶ್ಚಲಾನಂದ ನಾಥ ಸ್ವಾಮೀಜಿಯವರನ್ನು ತಮ್ಮ ಉತ್ತರಾಧಿಕಾರಿಯಾಗಿ ನೇಮಕ ಮಾಡಿದ್ದರು. ನಿಶ್ಚಲಾನಂದನಾಥ ಸ್ವಾಮೀಜಿಯವರು ಹಿರಿಯ ಮಠಾಧೀಶರಿಗೆ ಸಂಬಂಧಿಸಿದ ಆಚರಣೆಗಳು, ಪೂಜಾ ಕೈಂಕರ್ಯಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದರು. 2024ರ ಜೂನ್‌ನಲ್ಲಿ ಸಮಾರಂಭವೊಂದರಲ್ಲಿ ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ದೊಡ್ಡ ಮನಸ್ಸು ಮಾಡಬೇಕೆಂದು ಸಾರ್ವಜನಿಕವಾಗಿ ಹೇಳುವುದರೊಂದಿಗೆ ಶ್ರೀಗಳು ಚರ್ಚೆಗೆಡೆ ಮಾಡಿಕೊಟ್ಟಿದ್ದುದು ವಿವಾದಕ್ಕೂ ಕಾರಣವಾಗಿತ್ತು

ಆಟೋನಗರ ಮೈಸೂರು ಮೋಟಾರ್ ಮೆಕ್ಯಾನಿಕ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎನ್.ಮಹೇಶ್‌ರಾಜೇ ಅರಸ್



ಆಟೋನಗರ ಮೈಸೂರು ಮೋಟಾರ್ ಮೆಕ್ಯಾನಿಕ್ಸ್ ಅಸೋಸಿಯೇಷನ್ ಅಧ್ಯಕ್ಷರು ಹಾಗೂ ಆಲನಹಳ್ಳಿ ನಿವಾಸಿ ಬಿ.ಎನ್.ಮಹೇಶ್ ರಾಜೇ ಅರಸ್ (67) ಶನಿವಾರ ಬೆಳಗ್ಗೆ ನಿಧನರಾದರು. ಶ್ರೀಯುತರು ನಗರ ಬಿಜೆಪಿ ಘಟಕದ ಉಪಾಧ್ಯಕ್ಷರಾಗಿ ಮತ್ತು ಸ್ಥಳಾಂತರಗೊಂಡ ಮೆಕ್ಯಾನಿಕ್‌ಗಳಿಗಾಗಿ ಆಟೋನಗರ ನಿರ್ಮಾಣಕ್ಕೆ ಹೋರಾಡಿದ್ದರು. ಮೃತರು ಇಬ್ಬರು ಪುತ್ರಿಯರು, ಅಳಿಯ, ಇಬ್ಬರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ನಾಳೆ (ಭಾನುವಾರ) ಅರಸು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಇವರ ನಿಧನಕ್ಕೆ ಬಿಜೆಪಿ ಹಿರಿಯ ಮುಖಂಡ ಬಿ.ಪಿ.ಮಂಜುನಾಥ್, ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಆರ್.ರಘು ಕೌಟಿಲ್ಯ ಸಂತಾಪ ಸೂಚಿಸಿದ್ದಾರೆ.

ಸೈಯದ್ ಸಯೀದ್ ಅಹಮದ್



ಕುವೈತ್‌ನಲ್ಲಿರುವ ಆಲ್ ಮವಾಶಿ ಟ್ರೇಡಿಂಗ್ ಕಂಪನಿ ನಿವೃತ್ತ ನೌಕರ ಮತ್ತು ಮೈಸೂರಿನ ಉದಯಗಿರಿ ನಿವಾಸಿ ಸೈಯದ್ ಸಯೀದ್ ಅಹಮದ್ (60), ಆ.14ರಂದು ನಿಧನರಾದರು. ಮೃತರು ಪತ್ನಿ, ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಂಜನಗೂಡಿನ ಸ್ಮಶಾನದಲ್ಲಿ ಅದೇ ದಿನ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಕ್ಬಾಲ್ ಖಾನ್



ನಿವೃತ್ತ ಡಿಸಿಪಿ ಮತ್ತು ಉದಯಗಿರಿ ನಿವಾಸಿ ಇಕ್ಬಾಲ್ ಖಾನ್ (78) ಆ.14ರಂದು ನಿಧನರಾದರು. ಮೃತರು ಪತ್ನಿ, ಪುತ್ರ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ನಮಾಜ್–ಇ–ಜನಾಜ ಆ. 15 ರಂದು ಲಷ್ಕರ್ ಮೊಹಲ್ಲಾದ ಮಸೀದಿ ಕುರ್ಷಿದಿಯಾದಲ್ಲಿ ನಡೆದ ಬಳಿಕ ರಾಜೇಂದ್ರನಗರ (ಕೆಸರೆ) ಮುಸ್ಲಿಂ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆನ್‌ಲೈನ್‌ನಲ್ಲಿ ಹಾಲು ಆರ್ಡರ್ ಮಾಡಿ 18.5 ಲಕ್ಷ ರೂ. ಕಳೆದುಕೊಂಡ ಮಹಿಳೆ



ಮುಂಬೈ: ಇಲ್ಲಿನ 71 ವರ್ಷದ ಮಹಿಳೆಯೊಬ್ಬರು ಆನ್‌ಲೈನ್‌ನಲ್ಲಿ ಒಂದು ಲೀಟರ್ ಹಾಲನ್ನು ಆರ್ಡರ್ ಮಾಡಲು ಪ್ರಯತ್ನಿಸುವಾಗ ತಮ್ಮ ಬ್ಯಾಂಕ್ ಖಾತೆಗಳಿಂದ 18.5 ಲಕ್ಷ ರೂ.ಗಳನ್ನು ಕಳೆದುಕೊಂಡಿದ್ದಾರೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ವಡಾಲಾ ನಿವಾಸಿಯಾಗಿರುವ ಮಹಿಳೆ ಈ ತಿಂಗಳ ಆರಂಭದಲ್ಲಿ ಆನ್‌ಲೈನ್ ವಿತರಣಾ ಅಪ್ಲಿಕೇಶನ್‌ನಿಂದ ಹಾಲನ್ನು ಆರ್ಡರ್ ಮಾಡಲು ಪ್ರಯತ್ನಿಸಿದಾಗ 2 ದಿನಗಳಲ್ಲಿ ಅವರ ಬ್ಯಾಂಕ್ ಖಾತೆಯಲ್ಲಿದ್ದ ಹಣವನ್ನು ದೋಚಿ ವಂಚಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆ.4ರಂದು ಹಾಲು ಕಂಪನಿಯ ಕಾರ್ಯನಿರ್ವಾಹಕ ದೀಪಕ್ ಎಂದು ಗುರುತಿಸಿಕೊಂಡ ವ್ಯಕ್ತಿಯಿಂದ ಮಹಿಳೆಗೆ ಕರೆ ಬಂದಿದ್ದು, ಹಾಲನ್ನು ಆರ್ಡರ್ ಮಾಡಲು ವಿವರಗಳನ್ನು ನೀಡುವಂತೆ ಅವರ ಮೊಬೈಲ್‌ಗೆ ಲಿಂಕ್ ಕಳುಹಿಸಿದ್ದಾರೆ. ಕರೆಯನ್ನು ಕಡಿತಗೊಳಿಸದೆ ಲಿಂಕ್ ಅನ್ನು ಕ್ಲಿಕ್ ಮಾಡುವಂತೆ ಮತ್ತು ಮುಂದಿನ ಸೂಚನೆಗಳನ್ನು ಅನುಸರಿಸಲು ಮಹಿಳೆಗೆ ಸೂಚಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಕರೆ ಒಂದು ಗಂಟೆಗೂ ಹೆಚ್ಚು ಕಾಲ ಮುಂದುವರಿದಿದ್ದರಿಂದ, ಬೇಸರಗೊಂಡ ಮಹಿಳೆ ಫೋನ್ ಅನ್ನು ಸ್ಥಗಿತಗೊಳಿಸಿದ್ದಾರೆ. ಮರುದಿನ ಅದೇ ಆರೋಪಿಯಿಂದ ಮಹಿಳೆಗೆ ಫೋನ್ ಕರೆ ಬಂದಿದೆ ಮತ್ತು ಆತ ಮಹಿಳೆಯಿಂದ ಹೆಚ್ಚಿನ ವಿವರಗಳನ್ನು ಸಂಗ್ರಹಿಸಿದ್ದಾನೆ ಎಂದು ಅಧಿಕಾರಿ ಹೇಳಿದರು.

ಮುಂದಿನ ದಿನಗಳಲ್ಲಿ ಮಹಿಳೆ ಬ್ಯಾಂಕ್‌ಗೆ ಭೇಟಿ ನೀಡಿದಾಗ ತಮ್ಮ ಒಂದು ಖಾತೆಯಿಂದ 1.7 ಲಕ್ಷ ರೂ.ಗಳನ್ನು ದೋಚಲಾಗಿದೆ ಎಂಬುದು ತಿಳಿದು ಬಂದಿದೆ. ಮತ್ತಷ್ಟು ಪರಿಶೀಲಿಸಿದಾಗ ಅವರ ಇತರ ಎರಡು ಬ್ಯಾಂಕ್ ಖಾತೆಗಳಿಂದಲೂ ಹಣ ಖಾಲಿಯಾಗಿದೆ. ಪೊಲೀಸರ ಪ್ರಕಾರ ಮಹಿಳೆ ಎಲ್ಲಾ ಮೂರು ಬ್ಯಾಂಕ್ ಖಾತೆಗಳಿಂದ ದೂರುದಾರರು ಒಟ್ಟು 18.5 ಲಕ್ಷ ರೂ.ಗಳನ್ನು ಕಳೆದುಕೊಂಡಿದ್ದಾರೆ. ಮಹಿಳೆ ತನ್ನ ಮೊಬೈಲ್ ಫೋನ್‌ಗೆ ಬಂದ ಲಿಂಕ್ ಅನ್ನು ಕ್ಲಿಕ್ ಮಾಡಿದ ನಂತರ ಆರೋಪಿಯು ದೂರುದಾರರ ಫೋನ್ ಅನ್ನು ಹ್ಯಾಕ್ ಮಾಡುವಲ್ಲಿ ಯಶಸ್ವಿಯಾಗಿದ್ದಾನೆ ಎಂದು ಆರೋಪಿಸಲಾಗಿದೆ. ದೂರಿನ ಆಧಾರದ ಮೇರೆಗೆ ಪೊಲೀಸರು ಈ ವಾರದ ಆರಂಭದಲ್ಲಿ ಪ್ರಕರಣ ದಾಖಲಿಸಿದ್ದಾರೆ ಮತ್ತು ತನಿಖೆ ನಡೆಯುತ್ತಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ದಿವಂಗತ ಸೋನಿ ಕರೀಗೌಡ ಅವರ 26ನೇ ಪುಣ್ಯಸ್ಮರಣೆ

ಬಸವಮಾರ್ಗ ವ್ಯಸನ ಮುಕ್ತ–ಪುನರ್ವಸತಿ ಕೇಂದ್ರದಿಂದ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಆ.16(ಬಿಎಲ್‌ಯು)– ದಿವಂಗತ ಸೋನಿ ಕರೀಗೌಡ ಅವರ 26ನೇ ಪುಣ್ಯಸ್ಮರಣೆ ಅಂಗವಾಗಿ ಬಸವಮಾರ್ಗ ವ್ಯಸನ ಮುಕ್ತ ಮತ್ತು ಪುನರ್ವಸತಿ ಕೇಂದ್ರ ನಗರದ ಕುಕ್ಕರಹಳ್ಳಿ ಶಾಲಾ ಮಕ್ಕಳು ಹಾಗೂ ಶಿಕ್ಷಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಖಾಸಗಿ ಆಸ್ಪತ್ರೆ ವೈದ್ಯರು ಆರೋಗ್ಯ ತಪಾಸಣೆ ಹಾಗೂ ಕಣ್ಣಿನ ಪರೀಕ್ಷೆ ಮಾಡಿದರು. ಈ ವೇಳೆ ಮಾತನಾಡಿದ ಬಸವಮಾರ್ಗ ಫೌಂಡೇಷನ್ ಅಧ್ಯಕ್ಷ ಎಸ್.ಬಸವರಾಜು ಅವರು, ಮನುಷ್ಯನಿಗೆ ನಿಜವಾದ ಸಂಪತ್ತು ಅಂದರೆ ಆರೋಗ್ಯ, ಆರೋಗ್ಯ ಸರಿ ಇಲ್ಲದಿದ್ದರೆ ಎಷ್ಟೆ ಆಸ್ತಿ ಇದ್ದರೂ ಅದು ಪ್ರಯೋಜನಕ್ಕೆ ಬರುವುದಿಲ್ಲ. ಆಧುನಿಕ ಜೀವನ ಶೈಲಿ ಹಾಗೂ ಒತ್ತಡದ ಬದುಕಿನಿಂದ ಪ್ರತಿಯೊಬ್ಬರಲ್ಲೂ ಆರೋಗ್ಯ ಸಮಸ್ಯೆ ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ಚಿಕಿತ್ಸೆ ಪಡೆಯಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಮಾತನಾಡಿದ ಶಾಲೆಯ ಮುಖ್ಯ ಶಿಕ್ಷಕ ಚಂದ್ರ ಅವರು, ಹೊಟ್ಟೆನೋವು, ತಲೆನೋವು ಸೇರಿದಂತೆ ಹಲವು ಕಾರಣ ನೀಡಿ ವಿದ್ಯಾರ್ಥಿಗಳು ಶಾಲೆಗೆ ಗೈರಾಗುತ್ತಿದ್ದಾರೆ. ಈ ಹಿನ್ನೆಲೆ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಹೇಳಿದರು.

ಬಸವಮಾರ್ಗ ಫೌಂಡೇಷನ್‌ನ ಯೋಗ ಶಿಕ್ಷಕ ಹೆಚ್.ಪಿ.ನವೀನ್‌ಕುಮಾರ್, ವೈದ್ಯ ಸಿಬ್ಬಂದಿಗಳಾದ ನಿಂಗರಾಜು, ದೀಪಿಕಾ, ಪೂಜಾ, ನಿತಿನ್, ಕಿಶನ್, ಇಸ್ಮಿತಾ, ಅಭಿನವ್ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.



ದಿವಂಗತ ಸೋನಿ ಕರೀಗೌಡ ಅವರ 26ನೇ ಪುಣ್ಯಸ್ಮರಣೆ ಅಂಗವಾಗಿ ಬಸವಮಾರ್ಗ ವ್ಯಸನ ಮುಕ್ತ ಮತ್ತು ಪುನರ್ವಸತಿ ಕೇಂದ್ರ, ನಗರದ ಕುಕ್ಕರಹಳ್ಳಿ ಶಾಲಾ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗೆ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿತ್ತು.

ಬಿಜೆಪಿ ಸೇರ್ಪಡೆ...




ವಿ.ಶ್ರೀನಿವಾಸ್ ಪ್ರಸಾದ್ ಅಭಿಮಾನಿಗಳ ಬಳಗದ ಅಧ್ಯಕ್ಷ ಎಂ.ರಾಜಕುಮಾರ್, ಸಂಸದ ಯದುವೀರ್ ನೇತೃತ್ವದಲ್ಲಿ ಬಿಜೆಪಿ ಸೇರ್ಪಡೆಗೊಂಡರು. ಈ ವೇಳೆ ಮಾಜಿ ಶಾಸಕ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಉಪ ಮೇಯರ್ ಶೈಲೇಂದ್ರ ಕುಮಾರ್, ಗ್ರಾಮಾಂತರ ಅಧ್ಯಕ್ಷ ಕುಂಬರಳ್ಳಿ ಸುಬ್ಬಣ್ಣ ಇನ್ನಿತರರಿದ್ದರು.

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ...



ಹಿನಕಲ್‌ನ ಸರ್ಕಾರಿ ಪ್ರೌಢಶಾಲೆಯಲ್ಲಿ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು. ಈ ವೇಳೆ ದಿವಂಗತ ಬಸವೇಗೌಡರವರ ಸ್ಮರಣಾರ್ಥ ಎಸ್ಸೆಸ್ಸೆಲ್ಸಿಯಲ್ಲಿ ಉನ್ನತ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಿ, ಸನ್ಮಾನಿಸಲಾಯಿತು. ಮುಖಂಡರಾದ ಹೆಚ್.ಸಿ.ರಾಜು, ಕೇಬಲ್ ಪಾಪಣ್ಣ, ಹಿನಕಲ್ ಗಣೇಶ್, ಸಿದ್ದಾಚಾರಿ, ವೆಂಕಟೇಶ್, ಎಸ್.ಡಿ.ಎಂ.ಸಿ. ಅಧ್ಯಕ್ಷ ಶಿವಪ್ರಸಾದ್, ಮುಖ್ಯೋಪಾಧ್ಯಾಯಿನಿ ಪ್ರಮೀಳ, ನಿವೃತ್ತ ಶಿಕ್ಷಕಿ ಚಿಂತಾಯಿ, ಸಹ ಶಿಕ್ಷಕರು ಇನ್ನಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.08.2025 ಭಾನುವಾರ, ಮಳೆ ನಕ್ಷತ್ರ: ಮಖ 17.08.2025 ರಿಂದ 30.08.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಕೃತ್ತಿಕ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರೀ, ವ್ಯಾಖ್ಯಾನ–ಡಾ.ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು– ಸಿ.ಎಸ್. ನಂದಿತಾ, 8.30 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ– ಮಕ್ಕಳನ್ನು ಕಾಡುವ ಮಧುಮೇಹ ಮತ್ತು ಅದಕ್ಕೆ ಚಿಕಿತ್ಸೆ ಕುರಿತು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಹಾಗೂ ಚೆಲುವಾಂಬ ಆಸ್ಪತ್ರೆಯ ಮಕ್ಕಳ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಹಾಗೂ ಶಿಶು ಮತ್ತು ಹದಿಹರೆಯದವರ ಎಂಡೋಕ್ರೈನಾಲಜಿಸ್ಟ್ ಡಾ.ಅಕ್ಷತಾ.ಎ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಕೇಳಿಗಿಳಿಗಳೇ–ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH TRISH and Balty boy ನಾವು ಭಾರತೀಯರು–ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ–ಚೈತನ್ಯ ಚಿಲುಮೆ–ಉದಯೋನ್ಮುಖ ಗಾಯಕಿ ಲಹರಿ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ: ದಿಗ್ವಿಜಯ್ ಬಿ., 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.00 ವನಿತಾ ವಿಹಾರ, 12.35 ದೇವರನಾಮ, 12.45–ಜನಪದ ಸಂಗೀತ: ಮಂಡ್ಯದ ಕಸಲಗೆರೆಯ ಕೆಂಪಮ್ಮ ಮತ್ತು ಸಂಗಡಿಗರಿಂದ ಭೈರವನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿಯೋಜನೆಗಳ ಸರಣಿ, 1.20 ಭಾವಗೀತೆಗಳು–ಡಾ.ರೋಹಿಣಿ ಮೋಹನ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ ಚಂದು, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ–ಶಿವಪಂಚಾಕ್ಷರಿ ಮಹಿಮೆ, ಪ್ರಸ್ತುತಿ–ಪುತ್ತೂರಿನ ಬೆಟ್ಟಂಪಾಡಿಯ ಕರ್ನಾಟಕ ಯಕ್ಷಭಾರತಿ ಕಲಾವಿದರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ನಿನಾದ ಬಾನುಲಿ ಸರಣಿ, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಕೊಡಿಯಾಲದ ಯು.ಆರ್.ನಾರಾಯಣಯ್ಯ, 9.30 ರಾಷ್ಟ್ರೀಯ ನಾಟಕ, 10.00 ರವಿವಾಸರೀಯ ಅಖಿಲ ಭಾರತ ಸಂಗೀತ ಸಭಾ–ಅದ್ನಾನ್ ಖಾನ್–ಸಿತಾರ್ ವಾದನ

■ **ಶ್ರೀ ಕೃಷ್ಣ ಯಾದವ ಗೊಲ್ಲರ ಬಳಗ :** ಶ್ರೀ ಕೃಷ್ಣಜನ್ಮಾಷ್ಟಮಿ, ಶ್ರೀ ಮಹಾಗಣಪತಿ ಮತ್ತು ಶ್ರೀ ಆಂಜನೇಯಸ್ವಾಮಿ ವಿಗ್ರಹ ಪ್ರತಿಷ್ಠಾಪನೆ, ಬೆಳಗ್ಗೆ 8.30ಕ್ಕೆ ಶ್ರೀವೇಣುಗೋಪಾಲಸ್ವಾಮಿಗೆ ವಿಶೇಷ ಪೂಜೆ, ಮೊಸರು ಕುಡಿಕೆ ಒಡೆಯುವ ಕಾರ್ಯಕ್ರಮ, ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ, ಸ್ಥಳ: ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ, ಕೆ.ಆರ್. ಮೊಹಲ್ಲಾ.

■ **ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ :** ಪ್ರತಿಭಾ ಪುರಸ್ಕಾರ, ಸಾನ್ನಿಧ್ಯ : ಶಿವ ಸುಜ್ಞಾನತೀರ್ಥ ಮಹಾಸ್ವಾಮೀಜಿ, ಉದ್ಘಾಟನೆ : ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ, ಉಪಸ್ಥಿತರು : ವಿಧಾನಪರಿಷತ್ ಮಾಜಿ ಸದಸ್ಯ ರಘು ಆಚಾರ್, ಅಧ್ಯಕ್ಷತೆ : ವಿಶ್ವಕರ್ಮ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎನ್. ನಂದಕುಮಾರ್, ಸ್ಥಳ: ಜಗನ್ಮೋಹನ ಅರಮನೆ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9ರಿಂದ ಮೈಗ್ರೇನ್‌ಗೆ ಪರಿಹಾರ–ಆಕ್ಯುಪಂಕ್ಚರ್ ಚಿಕಿತ್ಸೆ, ಯಾವುದೇ ತರಹದ ತಲೆನೋವಿಗೆ, ಆರ್ಥರೈಟಿಸ್‌ಗೆ, ಹೈಪೋಥೈರಾಯ್ಡಿಸಮ್, ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ಸ್ಥಳ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ. ಆಲನಹಳ್ಳಿ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯವರ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ. ಬೆಳಗ್ಗೆಯಿಂದ.

■ **ಪುರಿ ಜಗನ್ನಾಥ ಕಲ್ಚರಲ್ ಅಂಡ್ ವೆಲ್‌ಫೇರ್ ಟ್ರಸ್ಟ್ :** ಜಗನ್ನಾಥ ದೇವಸ್ಥಾನದ ವಾರ್ಷಿಕೋತ್ಸವ, ಬೆಳಗ್ಗೆ 9 ರಿಂದ ಪೂಜಾ, ಅಭಿಷೇಕ, ಭಜನೆ, ಪ್ರಸಾದ ವಿನಿಯೋಗ, ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಪ್ರಭು ಜಗನ್ನಾಥ ದೇವಸ್ಥಾನ, ವಿದ್ಯಾರಣ್ಯಪುರಂ ಮುಖ್ಯ ರಸ್ತೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಇಸುಬು ರೋಗ ಮತ್ತು ಹುಳಕಡ್ಡಿ, ಬೆರಳು ಸಂದಿಯ ಫಂಗಲ್ ಇನ್ಫೆಕ್ಷನ್, ಕಿಟಿಬ ಕುಷ್ಠಕ್ಕೆ ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10 ರಿಂದ.

■ **ಭಾರತ ಕಮ್ಯೂನಿಸ್ಟ್ ಪಕ್ಷ :** ಮೈಸೂರು ಜಿಲ್ಲಾ ಸಮ್ಮೇಳನ, ಉದ್ಘಾಟನೆ : ಸಿಪಿಐ ರಾಜ್ಯ ಕಾರ್ಯದರ್ಶಿ ಕಾ. ಬಿ. ಅಮ್ಜದ್, ಮುಖ್ಯ ಅತಿಥಿಗಳು : ಹಿರಿಯ ಮುಖಂಡ ಕಾಂ. ಹೆಚ್.ಆರ್. ಶೇಷಾದ್ರಿ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ

■ **ಶ್ರೀ ವಿದ್ಯಾಭಾರತಿ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ :** ಸರ್ವ ಸದಸ್ಯರ ಮಹಾಸಭೆ, ಸ್ಥಳ: ಗಾನಭಾರತೀ ವೀಣೆ ಶೇಷಣ್ಣ ಭವನ, ಕುವೆಂಪುನಗರ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ಯುವ ರಕ್ಷಣಾ ವೇದಿಕೆ :** ಮೈಸೂರು ಜಿಲ್ಲಾ ಘಟಕ ಉದ್ಘಾಟನೆ, ಸಾಂಸ್ಕೃತಿಕ ಉತ್ಸವ ಹಾಗೂ ರಾಜ್ಯ ಮಟ್ಟದ ಕರ್ನಾಟಕ ಸೇವಾ ರತ್ನ ಬೆಳ್ಳಿ ಪದಕ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸಚಿವ ಶಿವರಾಜ್ ಎಸ್. ತಂಗಡಗಿ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಶಾಸಕ ತನ್ವೀರ್ ಸೇಠ್, ಪೊಲೀಸ್ ಆಯುಕ್ತರಾದ ಶ್ರೀಮತಿ ಸೀಮಾ ಲಾಟ್ಕರ್, ಚುಂಚೇಗೌಡ, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಮೇಯರ್ ಶಿವಕುಮಾರ್, ಸ್ಥಳ: ಅಮೃತ ಮಹೋತ್ಸವ ಭವನ, ಜೆ.ಕೆ. ಮೈದಾನ, ಬೆಳಗ್ಗೆ 10.30ಕ್ಕೆ.

■ **ಖದ್ದರ್ ಕೋ ಆಪರೇಟಿವ್ ಸೊಸೈಟಿ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎನ್. ಶ್ರೀನಿವಾಸ್, ಸ್ಥಳ: ಸಮುದಾಯ ಭವನ, ನಾಲಾಬೀದಿ, ಬೆಳಗ್ಗೆ 10.30ಕ್ಕೆ.

■ **ಸಾವರ್ಕರ್ ಪ್ರತಿಷ್ಠಾನ ಮೈಸೂರು :** ಸಾವರ್ಕರ್ ಕಲ್ಪನೆಯ ಭಾರತೀಯ ಸೇನೆ ಮತ್ತು ಆಪರೇಷನ್ ಸಿಂಧೂರ್, ಮುಖ್ಯ ಭಾಷಣ : ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಮುಖ್ಯ ಅತಿಥಿಗಳು : ಆದಿತ್ಯ ಅಧಿಕಾರಿ ಆಸ್ಪತ್ರೆಯ ಡಾ. ಚಂದ್ರಶೇಖರ್, ಅಧ್ಯಕ್ಷತೆ : ಸಾವರ್ಕರ್ ಪ್ರತಿಷ್ಠಾನ ಅಧ್ಯಕ್ಷ ಡಾ. ಎಸ್. ಯಶಸ್ವಿನಿ, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಶ್ರೀ ದೊಡ್ಡಮ್ಮತಾಯಿ ದೇವಸ್ಥಾನ, ಶ್ರೀ ದಂಡಮ್ಮತಾಯಿ ದೇವಸ್ಥಾನ :** ಡಾ. ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಶಾಸಕ ಡಿ. ರವಿಶಂಕರ್, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಎ.ಎಚ್. ವಿಶ್ವನಾಥ್, ಮಾಜಿ ಶಾಸಕರಾದ ಸಾ.ರಾ. ಮಹೇಶ್, ಎಂ.ಕೆ. ಸೋಮಶೇಖರ್, ಸ್ಥಳ: ದೇವಸ್ಥಾನ, ಅಶೋಕಪುರಂ, ಬೆಳಗ್ಗೆ 11ಕ್ಕೆ.

■ **ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿ ಮಠ :** ಚಾತುರ್ಮಾಸ್ಯದ ಅಂಗವಾಗಿ ವೇದಾಂತ ದೇಶಿಕರ 'ನ್ಯಾಸದಶಕ' ಕುರಿತು ಉಪನ್ಯಾಸ, ಉಪನ್ಯಾಸಕಾರರು: ಸೋ. ಕೃಷ್ಣ ಅಯ್ಯಂಗಾರ್, ಸ್ಥಳ: ಶ್ರೀ ಪರಕಾಲ ಮಠ, ಬೆಳಗ್ಗೆ 11ಕ್ಕೆ.

■ **ಕನ್ನಡ ಸಾಹಿತ್ಯ ಕಲಾಕೂಟ:** ನಾಸ್ಟಾಲ್‌ಜಿಯಾ ಮತ್ತು ವಿಟ್ನೆಸ್ ಕೃತಿಗಳ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕೃತಿಗಳ ಬಿಡುಗಡೆ: ಕವಯತ್ರಿ ಶ್ರೀಮತಿ ಸುಕನ್ಯಾ ಮಾರುತಿ, ಕೃತಿ ಕುರಿತು: ಅಂಕಣಕಾರ ಜಿ.ಎಲ್.ತ್ರಿಪುರಾಂತಕ, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ಬೆಳಗ್ಗೆ 11ಕ್ಕೆ.

■ **ಗೆಳೆಯರ ಬಳಗ ಅಭಿವೃದ್ಧಿ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷೆ ವಸಂತ, ಸ್ಥಳ: ಜಿಲ್ಲಾ ಆರ್ಯ ಈಡಿಗರ ವಿದ್ಯಾರ್ಥಿನಿಲಯ ಆವರಣ, ವಿಜಯನಗರ 3ನೇ ಹಂತ, ಬೆಳಗ್ಗೆ 11ಕ್ಕೆ.

■ **ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ, ಮೈಸೂರು ಜಿಲ್ಲಾ ಸಮಿತಿ:** ಕಾರ್ಮಿಕ ನಾಯಕ ಕಾಮ್ರೇಡ್ ಶಿವದಾಸ್ ಘೋಷ್ ಅವರ 49ನೇ ಸ್ಮರಣ ವರ್ಷಾಚರಣೆ ಅಂಗವಾಗಿ ಸಾರ್ವಜನಿಕ ಸಭೆ, ಉಪಸ್ಥಿತರು: ಡಾ.ಕೆ.ಸೋಮಶೇಖರ್, ಕಾ.ಬಿ.ರವಿ, ಅಧ್ಯಕ್ಷತೆ: ಕಾ.ಎಂ.ಉಮಾದೇವಿ, ಸ್ಥಳ: ಎಸ್‌ಯುಸಿಐ ಕಚೇರಿ, ಡಿ. ಸುಬ್ಬಯ್ಯ ರಸ್ತೆ, ಬೆಳಗ್ಗೆ 11ಕ್ಕೆ.

■ **ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಆರ್.ಸಿ. ದಿಲೀಪ, ಸ್ಥಳ: ಸಮುದಾಯ ಭವನ, ನಾಲಾಬೀದಿ, ಬೆಳಗ್ಗೆ 11ಕ್ಕೆ.

■ **ಸಿಐಟಿಯು :** ಕಟ್ಟಡ ಕಾರ್ಮಿಕರ ಜಿಲ್ಲಾ ಸಮ್ಮೇಳನ, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ

■ **ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಜಿ :** ಸಾರಥ್ಯ, ಜಿಲ್ಲಾ ಕ್ಯಾಬಿನೆಟ್ ಪದಗ್ರಹಣ ಸಮಾರಂಭ, ಉದ್ಘಾಟನೆ: ಹೈಕೋರ್ಟ್ ನ್ಯಾಯಾಧೀಶೆ ಜೆ.ಎಂ. ಖಾಜಿ, ಪದಗ್ರಹಣ ಅಧಿಕಾರಿ : ಇಂಟರ್‌ನ್ಯಾಷನಲ್ ಡೈರೆಕ್ಟರ್ ಪಂಕಜ್ ಮೆಹ್ತಾ, ಅಧ್ಯಕ್ಷತೆ : ಡಿಸ್ಟ್ರಿಕ್ಟ್ ಗೌರ್ನರ್ ಲಯನ್ ಕೆ.ಎಲ್. ರಾಜಶೇಖರ, ಗೌರವ ಅತಿಥಿಗಳು : ವಂಶೀಧರ್ ಬಾಬು, ವಿ.ವಿ. ಕೃಷ್ಣ ರೆಡ್ಡಿ, ಎನ್. ಮೋಹನ್‌ಕುಮಾರ್, ಡಾ. ಎನ್. ಕೃಷ್ಣೇಗೌಡ, ಕೆ. ದೇವೇಗೌಡ, ಸ್ಥಳ: ಕೆಎಸ್‌ಓಯು ಘಟಿಕೋತ್ಸವ ಭವನ, ಮಧ್ಯಾಹ್ನ 3.30ಕ್ಕೆ.

■ **ಶ್ರೀ ಬಾಲಮುರಳಿ ಮ್ಯೂಸಿಕಲ್ ಗ್ರೂಪ್:** ಮಧುರ ಗೀತೆಗಳ ಸುಮಧುರ ಸಂಜೆ ಕರೋಕೆ ಗಾಯನ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಸಂಜೆ 4.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ರಾಮಕೃಷ್ಣ ವಚನವೇದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶೃತಿಮಂಜರಿ ಫೌಂಡೇಷನ್ :** ಶ್ರಾವಣ ಯುವ ಸಂಗೀತೋತ್ಸವ, ವಿದುಷಿ ಅದಿತಿ ಪ್ರಹ್ಲಾದ್ ಅವರಿಂದ ಗಾಯನ, ವಿದುಷಿ ಸಿ.ವಿ. ಶೃತಿ–ವಯೋಲಿನ್, ವಿದ್ವಾನ್ ಪ್ರಜ್ವಲ್ ಭಾರದ್ವಾಜ್–ಮೃದಂಗ, ವಿದ್ವಾನ್ ಸುಮುಖ್ ಕಾರಂತ್–ಖಂಜೀರಾ, ಸ್ಥಳ: ರೋಟರಿ ವೆಸ್ಟ್ ಸಭಾಂಗಣ, ಸರಸ್ವತಿಪುರಂ, ಸಂಜೆ 6ಕ್ಕೆ.

■ **ಶ್ರೀಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ. ಪ್ರಾಧ್ಯಾಪಕ ಡಾ. ಬಿ.ವಿ.ವಸಂತ ಕುಮಾರ್ ಅವರಿಂದ ಪ್ರವಚನ, ಗಮಕ ವಿದ್ವಾನ್ ಕೃ.ರಾಮಚಂದ್ರ ಅವರಿಂದ ವಾಚನ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ರಿಂದ.

■ **ಜಿಪಿಐಇಆರ್ ರಂಗ ತಂಡ :** ಶ್ರಾವಣ ರಂಗೋತ್ಸವದ ಸಮಾರೋಪ ಸಮಾರಂಭ, ಉಪಸ್ಥಿತರು : ರಂಗಾಯಣ ಮಾಜಿ ನಿರ್ದೇಶಕ ಜನಾರ್ದನ್, ಹಿರಿಯ ರಂಗಕರ್ಮಿ ಬಿ.ಎಂ. ರಾಮಚಂದ್ರ, ರಂಗ ನಿರ್ದೇಶಕ ಮೋಹನಚಂದ್ರ ಉರ್ವ, ನಾಟಕಕಾರರಾದ ಶ್ರೀಮತಿ ಸುಜಾತ ಅಕ್ಕಿ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ರಾಜೇಶ್ ಹೆಚ್. ತಲಕಾಡು, ರಂಗಕರ್ಮಿ ಸಿದ್ದೇಗೌಡ, ಸಂಜೆ 7 ರಿಂದ ಮಂಗಳೂರಿನ ನಯನ ನಾಟಕದ ಮನೆ ಕಲಾವಿದರಿಂದ ಅಶ್ವತ್ಥಾಮ ನಾಟ್‌ಔಟ್ ನಾಟಕ ಪ್ರದರ್ಶನ, ನಿರ್ದೇಶನ : ಮೋಹನಚಂದ್ರ ಉರ್ವ (ಮೋಚ), ಸ್ಥಳ: ಕಿರು ರಂಗಮಂದಿರ.

■ **ನಿರಂತರ ಫೌಂಡೇಷನ್ :** ಸಹಜ ರಂಗ ತರಬೇತಿ ಶಿಬಿರ, ಉಪಸ್ಥಿತರು : ಹಿರಿಯ ರಂಗಕರ್ಮಿ ಡಾ. ಸಿ. ಬಸವಲಿಂಗಯ್ಯ, ಗಾಂಧಿ ಭವನ ನಿರ್ದೇಶಕ ಡಾ. ಎಸ್. ನರೇಂದ್ರಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ನಿರಂತರ ನಿರ್ದೇಶಕ ಪ್ರಸಾದ್ ಕುಂದೂರ್, ಸ್ಥಳ: ಗಾಂಧಿ ಭವನ, ಮಾನಸಗಂಗೋತ್ರಿ, ಸಂಜೆ 6ಕ್ಕೆ

■ **ಕುಮಾರವ್ಯಾಸ ಗುರುಕುಲ:** ಗೌರಮ್ಮ ಶ್ರೀನಿವಾಸಮೂರ್ತಿ ಮತ್ತು ಗೌರಮ್ಮ ನಾಗರಾಜ್‌ರವರ ಸಂಸ್ಮರಣಾ ಕಾರ್ಯಕ್ರಮ, ಮುಕುಂದ ಮಾಲಾ ಸ್ತೋತ್ರ ವಾಚನ–ಡಾ.ಎ.ಎಸ್. ಅರವಿಂದಮೂರ್ತಿ, ಕುಮಾರವ್ಯಾಸ ಭಾರತ ವಾಚನ, ಆದಿಪರ್ವ–ಪೀಠಿಕಾ ಸಂಧಿ : ಪ್ರೊ.ಕೆ. ರಾಮಮೂರ್ತಿರಾವ್, ಆದಿಪರ್ವ – ಕರ್ಣ ಜನನ : ಕೆ.ಎನ್. ಕೇಶವಮೂರ್ತಿ, ಸಭಾಪರ್ವ – ದ್ರೌಪದಿಯ ಕೃಷ್ಣಸ್ತುತಿ : ಡಾ. ಎಂ.ಜಿ. ನರಹರಿ, ಉದ್ಯೋಗ ಪರ್ವ–ವಿದುರ ನೀತಿ : ಡಾ. ಎಂ.ಎನ್. ಮಂಜುನಾಥ್, ಸ್ಥಳ: 1315/2, ಹರಿಪ್ರಿಯ 3ನೇ ಅಡ್ಡ ರಸ್ತೆ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ.

ಮಹಾರಾಜ ಟ್ರೋಫಿ-2025

ಭರ್ಜರಿ ಗೆಲುವು ದಾಖಲಿಸಿದ ಗುಲ್ಬರ್ಗಾ; ಶಿವಮೊಗ್ಗ ಲಯನ್ಸ್‌ಗೆ ಸತತ 4ನೇ ಸೋಲು



ಸಂಕ್ಷಿಪ್ತ ಸ್ಕೋರ್

ಶಿವಮೊಗ್ಗ ಲಯನ್ಸ್: ಧ್ರುವ್ ಪ್ರಭಾಕರ್ 44 (27), ನಿಹಾಲ್ ಉಲ್ಲಾಳ್ 17(10), ತುಷಾರ್ ಸಿಂಗ್ 22(23), ಅನಿರುದ್ಧ ಜೋಶಿ 15*(13), ಹಾರ್ದಿಕ್ ರಾಜ್ 15*(9), ಶಶಿ ಕುಮಾರ್ 22ಕ್ಕೆ2, ಮೋನಿಶ್ ರೆಡ್ಡಿ 14ಕ್ಕೆ1, ವಿಜಯ್ ಕುಮಾರ್ 17ಕ್ಕೆ1

ಗುಲ್ಬರ್ಗಾ ಮಿಸ್ಟಿಕ್ಸ್: ಲುವ್ನಿತ್ ಸಿಸೋಡಿಯಾ 58*(24), ನಿಕಿನ್ ಜೋಸ್ 34*(15)

ಪಂದ್ಯಶ್ರೇಷ್ಠ ಲುವ್ನಿತ್ ಸಿಸೋಡಿಯಾ

ಮೈಸೂರು, ಆ.16(ವಿವಿಹೆಚ್)– ಲುವ್ನಿತ್ ಸಿಸೋಡಿಯಾ ಅವರ ಅಜೇಯ ಅರ್ಧ ಶತಕದಾಟ ಬಲದಿಂದ ಗುಲ್ಬರ್ಗಾ ಮಿಸ್ಟಿಕ್ಸ್ 10 ವಿಕೆಟ್‌ಗಳ ಅಂತರದ ಭರ್ಜರಿ ಗೆಲುವು ದಾಖಲಿಸಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಶನಿವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಶಿವಮೊಗ್ಗ ಲಯನ್ಸ್ 15.5 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 127 ರನ್ ಬಾರಿಸಿತು. ಈ ವೇಳೆ ಮಳೆ ಬಂದ ಕಾರಣ ಪಂದ್ಯ ಕೆಲಕಾಲ ಸ್ಥಗಿತಗೊಂಡಿತು. ನಂತರ ವಿಜೆಡಿ ನಿಯಮದಡಿ ಓವರ್ ಕಡಿತಗೊಳಿಸಿ ಎದುರಾಳಿ ತಂಡಕ್ಕೆ 9 ಓವರ್‌ಗಳಲ್ಲಿ 92 ರನ್‌ಗಳ ಟಾರ್ಗೆಟ್ ನೀಡಲಾಗಿತ್ತು.

ಈ ಮೊತ್ತ ಬೆನ್ನತ್ತಿದ ಗುಲ್ಬರ್ಗಾ ಕೇವಲ 6.3 ಓವರ್‌ಗಳಲ್ಲಿ ಯಾವುದೇ ವಿಕೆಟ್ ನಷ್ಟವಿಲ್ಲದೇ 93 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಆರಂಭಿಕ ಬ್ಯಾಟರ್ ಸಿಸೋಡಿಯಾ ಕೇವಲ 24 ಎಸೆತಗಳಲ್ಲಿ ಅಜೇಯ 58 ರನ್ ಗಳಿಸಿ ಗೆಲುವಿನ ರೂವಾರಿಯಾದರು.

ಹುಬ್ಬಳ್ಳಿ ಟೈಗರ್ಸ್‌ಗೆ ಗೆಲುವು



ಮೈಸೂರು, ಆ.16(ವಿವಿಹೆಚ್)– ಹುಬ್ಬಳ್ಳಿ ಟೈಗರ್ಸ್ ತಂಡ ಸಂಘಟಿತ ಬ್ಯಾಟಿಂಗ್ ಮತ್ತು ಬೌಲಿಂಗ್ ಪ್ರದರ್ಶನದ ಸಹಾಯದಿಂದಾಗಿ ಅತಿಥೇಯ ಮೈಸೂರು ವಾರಿಯರ್ಸ್ ತಂಡವನ್ನು 7 ವಿಕೆಟ್‌ಗಳ ಅಂತರದಿಂದ ಮಣಿಸಿತು.

ಶನಿವಾರ ಸಂಜೆ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಮೈಸೂರು ವಾರಿಯರ್ಸ್ 18.5 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 177 ರನ್ ಬಾರಿಸಿ, ಎದುರಾಳಿ ತಂಡಕ್ಕೆ 178 ರನ್‌ಗಳ ಗುರಿ ನೀಡಿತು.

ಮೊದಲು ಬ್ಯಾಟ್ ಮಾಡಿದ ಅತಿಥೇಯ ಮೈಸೂರು ವಾರಿಯರ್ಸ್‌ಗೆ ಉತ್ತಮ ಆರಂಭ ದೊರೆಯಿತು. ಎಸ್.ಯು ಕಾರ್ತಿಕ್ 71(43) ಮತ್ತು ಸಿ.ಎ.ಕಾರ್ತಿಕ್ 37(18) ಭದ್ರ ಇನ್ನಿಂಗ್ಸ್ ಕಟ್ಟಿದರು. ಬಳಿಕ ಬೇರಾರಿಂದಲೂ ನಿರೀಕ್ಷಿತ ಆಟ ಕಂಡು ಬರಲಿಲ್ಲ. ಎಂ.ವೆಂಕಟೇಶ್ 26(22) ಅಲ್ಪ ಹೋರಾಟ ನಡೆಸಿ ತಂಡ 150ರ ಗಡಿ ದಾಟಲು ಸಹಕರಿಸಿದರು.

ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಹುಬ್ಬಳ್ಳಿ 4 ಓವರ್‌ಗಳಿಗೆ 40 ರನ್ ಬಾರಿಸಿದ್ದ ವೇಳೆ ಪಂದ್ಯಕ್ಕೆ ಮಳೆ ಅಡ್ಡಿಯಾಯಿತು. ಮಳೆ ನಿಂತ ಬಳಿಕ ಪಂದ್ಯವನ್ನು 9 ಓವರ್‌ಗಳಿಗೆ ಸೀಮಿತಗೊಳಿಸಿ ಹುಬ್ಬಳ್ಳಿಗೆ 86 ರನ್‌ಗಳ ಟಾರ್ಗೆಟ್ ನೀಡಲಾಯಿತು. ಈ ಮೊತ್ತ ಬೆನ್ನತ್ತಿದ ಹುಬ್ಬಳ್ಳಿ 8.2 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 86 ರನ್ ಗಳಿಸಿ 7 ವಿಕೆಟ್‌ಗಳ ಅಂತರದಿಂದ ಗೆಲುವು ದಾಖಲಿಸಿತು.

ಪಂದ್ಯಶ್ರೇಷ್ಠ: ನಿತಿನ್ ನಾಗರಾಜ

ಇಂದಿನ ಪಂದ್ಯಗಳು

ಪಂದ್ಯ–13: ಮಂಗಳೂರು ಡ್ರ್ಯಾಗನ್ಸ್ vs ಬೆಂಗಳೂರು ಬ್ಲಾಸ್ಟರ್ಸ್ (ಮ.3.15)
ಪಂದ್ಯ–14: ಮೈಸೂರು ವಾರಿಯರ್ಸ್ vs ಶಿವಮೊಗ್ಗ ಲಯನ್ಸ್ (ಸಂಜೆ 7.15)

ಆಗಸ್ಟ್ 15 ರ ಪಂದ್ಯಗಳು

ಬೆಂಗಳೂರು ಬ್ಲಾಸ್ಟರ್ಸ್, ಮಂಗಳೂರು ಡ್ರ್ಯಾಗನ್ಸ್‌ಗೆ ಗೆಲುವು

ಮೊದಲನೇ ಪಂದ್ಯ: ಮಹಾರಾಜ ಟ್ರೋಫಿ 2025ರ 9ನೇ ಪಂದ್ಯದಲ್ಲಿ ಶಿವಮೊಗ್ಗ ಲಯನ್ಸ್ ಮತ್ತು ಬೆಂಗಳೂರು ಬ್ಲಾಸ್ಟರ್ಸ್ ತಂಡಗಳು ಮುಖಾಮುಖಿಯಾಗಿದ್ದವು. ಗ್ಲೇಡ್ಸ್ ಮೈದಾನದಲ್ಲಿ ಶುಕ್ರವಾರ ನಡೆದ ಪಂದ್ಯಕ್ಕೆ ಮಳೆ ಅಡ್ಡಿಪಡಿಸಿತು. ಆದ್ದರಿಂದ ಪಂದ್ಯವನ್ನು 6 ಓವರ್‌ಗಳಿಗೆ ಸೀಮಿತಗೊಳಿಸಲಾಯಿತು.

ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಶಿವಮೊಗ್ಗ 6 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 62 ರನ್ ಬಾರಿಸಿತು. ಈ ಗುರಿ ಬೆನ್ನತ್ತಿದ ಬೆಂಗಳೂರು 4.2 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 63 ರನ್ ಗಳಿಸಿ 8 ವಿಕೆಟ್‌ಗಳ ಅಂತರದಿಂದ ಗೆಲುವಿನ ನಗೆ ಬೀರಿದರು.

ಪಂದ್ಯಶ್ರೇಷ್ಠ: ಶುಭಾಂಗ್ ಹೆಗ್ಡೆ(7ಕ್ಕೆ3)

ಎರಡನೇ ಪಂದ್ಯ: ಮಹಾರಾಜ ಟ್ರೋಫಿ 2025ರ 10ನೇ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ ವಿರುದ್ಧ ಮಂಗಳೂರು ಡ್ರ್ಯಾಗನ್ಸ್ 16 ರನ್‌ಗಳಿಂದ ಗೆದ್ದು ಬೀಗಿದೆ.

ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಮಂಗಳೂರು 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 195 ರನ್ ಗಳಿಸಿತು. ಈ ಮೊತ್ತ ಬೆನ್ನತ್ತಲು ವಿಫಲವಾದ ಹುಬ್ಬಳ್ಳಿ ತಂಡ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 179 ರನ್ ಗಳಿಸಿ 16 ರನ್ ಅಂತರದಿಂದ ಸೋಲು ಕಂಡಿತು.

ಪಂದ್ಯಶ್ರೇಷ್ಠ: ಕ್ರಾಂತಿ ಕುಮಾರ್(28ಕ್ಕೆ4)

ಪ್ರವೇಶ ನಿರಾಕರಣೆ; ಕೆಆರ್‌ಎಸ್ ಬೃಂದಾವನ ಗಾರ್ಡನ್‌ನಲ್ಲಿ ಪ್ರವಾಸಿಗರ ದಾಂಧಲೆ

● ಟಿಕೆಟ್ ಕೌಂಟರ್ ಗ್ಲಾಸ್ ಪುಡಿ ಪುಡಿ ● ಕೊನೆಗೆ ಉಚಿತ ಪ್ರವೇಶ ಪಡೆದ ಪ್ರವಾಸಿಗರು





ಕೆಆರ್‌ಎಸ್ ಉದ್ಯಾನವನ ದ್ವಾರದ ಮುಂದೆ ಶುಕ್ರವಾರ ರಾತ್ರಿ 9 ಗಂಟೆ ನಂತರ ಬಂದ ಪ್ರವಾಸಿಗರು ಒಳ ಹೋಗಲು ಅವಕಾಶ ಕಲ್ಪಿಸುವಂತೆ ಪಟ್ಟು ಹಿಡಿದಿರುವುದು.

ಮೈಸೂರು, ಆ.16(ಎಂಟಿವೈ)– ಸ್ವಾತಂತ್ರ್ಯ ದಿನಾಚರಣೆ (ಶುಕ್ರವಾರ)ಯಂದು ಕೆಆರ್‌ಎಸ್ ಉದ್ಯಾನವನ ವೀಕ್ಷಣೆಗೆ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿತ್ತು. ಈ ಮಧ್ಯೆ, ರಾತ್ರಿ 9 ಗಂಟೆ ನಂತರ ಬಂದ 60ಕ್ಕೂ ಅಧಿಕ ಪ್ರವಾಸಿಗರಿಗೆ ಬೃಂದಾವನ ಪ್ರವೇಶಕ್ಕೆ ಅವಕಾಶ ನಿರಾಕರಿಸಿದ ಹಿನ್ನೆಲೆಯಲ್ಲಿ ಕೆಲಕಾಲ ಗೊಂದಲ ನಿರ್ಮಾಣವಾಗಿತ್ತು.

ನಿಯಮಾನುಸಾರ ಬೃಂದಾವನ ವೀಕ್ಷಣೆಗೆ ರಾತ್ರಿ 9 ಗಂಟೆವರೆಗೂ ಟಿಕೆಟ್ ನೀಡಲಾಗುತ್ತದೆ. ಆ ನಂತರ ಬಂದರೆ ಅವಕಾಶವಿಲ್ಲ. ಆದರೆ, ಶುಕ್ರವಾರ ರಾತ್ರಿ ಬಂದ ಪ್ರವಾಸಿಗರಿಗೆ ಯಾವುದೇ ಮಾಹಿತಿ ಇರಲಿಲ್ಲ. ಟೋಲ್ ಸಂಗ್ರಹದ ಸಿಬ್ಬಂದಿಗಳಾಗಲೀ ಇಲ್ಲವೇ ವಾಹನ ನಿಲುಗಡೆ ಶುಲ್ಕ ಸಂಗ್ರಹಿಸುವವರಾಗಲೀ ಪ್ರವಾಸಿಗರಿಗೆ ಯಾವುದೇ ಮಾಹಿತಿ ನೀಡದೇ ತಮ್ಮ ಪಾಡಿಗೆ ತಾವು ಶುಲ್ಕ ಸಂಗ್ರಹಿಸಿದ್ದರು.

ಆದರೆ, ಉದ್ಯಾನ ಪ್ರವೇಶಕ್ಕೆ ಪ್ರವಾಸಿಗರಿಗೆ ಟಿಕೆಟ್ ನೀಡಲು ಅಲ್ಲಿನ ಸಿಬ್ಬಂದಿ ನಿರಾಕರಿಸಿದರು. ಇದರಿಂದ ಅಸಮಾಧಾನಗೊಂಡ 60ಕ್ಕೂ ಹೆಚ್ಚು ಪ್ರವಾಸಿಗರು ಸಿಬ್ಬಂದಿಯೊಂದಿಗೆ ವಾಗ್ವಾದಕ್ಕಿಳಿದರು. ಟೋಲ್ ಹಾಗೂ ಪಾರ್ಕಿಂಗ್ ಶುಲ್ಕ ಪಾವತಿಸಿ ಬಂದಿದ್ದೇವೆ. ಉದ್ಯಾನವನ ವೀಕ್ಷಣೆಗೆ ನಮಗೆ ಅವಕಾಶ ನೀಡಲೇಬೇಕು ಎಂದು ಬಿಗಿಪಟ್ಟು ಹಿಡಿದರು. ಇದಕ್ಕೆ ಗೇಟ್‌ನಲ್ಲಿದ್ದ ಸಿಬ್ಬಂದಿ ಸ್ಪಂದಿಸದೆ ಇದ್ದಾಗ ಸಿಟ್ಟಿಗೆದ್ದ ಪ್ರವಾಸಿಗರು ಒಳ ನುಗ್ಗಲು ಯತ್ನಿಸಿದರು. ಈ ವೇಳೆ ನೂಕು–ನುಗ್ಗಲು ಉಂಟಾಗಿ ಟಿಕೆಟ್ ಕೌಂಟರ್‌ನ ಗಾಜು ಪುಡಿ ಪುಡಿಯಾಗಿದೆ. ಸ್ಥಳದಲ್ಲಿ ಬಿಗುವಿನ ವಾತಾವರಣ ಉಂಟಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ಬಂದ ಕಾವೇರಿ ನೀರಾವರಿ ನಿಗಮದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಫಾರೂಕ್ ಅಹ್ಮದ್ ಅಬು, ಪ್ರವಾಸಿಗರ ಅಹವಾಲು ಆಲಿಸಲು ಮುಂದಾದರು. ಆಗ ಪ್ರವಾಸಿಗರು ಟೋಲ್ ಶುಲ್ಕ ಪಾರ್ಕಿಂಗ್ ಶುಲ್ಕ ಸೇರಿದಂತೆ 500 ರೂ. ಖರ್ಚು ಮಾಡಿಕೊಂಡು ಬಂದಿದ್ದೇವೆ. ಹಾಗಾಗಿ ಉದ್ಯಾನವನ ವೀಕ್ಷಣೆಗೆ ಅವಕಾಶ ಮಾಡಿಕೊಡುವಂತೆ ಒತ್ತಾಯಿಸಿದರು. ರಾತ್ರಿ 9 ಗಂಟೆ ನಂತರ ಉದ್ಯಾನವನ ಬಂದ್ ಆಗಿದ್ದರೆ, ಟೋಲ್ ಹಾಗೂ ಪಾರ್ಕಿಂಗ್ ಶುಲ್ಕ ಸಂಗ್ರಹಿಸಿದ್ದು ಯಾಕೆ ಎಂದು ಪ್ರಶ್ನಿಸಿದರು. ಅಬು, ಶುಲ್ಕ ಪಡೆದಿರುವ ಟಿಕೆಟ್ ಪರಿಶೀಲಿಸಿ, ಹಣ ವಾಪಸ್ಸು ಕೊಡಬೇಕೋ ಇಲ್ಲ ಉದ್ಯಾನವನಕ್ಕೆ ಉಚಿತವಾಗಿ ಪ್ರವೇಶ ನೀಡಬೇಕೋ ಎಂದು ಪ್ರಶ್ನಿಸಿದರು. ಕೊನೆಗೆ ತಮಗೆ ಉದ್ಯಾನವನಕ್ಕೆ ಪ್ರವೇಶ ಕಲ್ಪಿಸುವಂತೆ ಪ್ರವಾಸಿಗರು ಬಿಗಿಪಟ್ಟು ಹಿಡಿದರು. ಅಂತಿಮವಾಗಿ 60ಕ್ಕೂ ಅಧಿಕ ಮಂದಿ ಪ್ರವಾಸಿಗರಿಗೆ ಉಚಿತವಾಗಿ ಉದ್ಯಾನವನ ವೀಕ್ಷಣೆಗೆ ಅವಕಾಶ ನೀಡಲಾಯಿತು. ಅವರಿಗಾಗಿ 15 ನಿಮಿಷ ನೀರಿನ ಕಾರಂಜಿ ಆನ್ ಮಾಡಲಾಯಿತು. ಎಲ್ಲರೂ ರಾತ್ರಿ 10 ಗಂಟೆಯೊಳಗೆ ಉದ್ಯಾನವನ ವೀಕ್ಷಿಸಿ ಹೊರ ಬಂದರು. ಈ ಸಂಬಂಧ ಯಾವುದೇ ದೂರು ದಾಖಲಾಗದ ಕಾರಣ, ಪ್ರಕರಣ ಸುಖಾಂತ್ಯಗೊಂಡಿದೆ.

ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ

ಕಡೂರು ಆತ್ಮತೃಪ್ತಿ ಟ್ರಸ್ಟ್‌ನಿಂದ ಹೆರಿಗೆ ಆಸ್ಪತ್ರೆಗೆ ನೀರು ಶುದ್ಧೀಕರಣ ಯಂತ್ರ ಕೊಡುಗೆ



ಮೈಸೂರಿನ ವಿವಿ ಪುರಂನ ಶ್ರೀ ಲಕ್ಷ್ಮೀದೇವಮ್ಮ ಶಂಕರಶೆಟ್ಟಿ ಹೆರಿಗೆ ಆಸ್ಪತ್ರೆಗೆ ಆತ್ಮತೃಪ್ತಿ ಟ್ರಸ್ಟ್ ವತಿಯಿಂದ ನೀರಿನ ಶುದ್ಧೀಕರಣ ಯಂತ್ರ ಕೊಡುಗೆ ನೀಡಿದ ನಂತರ ನಡೆದ ಸಭಾ ಕಾರ್ಯಕ್ರಮವನ್ನು ಶಾಸಕ ಕೆ.ಹರೀಶ್‌ಗೌಡರು ಉದ್ಘಾಟಿಸಿದರು.

ಮೈಸೂರು, ಆ.16(ಎಸ್‌ಬಿಡಿ)– 79ನೇ ಸ್ವಾತಂತ್ರ್ಯ ದಿನಾಚರಣೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರ 78ನೇ ಜನ್ಮದಿನದ ಅಂಗವಾಗಿ ಚಿಕ್ಕಮಗಳೂರು ಜಿಲ್ಲೆ ಕಡೂರು ಮೂಲದ ಆತ್ಮತೃಪ್ತಿ ಟ್ರಸ್ಟ್ ವತಿಯಿಂದ ಮೈಸೂರಿನ ವಿವಿ ಮೊಹಲ್ಲಾದಲ್ಲಿರುವ ಶ್ರೀ ಲಕ್ಷ್ಮೀದೇವಮ್ಮ ಶಂಕರ ಶೆಟ್ಟಿ ಸರ್ಕಾರಿ ಹೆರಿಗೆ ಆಸ್ಪತ್ರೆಗೆ ಕುಡಿಯುವ ನೀರಿನ ಶುದ್ಧೀಕರಣ ಯಂತ್ರವನ್ನು ಕೊಡುಗೆಯಾಗಿ ನೀಡಲಾಯಿತು.

ಟ್ರಸ್ಟ್ ಪರವಾಗಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು, ನೀರಿನ ಶುದ್ಧೀಕರಣ ಯಂತ್ರವನ್ನು ವಿಧ್ಯುಕ್ತವಾಗಿ ಹಸ್ತಾಂತರಿಸಿದರು. ಇದೇ ವೇಳೆ ಆಸ್ಪತ್ರೆಯಲ್ಲಿದ್ದ ತಾಯಿ–ಮಕ್ಕಳಿಗೆ ಹಣ್ಣು–ಹಂಪಲು ವಿತರಿಸಲಾಯಿತು. ಬಳಿಕ ಸಭಾ ಕಾರ್ಯಕ್ರಮದಲ್ಲಿ ಆಸ್ಪತ್ರೆಯ ವೈದ್ಯಾಧಿಕಾರಿಗಳನ್ನು ಟ್ರಸ್ಟ್ ವತಿಯಿಂದ ಗೌರವಿಸಲಾಯಿತು. ವೈದ್ಯಕೀಯ ವಿದ್ಯಾರ್ಥಿನಿ ಜಿ.ಎಸ್.ವಿನುಶ್ರೀಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಈ ವೇಳೆ ಕೆ.ಹರೀಶ್‌ಗೌಡರು ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ ಸೂರ್ಯ–ಚಂದ್ರ ಇರುವವರೆಗೂ ಶಾಶ್ವತವಾಗಿರುತ್ತವೆ. ಅವರ ಹಾದಿಯಲ್ಲೇ ನಡೆದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರಸ್ತುತ ಜನಸಂಖ್ಯೆಗೆ ಅನುಗುಣವಾಗಿ ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ. ಅದರಲ್ಲೂ ಮೈಸೂರಿಗೆ ಜಿಲ್ಲಾಸ್ಪತ್ರೆ, ಮಲ್ಟಿ ಸೂಪರ್ ಸ್ಪೆಷಾಲಿಟಿ, ಜಯದೇವ, ಕಿದ್ವಾಯ್, ನಿಮಾನ್ಸ್, ಟ್ರಾಮಾ ಕೇರ್ ಸೆಂಟರ್, ನೆಫ್ರೋಲಜಿ ಘಟಕಗಳನ್ನು ನೀಡುವ ಮೂಲಕ ನುಡಿದಂತೆ ನಡೆದಿದ್ದಾರೆ. ಆತ್ಮತೃಪ್ತಿ ಸಂಸ್ಥೆ ಈ ರೀತಿಯ ಸಮಾಜಮುಖಿ ಕಾರ್ಯ ನಡೆಸುತ್ತಿರುವುದು ಶ್ಲಾಘನೀಯ ಎಂದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ ಮಾತನಾಡಿ, ಆತ್ಮತೃಪ್ತಿ ಸಂಸ್ಥೆಯ ಸೇವಾ ಕಾರ್ಯವನ್ನು ಪ್ರಶಂಸಿಸಿದರು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ, ರಾಜ್ಯ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷರಾದ ಡಾ.ಸಿ.ಎಸ್. ರೇಣುಕಾದೇವಿ, ಡಾ.ಮಮತಾ, ಆಸ್ಪತ್ರೆ ವೈದ್ಯಾಧಿಕಾರಿಗಳಾದ ಡಾ.ಕೆಂಪೇಗೌಡ, ಡಾ.ರೂಪ, ಡಾ.ಪಿ.ಮಣಿ, ಡಾ.ದಿವ್ಯ, ಡಾ. ಸುನಿತಾ, ಆತ್ಮತೃಪ್ತಿ ಸಂಸ್ಥೆ ಕಾರ್ಯದರ್ಶಿ ಬಿ.ಕೆ.ಪ್ರಿಯದರ್ಶಿನಿ, ಸಮಾಜ ಸೇವಕರಾದ ವಿ.ಶಿವಕುಮಾರ್, ಎಸ್.ಸಚ್ಚಿದಾನಂದ, ಸತೀಶ್ ಪೊನ್ನಚ್ಚಿ, ನಿಶಾಂತ್ ಪಾಟೀಲ್, ದೀಪಕ್, ಕೃಷ್ಣ, ಪಾಪಣ್ಣ, ಗಂಗಣ್ಣ, ಆಸ್ಪತ್ರೆ ಸಿಬ್ಬಂದಿ ಉಪಸ್ಥಿತರಿದ್ದರು.

ಶಿರಾಡಿಘಾಟ್ ರಸ್ತೆ, ರೈಲು ಸಂಚಾರ ಬಂದ್

ಹಾಸನ, ಆ.16– ಜಿಲ್ಲೆಯ ಮಲೆನಾಡು ಭಾಗದಲ್ಲಿ ಮಳೆರಾಯ ಅಬ್ಬರಿಸುತ್ತಿದ್ದು, ಭಾರಿ ಮಳೆಗೆ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಭೂಕುಸಿತ ಉಂಟಾಗಿದೆ. ಈ ಹಿನ್ನೆಲೆ ವಾಹನ ಸಂಚಾರದಲ್ಲಿ ಭಾರಿ ವ್ಯತ್ಯಯ ಉಂಟಾಗಿದೆ.

ಸಕಲೇಶಪುರ ತಾಲೂಕಿನ ಮಾರನಹಳ್ಳಿ ಬಳಿ ಹಲವೆಡೆ ಭೂಕುಸಿತ ಉಂಟಾಗಿದೆ. ಮರ, ಗಿಡಗಳ ಸಮೇತ ಮಣ್ಣು ರಸ್ತೆಗೆ ಕುಸಿಯುತ್ತಿದೆ. ವೀಕೆಂಡ್ ಹಿನ್ನೆಲೆಯಲ್ಲಿ ವಾಹನಗಳ ಸಂಚಾರ ಹೆಚ್ಚಿದ್ದು, ಶಿರಾಡಿಘಾಟ್ ರಸ್ತೆಯಲ್ಲಿ ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿ ವಾಹನ ಸವಾರರು ಪರದಾಡಿದ್ದಾರೆ. ರಾಷ್ಟ್ರೀಯ ಹೆದ್ದಾರಿ 75 ಶಿರಾಡಿಘಾಟ್ ರಸ್ತೆಯಲ್ಲಿ ವಾಹನ ಸಂಚಾರ ಸಂಪೂರ್ಣ ಬಂದ್ ಮಾಡಲಾಗಿದೆ. ಮಾರನಹಳ್ಳಿ ಬಳಿ ಪೊಲೀಸರು ಬ್ಯಾರಿಕೇಡ್ ಹಾಕಿ ಬದಲಿ ರಸ್ತೆಯಲ್ಲಿ ಸಂಚರಿಸುವಂತೆ ಸೂಚನೆ ನೀಡಿದ್ದಾರೆ. ಇದರಿಂದ ಸಾವಿರಾರು ವಾಹನ ಸವಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಬೆಂಗಳೂರು–ಮಂಗಳೂರು ರೈಲು ಸಂಚಾರ ಬಂದ್: ಸಕಲೇಶಪುರ ತಾಲೂಕಿನ ಎಡಕುಮಾರಿ ಬಳಿ ರೈಲ್ವೆ ಹಳಿ ಮೇಲೆ ಮಣ್ಣು ಕುಸಿತಗೊಂಡಿದೆ. ಹೀಗಾಗಿ ಬೆಂಗಳೂರು–ಮಂಗಳೂರು ಮಾರ್ಗದಲ್ಲಿ ರೈಲು, ಗೂಡ್ಸ್ ರೈಲುಗಳ ಸಂಚಾರ ತಾತ್ಕಾಲಿಕ ಸ್ಥಗಿತಗೊಳಿಸಲಾಗಿದೆ. ಏಳು ಕಿಲೋಮೀಟರ್ ವ್ಯಾಪ್ತಿಯ 15 ಕಡೆಗಳಲ್ಲಿ ಭೂಕುಸಿತವಾಗಿದ್ದು ರೈಲ್ವೆ ಹಳಿ ಮೇಲೆ ಭಾರಿ ಪ್ರಮಾಣದ ನೀರು ಹರಿಯುತ್ತಿದ್ದು ಈ ಮಾರ್ಗದಲ್ಲಿ ಸಂಚರಿಸುತ್ತಿದ್ದ ಎಲ್ಲಾ ರೈಲುಗಳ ಸಂಚಾರವನ್ನು ಬಂದ್ ಮಾಡಲಾಗಿದೆ. ಸ್ಥಳಕ್ಕೆ ರೈಲ್ವೆ ಇಲಾಖೆ ರಕ್ಷಣಾ ಸಿಬ್ಬಂದಿ ಭೇಟಿ ನೀಡಿದ್ದಾರೆ.

ಶ್ರೀವಾಗಿಲು–ಯಡಕುಮಾರಿ, ಯಡಕುಮಾರಿ–ಕಡಗರವಳ್ಳಿ ಮತ್ತು ಕಡಗರವಳ್ಳಿ–ಡೋಣಿಗಲ್ ವಿಭಾಗಗಳ ನಡುವೆ ಭೂಕುಸಿತದಿಂದ ಉಂಟಾದ ಭಾರಿ ಮಳೆಯಿಂದಾಗಿ, ರೈಲು ಮಾರ್ಗ ಬದಲಾವಣೆ ಮಾಡಲಾಗಿದೆ.

ಒಳಮೀಸಲಾತಿ ವರದಿ ಒಂದು ವರ್ಗ ಓಲೈಸುವುದಕ್ಕೆ ಸಿದ್ಧಪಡಿಸಿದಂತಿದೆ

ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್



ಮೈಸೂರು,ಆ.16(ಪಿಎಂ)– ಒಳಮೀಸಲಾತಿ ಸಂಬಂಧ ನಿವೃತ್ತ ನ್ಯಾಯಮೂರ್ತಿ ಹೆಚ್.ಎಸ್.ನಾಗಮೋಹನ್ ದಾಸ್ ಆಯೋಗ ಸರ್ಕಾರಕ್ಕೆ ಸಲ್ಲಿಸಿರುವ ವರದಿಯು ಕೇವಲ ಒಂದು ವರ್ಗ ಓಲೈಸುವುದಕ್ಕಾಗಿ ಸಿದ್ಧಪಡಿಸಿದಂತಿದೆ ಎಂದು ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ತಿಳಿಸಿದ್ದಾರೆ.

ಈ ವರದಿ ಅವೈಜ್ಞಾನಿಕವಾಗಿದ್ದು, ಐತಿಹಾಸಿಕ, ಸಾಮಾಜಿಕ ನೆಲೆಗಟ್ಟಿನಲ್ಲಿ ಸಮುದಾಯಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡದೆ, ಎಡಗೈ ಮತ್ತು ಬಲಗೈ ಸಮುದಾಯಗಳ ಉಪಜಾತಿಗಳನ್ನು ಸರಿಯಾಗಿ ಗುರುತಿಸಿ ವರ್ಗೀಕರಿಸದೆ ಹಾಗೂ ನಾಯಕ ಮೀಸಲಾತಿ ಪಾಲನ್ನು ಹಂಚಿಕೆ ಮಾಡದೇ ಸಮುದಾಯಗಳಲ್ಲಿ ಗೊಂದಲ ಸೃಷ್ಟಿ ಮಾಡಲಾಗಿದೆ. ಮೊದಲು ಎಡಗೈ ಮತ್ತು ಬಲಗೈ ಸಮಾಜಗಳ ಉಪ ಜಾತಿಗಳ ವರ್ಗೀಕರಣದಲ್ಲಿ ಸ್ಪಷ್ಟತೆ ಪಡೆದು, ಆ ಮೂಲಕ ವರ್ಗೀಕರಣ ಮಾಡಬೇಕಿರುವುದು ಅನಿವಾರ್ಯ.

ಬಲಗೈ ಸಮುದಾಯವನ್ನು ರಾಜ್ಯದ ವಿವಿಧ ಭಾಗಗಳಲ್ಲಿ ವಿವಿಧ ಹೆಸರಿನಿಂದ ಕರೆಯಲ್ಪಡುತ್ತಿದ್ದು, ಮುಂದಿನ ದಿನಗಳಲ್ಲಿ ಕೇಂದ್ರ ಸರ್ಕಾರವು ಕೈಗೊಳ್ಳುವ ಜಾತಿ ಸಮೀಕ್ಷೆಯಲ್ಲಿ ಯಾವುದೇ ಗೊಂದಲ ಸೃಷ್ಟಿಯಾಗುವುದನ್ನು ತಡೆಯಲು ಸಮುದಾಯದಲ್ಲಿ ಒಂದೇ ಜಾತಿ ಸೂಚಕ ಪದ ಬಳಕೆ ಮಾಡಬೇಕು. ಈ ಕುರಿತು ರಾಜ್ಯದ ಪ್ರಜ್ಞಾವಂತರು, ಸಮುದಾಯದ ಮುಖಂಡರು, ಸರ್ಕಾರಿ ನೌಕರರು, ವಿದ್ಯಾರ್ಥಿ ಸಂಘಟನೆಗಳ ಮುಖಂಡರು ಒಮ್ಮತದ ನಿರ್ಧಾರಕ್ಕೆ ಬರುವುದು ಅವಶ್ಯವಾಗಿದೆ. ಬಲಗೈ ಸಮುದಾಯದ ಹಿರಿಯ ಚಿಂತಕರು, ಸಾಹಿತಿಗಳು, ರಾಜಕಾರಣಿಗಳು, ಸಂಘ ಸಂಸ್ಥೆಗಳ ಮುಖಂಡರು ಗೊಂದಲ ಸೃಷ್ಟಿಸುವ ಹೇಳಿಕೆ ನೀಡದೇ ರಾಜ್ಯಾದ್ಯಂತ ಬಲಗೈ ಸಮುದಾಯಕ್ಕೆ ಒಂದೇ ಜಾತಿ ಸೂಚಕ ಪದ ಬಳಕೆ ಮಾಡಲು ಚರ್ಚಿಸಿ ತೀರ್ಮಾನ ಮಾಡಬೇಕಿದೆ ಎಂದು ಅವರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಬೆಂಗಳೂರು ಭೀಕರ ಅಗ್ನಿ ದುರಂತ, ಒಂದೇ ಕುಟುಂಬದ ನಾಲ್ವರು ಸೇರಿ ಒಟ್ಟು ಐವರ ಸಾವು

ಬೆಂಗಳೂರು, ಆ.16– ಬೆಂಗಳೂರಿನ ನಗರ್ತಪೇಟೆಯಲ್ಲಿ ಶನಿವಾರ ಬೆಳಗಿನ ಜಾವ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ ಒಂದೇ ಕುಟುಂಬದ ನಾಲ್ವರು ಸೇರಿ ಒಟ್ಟು ಐವರು ಮೃತಪಟ್ಟಿದ್ದಾರೆ. ದುರಂತದಲ್ಲಿ ಮದನ್ ಅವರ ಪತ್ನಿ ಸಂಗೀತಾ ಹಾಗೂ ಇಬ್ಬರು ಮಕ್ಕಳು ಮಿತೇಶ್ ಮತ್ತು ವಿಹಾನ್ ಬೆಂಕಿ ಅವಘಡದಲ್ಲಿ ಸಾವಿಗೀಡಾದರೆ, ಸುರೇಶ್ ಎಂಬುವರು ಪ್ರಾಣ ಕಳೆದುಕೊಂಡಿದ್ದಾರೆ.

ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ನಿರ್ದೇಶಕ ಶಿವಶಂಕರ್ ಘಟನೆ ಕುರಿತು ಮಾಹಿತಿ ನೀಡುತ್ತಾ, ಬೆಳಗ್ಗೆ ಸುಮಾರು ಮೂರು ಗಂಟೆಗೆ ನಮಗೆ ಮಾಹಿತಿ ಬಂದ ತಕ್ಷಣವೇ ಆರು ಅಗ್ನಿಶಾಮಕ ವಾಹನಗಳು, ಐವತ್ತಕ್ಕೂ ಹೆಚ್ಚು ಸಿಬ್ಬಂದಿ ಹಾಗೂ 20 ಮಂದಿ ಎಸ್‌ಡಿಆರ್‌ಎಫ್ ತಂಡದವರು ಸ್ಥಳಕ್ಕೆ ಧಾವಿಸಿದರು. ಜೊತೆಗೆ ಪೊಲೀಸರು ಸಹ ಕಾರ್ಯಾಚರಣೆಯಲ್ಲಿ ಭಾಗವಹಿಸಿದರು. ಮೊದಲಿಗೆ ನೆಲ ಮಹಡಿಯಲ್ಲಿ ಒಂದು ಮೃತದೇಹ ಪತ್ತೆಯಾಯಿತು. ನಂತರ ಮೊದಲ ಮಹಡಿಯಲ್ಲಿ ಬೆಂಕಿ ಸಂಪೂರ್ಣ ಆವರಿಸಿದ್ದು, ಎರಡನೇ ಮಹಡಿಯಲ್ಲಿ ಮತ್ತೊಂದು ಮೃತದೇಹ ಪತ್ತೆಯಾಯಿತು. ಮೂರನೇ ಮಹಡಿಯಲ್ಲಿ ಇಬ್ಬರು ಸಾವಿಗೀಡಾದ ಮಾಹಿತಿ ದೊರೆತು, ಎಲ್ಲಾ ಮೃತದೇಹಗಳನ್ನು ಹೊರತೆಗೆದಿದ್ದೇವೆ. ಘಟನೆಗೆ ನಿಖರ ಕಾರಣ ಇನ್ನೂ ತಿಳಿದು ಬಂದಿಲ್ಲ. ಸೇಫ್ಟಿ ಮೆಜರ್ಸ್ ಕುರಿತು ನಾವು ಖಂಡಿತ ಕ್ರಮ ಕೈಗೊಳ್ಳುತ್ತೇವೆ ಎಂದರು.

ಸ್ವಾತಂತ್ರ್ಯಕ್ಕಾಗಿ ತ್ಯಾಗ–ಬಲಿದಾನ ಮಾಡಿದವರ ಬಗ್ಗೆ ಅರಿಯಿರಿ: ಜಿಟಿಡಿ

ಇದಕ್ಕಾಗಿ ಭಾರತದ ಇತಿಹಾಸ ಓದಿ: ವಿದ್ಯಾರ್ಥಿಗಳಿಗೆ ಕಿವಿಮಾತು



ಮೈಸೂರಿನ ವಿಜಯನಗರ ಮೂರನೇ ಹಂತದ ವಿ.ಕೆ.ವಿದ್ಯಾಸಂಸ್ಥೆಯಲ್ಲಿ ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಶಾಸಕ ಜಿ.ಟಿ.ದೇವೇಗೌಡರು ಭಾಗವಹಿಸಿದ್ದರು.

ಮೈಸೂರು, ಆ.16(ಎಸ್‌ಬಿಡಿ)– ಭಾರತದ ಇತಿಹಾಸ ತಿಳಿದುಕೊಂಡು ಸ್ವಾತಂತ್ರ್ಯಕ್ಕಾಗಿ ತ್ಯಾಗ–ಬಲಿದಾನ ಮಾಡಿದ ಮಹನೀಯರನ್ನು ಸ್ಮರಿಸಿಕೊಳ್ಳಬೇಕು ಎಂದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು, ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರಿನ ವಿಜಯನಗರ ಮೂರನೇ ಹಂತದ ವಿ.ಕೆ.ವಿದ್ಯಾಸಂಸ್ಥೆಯಲ್ಲಿ ಶುಕ್ರವಾರ 79ನೇ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮಹಾತ್ಮ ಗಾಂಧೀಜಿ ಅವರ ಅಹಿಂಸಾ ಮಾರ್ಗದ ಜೊತೆಗೆ ಬಾಲಗಂಗಾಧರ ತಿಲಕ್, ಸುಭಾಷ್ ಚಂದ್ರ ಬೋಸ್‌ರಂತಹ ಅನೇಕ ಮಹನೀಯರ ಹೋರಾಟ ಹಾಗೂ ತ್ಯಾಗ–ಬಲಿದಾನದಿಂದ ಭಾರತಕ್ಕೆ ಸ್ವಾತಂತ್ರ್ಯ ದೊರೆತಿದೆ. ಈ ಇತಿಹಾಸವನ್ನು ಸದಾ ಸ್ಮರಿಸಿಕೊಳ್ಳಬೇಕು ಎಂದರು.


ದೇಶಕ್ಕೆ ಸ್ವಾತಂತ್ರ್ಯ ದೊರೆತು 79 ವರ್ಷಗಳಾಗಿವೆ. ಭಾರತ ಎಲ್ಲಾ ರಂಗಗಳಲ್ಲೂ ಅಭಿವೃದ್ಧಿ ಸಾಧಿಸುವ ಮೂಲಕ ಜಗತ್ತಿನ ಗಮನ ಸೆಳೆದಿದೆ. ಆರ್ಥಿಕತೆಯಲ್ಲಿ ಉತ್ತಮ ಸ್ಥಾನದಲ್ಲಿದೆ. ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಯಿಂದ ಅಮಾಯಕರು ಪ್ರಾಣ ಕಳೆದುಕೊಂಡರು. ಇದಕ್ಕೆ ಪ್ರತಿಯಾಗಿ ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಮೂಲಕ ಭಾರತೀಯ ಸೈನಿಕರು ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸಿದರು. ಕುಟುಂಬ, ಬಂಧು–ಬಳಗದಿಂದ ದೂರವಿದ್ದು, ದೇಶದ ರಕ್ಷಣೆಗಾಗಿ ಸೇವೆ ಸಲ್ಲಿಸುತ್ತಿರುವ ಸೈನಿಕರನ್ನು ಗೌರವಿಸಬೇಕು ಎಂದು ಹೇಳಿದರು.

ಈಗಿನ ಪರಿಸ್ಥಿತಿಯಲ್ಲಿ ಮಕ್ಕಳಿಗೆ ಸಂಸ್ಕಾರ ಕಲಿಸುವುದು ಅತ್ಯವಶ್ಯವಾಗಿದೆ. ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು ಎಂಬುದನ್ನು ತಿಳಿಸಿಕೊಡಬೇಕು. ಸಮಾಜದಲ್ಲಿ ಅನ್ಯಾಯ ಕಂಡರೆ ಧೈರ್ಯವಾಗಿ ಪ್ರಶ್ನಿಸುವ ಹಾಗೂ ನ್ಯಾಯಕ್ಕಾಗಿ ಹೋರಾಡುವ ಮನೋಭಾವ ಬೆಳೆಸಬೇಕು. ಹಾಗೆಯೇ ಮಕ್ಕಳು ತಂದೆ–ತಾಯಿಯನ್ನು ಗೌರವದಿಂದ ಕಾಣಬೇಕು. ಇಳಿವಯಸ್ಸಿನಲ್ಲಿ ಪೋಷಕರನ್ನು ವೃದ್ಧಾಶ್ರಮಕ್ಕೆ ಸೇರಿಸದೆ ತಮ್ಮೊಟ್ಟಿಗೆ ಅಷ್ಟೇ ಪ್ರೀತಿಯಿಂದ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ಅವರು, ವಿಜಯನಗರ ಮೂರನೇ ಹಂತಕ್ಕೆ ಶೀಘ್ರದಲ್ಲೇ ದಿನದ 24 ಗಂಟೆ ಕುಡಿಯುವ ನೀರು ಕಲ್ಪಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆದಿದೆ. ಈಗಾಗಲೇ ಪ್ರಗತಿಯಲ್ಲಿರುವ ಹಳೇ ಉಂಡುವಾಡಿ ಯೋಜನೆ ಕಾಮಗಾರಿ ಮುಂದಿನ ವರ್ಷದೊಳಗೆ ಮುಗಿಯುವ ನಿರೀಕ್ಷೆಯಿದೆ. ಅಲ್ಲಿಯವರೆಗೆ ಬೇರೆ ಮೂಲಗಳಿಂದ ನೀರು ಪೂರೈಕೆಗೆ ಅಗತ್ಯ ಕ್ರಮಕೈಗೊಳ್ಳಲಾಗುವುದು ಎಂದರು.

ಮಕ್ಕಳೊಂದಿಗೆ ಸಂವಾದ: ಇದೇ ವೇಳೆ ಮಕ್ಕಳೊಂದಿಗೆ ಸಂವಾದ ನಡೆಸಿದ ಜಿಟಿಡಿ, ದೇಶಕ್ಕೆ ಸ್ವಾತಂತ್ರ್ಯ ಹೋರಾಟದಲ್ಲಿ ಯಾರೆಲ್ಲಾ ಭಾಗಿಯಾಗಿದ್ದರು, ಸಂವಿಧಾನ ರಚನೆ ಮಾಡಿದ್ದು ಯಾರು, ಯಾರು ಪ್ರಧಾನಿಯಾಗಿದ್ದಾಗ ಪಾಕಿಸ್ತಾನದ ವಿರುದ್ಧ ಯುದ್ಧ ನಡೆದಿದೆ. ಯಾವೆಲ್ಲಾ ಹೆಸರಿನಲ್ಲಿ ಕಾರ್ಯಾಚರಣೆ ನಡೆಸಲಾಗಿದೆ, ಹೀಗೆ ಹಲವು ಪ್ರಶ್ನೆಗಳಿಗೆ ಅವರಿಂದ ಉತ್ತರ ಪಡೆದರು.

ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಬಿಜೆಪಿ ಎಸ್‌ಸಿ ಮೋರ್ಚಾದಿಂದ ತಿರಂಗಾ ಬೈಕ್ ರ್‍ಯಾಲಿ



ಬಿಜೆಪಿ ಮೈಸೂರು ನಗರ(ಜಿಲ್ಲಾ) ಎಸ್‌ಸಿ ಮೋರ್ಚಾ ವತಿಯಿಂದ ತಿರಂಗಾ ಬೈಕ್ ಯಾತ್ರೆ ನಡೆಸಿದ ನಂತರ ಪುರಭವನದ ಎದುರಿನ ಡಾ.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು.

ಮೈಸೂರು, ಆ.16(ಎಸ್‌ಬಿಡಿ)– ದೇಶದ 79ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಬಿಜೆಪಿ ಮೈಸೂರು ನಗರ (ಜಿಲ್ಲೆ) ಎಸ್‌ಸಿ ಮೋರ್ಚಾ ವತಿಯಿಂದ ತಿರಂಗಾ ಬೈಕ್ ಯಾತ್ರೆ ಹಮ್ಮಿಕೊಳ್ಳಲಾಗಿತ್ತು.

ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬೈಕ್ ರ್‍ಯಾಲಿಗೆ ಚಾಲನೆ ನೀಡಿದರು. ನಂತರ ಬಿಜೆಪಿ ಕಚೇರಿಯಿಂದ ಆರಂಭಗೊಂಡ ಯಾತ್ರೆ, ಆರ್‌ಟಿಓ ವೃತ್ತ ರಾಮಸ್ವಾಮಿ ವೃತ್ತ, ಬಸವೇಶ್ವರ ವೃತ್ತ, ಜಯಚಾಮರಾಜ ಒಡೆಯರ್ ವೃತ್ತ (ಹಾರ್ಡಿಂಜ್ ಸರ್ಕಲ್)ದ ಮೂಲಕ ಸಾಗಿ ಪುರಭವನ ತಲುಪಿದ ಕೂಡಲೇ ಅಲ್ಲಿರುವ ಬಾಬಾ ಸಾಹೇಬ ಡಾ.ಅಂಬೇಡ್ಕರ್ ಅವರ ಪ್ರತಿಮೆಗೆ ಮುಖಂಡರು ಮಾಲಾರ್ಪಣೆ ಮಾಡಿ, ನಮನ ಸಲ್ಲಿಸಿದರು.

ಈ ವೇಳೆ ಬಿಜೆಪಿ ಜಿಲ್ಲಾ ಎಸ್‌ಸಿ ಮೋರ್ಚಾ ಅಧ್ಯಕ್ಷರೂ ಆದ ಮಾಜಿ ಉಪ ಮೇಯರ್ ವಿ.ಶೈಲೇಂದ್ರ ಮಾಧ್ಯಮದವರೊಂದಿಗೆ ಮಾತನಾಡಿ, ಇಂದು ದೇಶಾದ್ಯಂತ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮ ಸಡಗರದಿಂದ ಆಚರಣೆ ಮಾಡಲಾಗುತ್ತಿದೆ. ಹಾಗೆಯೇ ನಮ್ಮ ಎಸ್‌ಸಿ ಮೋರ್ಚಾ ವತಿಯಿಂದ ತಿರಂಗಾ ಬೈಕ್ ರ್‍ಯಾಲಿ ನಡೆಸಿ, ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಗಿದೆ. ಈ ಮೂಲಕ ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ–ಬಲಿದಾನ ಮಾಡಿದ ಮಹನೀಯರನ್ನು ಸ್ಮರಿಸಿಕೊಳ್ಳಲಾಗಿದೆ ಎಂದರು.

ಈ ಸಂದರ್ಭದಲ್ಲಿ ಸ್ವಾತಂತ್ರ್ಯ ಭಾರತಕ್ಕೆ ಶ್ರೇಷ್ಠ ಸಂವಿಧಾನ ನೀಡಿದ ಡಾ.ಬಿ.ಆರ್. ಅಂಬೇಡ್ಕರ್ ಅವರ ಸಾಧನೆಯನ್ನೂ ಸ್ಮರಿಸಬೇಕು. ಅಂಬೇಡ್ಕರ್ ಅವರು ಜ್ಞಾನ ಮಾರ್ಗದಲ್ಲಿ ಹೋರಾಟ ನಡೆಸಿದ ವಿಶ್ವಜ್ಞಾನಿ. ಆಂಗ್ಲರ ದುಂಡು ಮೇಜಿನ ಸಭೆಯಲ್ಲಿ ಭಾರತದ ಇತಿಹಾಸದ ಮಹತ್ವವನ್ನು ಮನವರಿಕೆ ಮಾಡಿಕೊಟ್ಟಿದ್ದರು. ಭಾರತದ ಅಖಂಡತೆ ರಕ್ಷಣೆಗಾಗಿ ವಿಭಜನೆಗೆ ವಿರೋಧ ವ್ಯಕ್ತಪಡಿಸಿದ್ದರು. ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸ್ವಾತಂತ್ರ್ಯದ ಫಲ ಸಿಗಬೇಕೆಂದು ಬಯಸಿ, ಆ ನಿಟ್ಟಿನಲ್ಲಿ ಶ್ರಮಿಸಿದರು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ವಿ.ಶ್ರೀನಿವಾಸ್ ಪ್ರಸಾದ್ ಅಭಿಮಾನಿಗಳ ಬಳಗದ ಅಧ್ಯಕ್ಷ ಎಂ.ರಾಜಕುಮಾರ, ಬಿಜೆಪಿ ಚಾಮರಾಜ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ದಿನೇಶ್ ಗೌಡ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ರಾಕೇಶ್ ಭಟ್, ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಪ್ರತಾಪ್, ಸಂಚಾಲಕರಾದ ರಾಹುಲ್, ಚುದನ್ ಗೌಡ ಮುಖಂಡರಾದ ಅಶೋಕಪುರಂ ಮಹೇಶ್, ಅಂಜನ ಕುಮಾರ್, ಅಮಿತ್ ರಾಜ್, ಧರ್ಮರಾಜ್ ರವಿಕುಮಾರ್, ಚೆಲುವರಾಜ್, ಸೋಮೇಶ್, ಪವನ್ ಮತ್ತಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ಹೊಟ್ಟೆ ನೋವಿನಿಂದ ಬಳಲುತ್ತಿದ್ದ ಗುಂಡನನ್ನು ಪರೀಕ್ಷಿಸಿದ ಡಾಕ್ಟರ್ ಕೇಳಿದರು. ನಿಮಗೆ ಗ್ಯಾಸ್ ಇದೆಯೇ?

ಗುಂಡ : ಇಲ್ಲ. ಅರ್ಜಿ ಹಾಕಿದ್ದೇನೆ. ಇನ್ನೂ ಬಂದಿಲ್ಲ!

ಮೈಸೂರು ಮಿತ್ರ

ಭಾನುವಾರ, 17 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ನಗು ಮತ್ತು ಮೌನ ನಮ್ಮ ಎರಡು ದೊಡ್ಡ ಆಯುಧಗಳು. ನಗು ಯಾವುದೇ ಸಮಸ್ಯೆಯನ್ನು ಪರಿಹರಿಸುತ್ತದೆ. ಮೌನ ಯಾವುದೇ ಸಮಸ್ಯೆ ಉದ್ಭವಿಸದಂತೆ ತಡೆಯುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಂಗ ಮೊಸರು ತಿಂದು ಮೇಕೆ ಬಾಯಿಗೆ ಸವರಿದ ಹಾಗಾಯಿತು.

ನಿಮ್ಮ ಪತ್ರಗಳು

■ ಪೊಲೀಸ್ ಮತ್ತು ಪಾಲಿಕೆ ಆಯುಕ್ತರ ಗಮನಕ್ಕೆ!



ಮಾನ್ಯರೆ,

ಮೈಸೂರಿನ ಕುವೆಂಪುನಗರದ ಎಂ ಬ್ಲಾಕ್ 1ನೇ ಕ್ರಾಸ್ ರಸ್ತೆಯ ಒಂದು ಭಾಗವನ್ನು ಉದ್ದಕ್ಕೂ ಅಗೆದಿದ್ದಾರೆ. ಕಾಮಗಾರಿ ಮುಗಿದ ನಂತರ ಅಗೆದ ಭಾಗವನ್ನು ಸರಿಯಾಗಿ ಮುಚ್ಚದೇ ಇರುವುದರಿಂದ ಮಾರಣಾಂತಿಕ ಯಮ ರೂಪಿ ಗುಂಡಿಗಳು ಉದ್ಭವವಾಗಿವೆ. ಈ ಭಾಗದ ಆರೋಗ್ಯ ಕೇಂದ್ರದ ಬಳಿಯಂತೂ ಯಮ ರೂಪಿ ಕಂದಕ ರೂಪುಗೊಂಡಿದೆ.

ಈ ರಸ್ತೆಯಲ್ಲಿ ಸದಾ ವಾಹನ ಸಂಚಾರ ದಟ್ಟವಾಗಿರುತ್ತದೆ. ಆಟೋ, ಸ್ಕೂಟರ್, ಕಾರು ಹಾಗೂ ಶಾಲಾ ವಾಹನ(ವ್ಯಾನ್) ಸಂಚಾರವೂ ಅಧಿಕ. ಕತ್ತಲಾಗುತ್ತಿದ್ದಂತೆ ಈ ಜಾಗದಲ್ಲಿ ಇರುವ ಗುಂಡಿಯು ಗೋಚರಿಸುವುದಿಲ್ಲ. ಈ ಗುಂಡಿಗೆ ಬಿದ್ದ ವಾಹನಗಳು ಮಗುಚಿಕೊಳ್ಳುವುದು ಖಚಿತ. ದ್ವಿಚಕ್ರ ವಾಹನಗಳು ಈ ಗುಂಡಿಗೆ ಬಿದ್ದರೆ ಸವಾರರ ಕತೆ ಮುಗಿದಂತೆಯೇ!

ಈ ಭಾಗದಲ್ಲಿ ಶಾಲಾ ಮಕ್ಕಳನ್ನು ದ್ವಿಚಕ್ರವಾಹನದಲ್ಲಿ ಕರೆದೊಯ್ಯುವ ತಾಯಂದಿರ ಸಂಖ್ಯೆ ಹೆಚ್ಚು. ಹಾಗಾಗಿ ಇವರೆಲ್ಲರ ಪ್ರಾಣವನ್ನು ರಕ್ಷಿಸುವ ಜವಾಬ್ದಾರಿ ಪಾಲಿಕೆ ಹಾಗೂ ಪೊಲೀಸರದ್ದು. ಅಘಘಾತ ನಡೆದು ಅನಾಹುತ, ಸಾವು–ನೋವು ಸಂಭವಿಸಿದ ನಂತರ ಯಾವುದೇ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ 'ಪೋಸು' ನೀಡಿದರೆ ಯಾವುದೇ ಪ್ರಯೋಜನವಿಲ್ಲ.

ಅಪಘಾತ ನಡೆದ ನಂತರ ದೂರು, ಎಫ್‌ಐಆರ್, ಮಹಜರ್, ಶವ ಪರೀಕ್ಷೆ, ತನಿಖೆ ಇತ್ಯಾದಿ ಕ್ರಮಗಳನ್ನು ನಡೆಸುವ ಬದಲಾಗಿ ಅನಾಹುತಕ್ಕೂ ಮುನ್ನ ಎಚ್ಚೆತ್ತುಕೊಳ್ಳುವುದು ಜಾಣತನ.

ಈ ಭಾಗದಲ್ಲಿ ಕಾಮಗಾರಿಗೆಂದು ರಸ್ತೆಗಳನ್ನು ಅಗೆದ ನಂತರ ಆ ಗುಂಡಿಗಳನ್ನು ಮುಚ್ಚದೇ ಬೇಜವಾಬ್ದಾರಿ ಮೆರೆದ ಕಾಂಟ್ರಾಕ್ಟರ್ ವಿರುದ್ಧ ಪೊಲೀಸರು ಈ ಕೂಡಲೇ ಕ್ರಿಮಿನಲ್ ಪ್ರಕರಣ ದಾಖಲಿಸಿ ದಂಡಿಸುವ ಜೊತೆಗೆ, ಪಾಲಿಕೆಯೂ ಕೂಡ ಈ ಕಾಮಗಾರಿ ಮಾಡಿದವರ ಬಾಲ ಕತ್ತರಿಸಬೇಕಾಗಿದೆ.

ಇದು ಸಾಧ್ಯವಾಗದಿದ್ದರೆ ಮೈಸೂರು ಪೊಲೀಸ್ ಆಯುಕ್ತರು ಮೈಸೂರು ನಗರ ಪಾಲಿಕೆ ಆಯುಕ್ತರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕಾಗುತ್ತದೆ. ಈ ಜಾಗದಲ್ಲಿ ಅಪಘಾತ ನಡೆದು ಅನಾಹುತ ಪ್ರಾಣ ಹಾನಿ ಸಂಭವಿಸಿದರೆ ಪಾಲಿಕೆ ಆಯುಕ್ತರು ಹಾಗೂ ಪೊಲೀಸ್ ಆಯುಕ್ತರೇ ಜವಾಬ್ದಾರರು.

ಈ ಕೂಡಲೇ ಪೊಲೀಸ್ ಆಯುಕ್ತರು ಹಾಗೂ ಪಾಲಿಕೆ ಆಯುಕ್ತರು ಕುವೆಂಪು ನಗರದ ಎಮ್ ಬ್ಲಾಕ್ ಒಂದನೇ ಅಡ್ಡ ರಸ್ತೆಯ 'ಯಮ' ಬ್ಲಾಕ್ ಬಳಿ ಇರುವ ಈ ಜಾಗಕ್ಕೆ ಭೇಟಿ ನೀಡಿ ಈ ರಸ್ತೆಯನ್ನು ವಿರೂಪಗೊಳಿಸಿದವರ ವಿರುದ್ಧ ಕ್ರಮ ಜರುಗಿಸಬೇಕಾಗಿದೆ.

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

■ ಬೀದಿ ನಾಯಿ ಹಾವಳಿ : ಆದೇಶ ಪರಿಶೀಲಿಸಲು ಸರ್ಕಾರ ಕೋರ್ಟ್ ಮೊರೆ ಹೋಗಲಿ

ಮಾನ್ಯರೆ,

ದೆಹಲಿಯಲ್ಲಿ ಬೀದಿ ನಾಯಿಗಳ ಉಪಟಳ ತಡೆಯಲು ಅವುಗಳನ್ನು ಹಿಡಿದು ಪುನರ್ವಸತಿ ಕೇಂದ್ರಗಳಿಗೆ ಬಿಡುವಂತೆ ಹಾಗೂ ಒಂದು ವಾರದಲ್ಲಿ ನಗರದಿಂದ ಬೀದಿ ನಾಯಿಗಳನ್ನು ಹೊರಹಾಕುವಂತೆ ಸುಪ್ರೀಂಕೋರ್ಟ್ ದೆಹಲಿ ಆಡಳಿತಕ್ಕೆ ಸೂಚಿಸಿದೆ. ನಾಯಿಗಳ ಹಾವಳಿ ಬಗ್ಗೆ ಕರ್ನಾಟಕ ವಿಧಾನ ಪರಿಷತ್‌ನಲ್ಲೂ ಚರ್ಚೆಯಾಗಿದೆ. ಸದಸ್ಯ ಬೋಜೇಗೌಡರು, ನಗರ, ಪಟ್ಟಣಗಳಲ್ಲಿ ಬೀದಿ ನಾಯಿಗಳ ಹಾವಳಿ ವಿಪರೀತವಾಗಿದೆ. ಇದಕ್ಕೆ ಏನಾದರೂ ಮಾಡಬೇಕು ಎಂದು ಸಭಾಧ್ಯಕ್ಷರನ್ನು ಕೋರಿದ್ದಾರೆ. ಲಸಿಕೆ ಹಾಕಿದರೆ ರೇಬಿಸ್ ತಡೆಗಟ್ಟಬಹುದು. ಆದರೆ ನಾಯಿ ಕಚ್ಚುವುದನ್ನು ತಡೆಗಟ್ಟಲು ಆಗುವುದಿಲ್ಲ. ಸರ್ಕಾರ ನಾಯಿಗಳನ್ನು ಹೊರ ಹಾಕುವುದಿರಲಿ, ಅವುಗಳಿಗೆ ಬಿರಿಯಾನಿ ಹಾಕಲು ಹೊರಟಿದೆ. ನಾಯಿಗಳ ಸ್ಥಿತಿ ಈಗ ಸಂಪೂರ್ಣ ಬದಲಾಗಿದೆ. ಹಿಂದಿನ ಆದೇಶವನ್ನು ಬದಲಿಸಿ ಎಂದು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿ ಎಂದು ಸರ್ಕಾರಕ್ಕೆ ಸಲಹೆ ನೀಡಿದ್ದಾರೆ. ದೇಶದೆಲ್ಲೆಡೆ ನಾಯಿಗಳ ಉಪಟಳ ಮಿತಿ ಮೀರಿದೆ. ಹಲವು ಮಕ್ಕಳ ಮೇಲೆ ಸಿಂಹಗಳ ಹಿಂಡು ದಾಳಿ ಮಾಡುವಂತೆ ದಾಳಿ ಮಾಡಿ ಮಕ್ಕಳನ್ನು ಬಲಿ ಪಡೆದಿವೆ. ಆದ್ದರಿಂದ ಇವುಗಳನ್ನು ಕೊಂದು ಬೀದಿ ನಾಯಿಗಳನ್ನು ನಿಯಂತ್ರಿಸಬೇಕು. ರಸ್ತೆಗಳಲ್ಲಿ ಓಡಾಡುವುದೇ ಕಷ್ಟವಾಗಿದೆ. ಸರ್ಕಾರ, ಜಿಲ್ಲಾಡಳಿತ, ಮಹಾನಗರಪಾಲಿಕೆಗಳು ನಾಯಿಗಳ ಹಾವಳಿಯ ಗಂಭೀರತೆಯನ್ನು ಕೋರ್ಟ್‌ಗೆ ಸೂಕ್ತ ಮಾಹಿತಿಗಳ ದಾಖಲೆ ಒದಗಿಸಿ ನಾಯಿಗಳನ್ನು ಕೊಲ್ಲಲು ಅನುಮತಿ ಪಡೆಯಲು ಮುಂದಾಗಲಿ. ಈ ಮೂಲಕ ಜನರಿಗೆ ನಾಯಿ ಕಡಿತದಿಂದ ಆಗುವ ಹಾವಳಿಯನ್ನು ಕಡಿಮೆ ಮಾಡಬಹುದು. ಹಾಗೂ ರೇಬಿಸ್ ಲಸಿಕೆಗಾಗಿ ಸರ್ಕಾರ ಖರ್ಚು ಮಾಡುವ ನೂರಾರು ಕೋಟಿ ಹಣವೂ ಉಳಿತಾಯವಾಗುತ್ತದೆ. ಈ ಬಗ್ಗೆ ಸಂಬಂಧಪಟ್ಟವರು ಸರ್ಕಾರದ ಗಮನಕ್ಕೆ ತರಲಿ.

–ಮುಳ್ಳೂರು ಪ್ರಕಾಶ್, ಕನಕ ದಾಸ ನಗರ, ಮೈಸೂರು.

■ ಆಶಾ ಕಾರ್ಯಕರ್ತೆಯರ ಬೇಡಿಕೆ ಈಡೇರಿಸಿ

ಮಾನ್ಯರೆ,

ಕೇಂದ್ರ ಸರ್ಕಾರದ ಪ್ರೋತ್ಸಾಹ ಧನ ಒಳಗೊಂಡಂತೆ ಆಶಾ ಕಾರ್ಯಕರ್ತೆಯರಿಗೆ ಮಾಸಿಕ 10 ಸಾವಿರ ರೂ. ಗೌರವ ಧನ ನೀಡುವುದರ ಜೊತೆಗೆ ಅವರ ವಿವಿಧ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸರ್ಕಾರ ಸ್ಪಂದಿಸುವುದು ಅತ್ಯವಶ್ಯಕ. ನಮ್ಮ ರಾಜ್ಯ ಸರ್ಕಾರ ಈ ವರ್ಷದ ಬಜೆಟ್ ಮಂಡಿಸಿದಾಗ ಆಶಾ ಕಾರ್ಯಕರ್ತೆಯರಿಗೆ ವಿಶಿಷ್ಟ ಯೋಜನೆಯನ್ನು ಏಪ್ರಿಲ್ ತಿಂಗಳಲ್ಲಿ ನೀಡುವುದಾಗಿ ಮುಖ್ಯಮಂತ್ರಿಗಳು ತಿಳಿಸಿದ್ದರೂ ಇದುವರೆಗೂ ಯಾವುದೇ ಬೆಳವಣಿಗೆಯಾಗಿಲ್ಲದಿರುವುದು, ಆಶಾ ಕಾರ್ಯಕರ್ತೆಯರ ಅಹೋರಾತ್ರಿ ಧರಣಿಗೆ ಕಾರಣವಾಗಿದೆ. ಕೋವಿಡ್ ಸಮಯದಲ್ಲಿ ಆಶಾ ಕಾರ್ಯಕರ್ತೆಯರು ನೀಡಿದ ಸೇವೆ ತುಂಬಾ ಶ್ಲಾಘನೀಯ, ಸರ್ಕಾರ ಮತ್ತು ಜನರ ನಡುವೆ ಸೇತುವೆಯಾಗಿ ಕೆಲಸ ನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರ ಬೇಡಿಕೆಗಳನ್ನು ಆದಷ್ಟು ಬೇಗ ಈಡೇರಿಸುವುದು ಅತ್ಯಗತ್ಯ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಶ್ರಾವಣ ಬಂದಿತೋ ಜಗಕೆ?..

ಆಷಾಢ ಮಾಸ ಬರುತ್ತಿದ್ದಂತೆ ಓಹೋ ಇನ್ನೇನು ಶ್ರಾವಣ ಬಂದಿತು ಎಂಬ ಭಾವನೆ ಮನವನ್ನು ತುಂಬುತ್ತದೆ. ಶ್ರಾವಣ ಎಂದರೆ ಹಬ್ಬಗಳ ಸಾಲು ಸಾಲು ಆರಂಭ ವಾಯಿತೆಂದೇ ಅರ್ಥ. ಮನೆಮನೆಯ ಮೂಲೆಗಳೆಲ್ಲವೂ ಸ್ವಚ್ಛವಾಗಿ, ಶ್ರಾವಣದ ಸ್ವಾಗತಕ್ಕೆ ಸಜ್ಜಾಗುತ್ತವೆ. ಹೆಂಗಳೆಯರ ಮೇಲೇ ಹೆಚ್ಚಿನ ಜವಾಬ್ದಾರಿ. ಅವರ ನೇತೃತ್ವದಲ್ಲೇ ಎಲ್ಲವೂ ನಡೆಯುವುದು, ನಡೆಯಬೇಕಾದುದು. ಶ್ರಾವಣವು ಭಾರತೀಯರ ಮನದಲ್ಲಿ ಒಂದು ಚೈತನ್ಯ ತುಂಬುವ ಮಾಸ. ಜಿಟಿ ಜಿಟಿ ಮಳೆ ಜೊತೆಗೂಡುತ್ತದೆ. ಶ್ರಾವಣ ಬಂದಿತೋ ಜಗಕೆ ಎಂದು ನಮ್ಮ ವರಕವಿ ಬೇಂದ್ರೆಯವರೂ ಹಾಡಿ ಖುಷಿ ಪಟ್ಟಿದ್ದಾರೆ. ನಮ್ಮ ಸಂಸ್ಕೃತಿ, ಪರಂಪರೆ ಆಚರಣೆ ಎಲ್ಲವೂ ಮಿಳಿತಗೊಂಡು ಮನೆ ಮಂದಿಗೆಲ್ಲ ಹರ್ಷ ತರುವಂತಹ ವಾತಾವರಣವನ್ನು ನಿರ್ಮಿಸಿ ಬಿಡುತ್ತದೆ. ಭೀಮನ ಅಮಾವಾಸ್ಯೆಯಿಂದ ಮೊದಲುಗೊಂಡು ನಾಗರ ಚೌತಿ, ನಾಗರ ಪಂಚಮಿ, ಶುಕ್ರವಾರದ ಮಹಾಲಕ್ಷ್ಮಿ, ಮಂಗಳವಾರದ ಗೌರಿ, ಶುಕ್ರವಾರದ ಶ್ರಾವಣ ಗೌರಿ, ಶನಿವಾರದ ಆಂಜನೇಯ, ಉಪಾಕರ್ಮ, ರಂಗು ರಂಗಿನ ಹೋಳಿ, ಶ್ರೀ ರಾಘವೇಂದ್ರರ ಆರಾಧನೆ, ಶ್ರೀಕೃಷ್ಣ ಜನ್ಮಾಷ್ಟಮಿ, ಹೀಗೆ ದಾಂಗುಡಿಯಿಡುವ ಹಬ್ಬದ ಸಾಲುಗಳು ಮಕ್ಕಳಿಗೆ ಖುಷಿಯನ್ನು ತಂದರೆ, ಹೆಂಗಳೆಯರಿಗೆ ಸಾಕಪ್ಪಾ ಸಾಕು ಎಂದೆನಿಸಿಬಿಟ್ಟರೂ ಅಚ್ಚರಿ ಏನಿಲ್ಲ.

ಆಯಾ ಋತುವಿಗೆ ತಕ್ಕಂತೆ ಪ್ರಕೃತಿಯಲ್ಲಿ ಆಗುವ ಬದಲಾವಣೆಗಳಿಗೆ ಅನುಸಾರವಾಗಿ ಆಯಾ ಹಬ್ಬಗಳನ್ನು ಆಚರಿಸುವ ಪದ್ಧತಿಯನ್ನು ನಮ್ಮ ಹಿರಿಯರು ಹಾಕಿಕೊಟ್ಟಿದ್ದಾರೆ. ಅಂದು ಮಾಡುವ ಆಚರಣೆಗಳಿರಲಿ, ತಿಂಡಿ ತಿನಿಸುಗಳಿರಲಿ, ಎಲ್ಲಕ್ಕೂ ಒಂದು ಅರ್ಥವಿದೆ, ಪೌರಾಣಿಕ ಹಿನ್ನೆಲೆ ಇದೆ, ಹುಡುಕಿದರೆ ವೈಜ್ಞಾನಿಕ ಹಿನ್ನೆಲೆಯೂ ಖಂಡಿತವಾಗಿ ಸಿಗುತ್ತದೆ. ಅದನ್ನು ಅರ್ಥ ಮಾಡಿಕೊಳ್ಳುವ ಆಸಕ್ತಿ, ವ್ಯವಧಾನ ಮತ್ತು ಮನಸ್ಸು ನಮಗೆ ಇರಬೇಕಷ್ಟೆ. ನಮ್ಮ ಹಬ್ಬಗಳನ್ನು ಏಕೆ ಆಚರಿಸುತ್ತೇವೆ ಎಂಬುದರ ಹಿನ್ನೆಲೆಯನ್ನು ನಮ್ಮ ಮುಂದಿನ ಪೀಳಿಗೆಗೆ ಮುಟ್ಟಿಸುವ ಜವಾಬ್ದಾರಿ ಹಿರಿಯರ ಮೇಲೆ ಇರುತ್ತದೆ ಎಂಬುದನ್ನು ಮರೆಯುವಂತೆಯೇ ಇಲ್ಲ. ಹಬ್ಬ ಎಂದರೆ ಹೊಸ ಬಟ್ಟೆ, ಪಾಯಸದ ಊಟ ಎಂದಷ್ಟೇ ಅವರು ಭಾವಿಸದಂತೆ ಆಯಾ ಹಬ್ಬದ ಹಿನ್ನೆಲೆ



ಯನ್ನು, ಮಹತ್ವವನ್ನು ಮಕ್ಕಳಿಗೆ ತಿಳಿ ಹೇಳಿದಲ್ಲಿ, ಅವರೂ ದೊಡ್ಡವರಾದಾಗ ನಮ್ಮ ಸಂಸ್ಕೃತಿ, ಪರಂಪರೆಯನ್ನು, ಆಚಾರ ವಿಚಾರಗಳನ್ನು ಉಳಿಸಿಕೊಂಡು ಹೋಗುವುದರಲ್ಲಿ ಸಂದೇಹ ಇರುವುದಿಲ್ಲ ಅಲ್ಲವೇ?

ಭಾರತವು ಅನೇಕ ಧರ್ಮಗಳ, ಭಾಷೆಗಳ, ಸಂಪ್ರದಾಯಗಳ ತವರೂರು. ಅನೇಕತೆಯಲ್ಲಿ ಏಕತೆಯೇ ನಮ್ಮ ವಿಶೇಷತೆ. ಇಲ್ಲಿನ ವಿವಿಧ ರಾಜ್ಯಗಳಲ್ಲಿ ಒಂದೇ ಹಬ್ಬವನ್ನು ಬೇರೆ ಬೇರೆ ಹೆಸರಿನಿಂದ, ಬೇರೆ ಬೇರೆ ಪದ್ಧತಿಯಲ್ಲಿ ಆಚರಿಸುವುದೂ ಉಂಟು. ಅಣ್ಣ–ತಂಗಿಯರ ವಿಶೇಷ ದಿನ ಎಂದರೆ ಪಂಚಮಿ. ಉತ್ತರ ಕರ್ನಾಟಕದಲ್ಲಿ ಇದು ಬಹಳ ಜೋರಾಗಿ ಆಚರಿಸಲ್ಪಡುತ್ತದೆ. ಪಂಚಮಿ ಹಬ್ಬ ಉಳಿದಾವ ದಿನ ನಾಕ, ಅಣ್ಣ ಬರಲಿಲ್ಲ ಯಾಕೋ ಕರಿಯಾಕ ಎಂದು ಅಲವತ್ತುಕೊಳ್ಳುವ ತಂಗಿಯ ಹಾಡು ಇದನ್ನು ಚನ್ನಾಗಿ ಧ್ವನಿಸುತ್ತದೆ. ದೊಡ್ಡ ದೊಡ್ಡ ಮರಗಳಿಗೆ ಜೋಕಾಲಿಯನ್ನು ಕಟ್ಟಿ, ದೊಡ್ಡವರು, ಮಕ್ಕಳು ಎಲ್ಲರೂ ಜೀಕುತ್ತಾ ಸಂಭ್ರಮಿಸುತ್ತಾರೆ. ತಂಬಿಟ್ಟು, ವಿವಿಧ ಉಂಡೆಗಳು ಘಮಘಮಿಸುತ್ತವೆ. ಕೊಬ್ಬರಿ ಬಟ್ಟಲ ನಡುವೆ ದಾರ ಪೋಣಿಸಿ ಬೋರ್ ಬಗರಿ ಆಡುತ್ತಾರೆ ಮಕ್ಕಳು. ಬಯಲು ಸೀಮೆಯಲ್ಲಿ ಅಕ್ಕ ತಂಗಿಯರು ಅಣ್ಣ ತಮ್ಮಂದಿರ ಬೆನ್ನಿಗೆ ಹಾಲು ತುಪ್ಪ ಹಚ್ಚುವ ಸಂಪ್ರದಾಯ ಇದೆ. ಹುತ್ತಕ್ಕೆ ಹೋಗಿ ಪೂಜೆ ಸಲ್ಲಿಸಿ ಬರುತ್ತಾರೆ. ಉತ್ತರದಿಂದ ದಕ್ಷಿಣಕ್ಕೂ ಕಾಲಿಟ್ಟಿರುವ ರಕ್ಷಾ ಬಂಧನ್ ರಾಖಿ ಕಟ್ಟುವ ಸಂಪ್ರದಾಯವನ್ನು ಇಲ್ಲಿಯೂ ಜನಪ್ರಿಯಗೊಳಿಸಿದೆ.

ಶ್ರಾವಣದ ಸಂಭ್ರಮ ಮುಗಿಯುತ್ತಿದ್ದಂತೆಯೇ ಭಾದ್ರಪದದ ಆಗಮನ ಆಗುತ್ತದೆ. ಮೂರನೆಯ ದಿನಕ್ಕೇ ಕೈಲಾಸದಿಂದ ತಾಯಿ ಗೌರಮ್ಮ ಆಗಮಿಸುತ್ತಾಳೆ. ಅವಳ ಹಿಂದೆಯೇ ಪುತ್ರ ಗಜಾನನನೂ ಬರುವನು. ಪುಟ್ಟ ಪುಟ್ಟ ಗಣೇಶನಿಂದ ಹಿಡಿದು, ಅತೀ ದೊಡ್ಡ ದೊಡ್ಡ ಗಣೇಶನ ವಿಗ್ರಹಗಳು ಮಾರುಕಟ್ಟೆಯಲ್ಲಿ ರಾರಾಜಿಸುತ್ತವೆ. ಪ್ಲಾಸ್ಟರ್ ಆಫ್ ಪ್ಯಾರಿಸಿನ ಮೂರ್ತಿಯನ್ನು ಬಳಸದೆ ಪ್ರಕೃತಿ ಸ್ನೇಹಿಯಾದ ಮಣ್ಣಿನ ಗಣಪನನ್ನು ಪೂಜಿಸಿ ಎಂಬ ಎಚ್ಚರಿಕೆಯ ಮಾತುಗಳೂ ದನಿಗೂಡುತ್ತವೆ. ಎಲ್ಲರ ಮನೆಯಲ್ಲೂ ಕಡುಬು, ಮೋದಕಗಳ ಘಮ. ರಸ್ತೆರಸ್ತೆಯಲ್ಲೂ ಗಣಪತಿ ಸ್ಥಾಪಿತನಾಗುತ್ತಾನೆ. ಅವನ ಎದುರಲ್ಲಿ ನಡೆಯುವ ಚಿತ್ರ ವಿಚಿತ್ರ ಹಾಡು ನೃತ್ಯಗಳನ್ನು ಅವನು ಸಹಿಸಿಕೊಳ್ಳಲೇಬೇಕು. ಮಹಾರಾಷ್ಟ್ರದಲ್ಲಿ ಗಣಪತಿಯ ಮೂರ್ತಿಗಳನ್ನು ಪೂಜಿಸುವ ಪದ್ಧತಿಯು ಅತ್ಯಂತ ಆಕರ್ಷಕ. ದಿನಾ ಒಂದೊಂದು ಬಡಾವಣೆಗೆ ಹೋದರೂ ಸಾಕು, ಹಲವಾರು ಬೃಹತ್ ನವೀನ ರೀತಿಯ ಗಣಪನನ್ನು ನೋಡಬಹುದು ಅಲ್ಲಿ. ಗಣಪನನನ್ನು ತಯಾರು ಮಾಡುವ ಕಲಾವಿದರ ಕಲ್ಪನೆಗೆ ಪ್ರತೀ ವರುಷ ಹೊಸ ಹೊಸ ವಸ್ತು ವಿಷಯಗಳು ಸಿಗುತ್ತಲೇ ಇರುತ್ತವೆ.

> ಪ್ರತೀ ಹಬ್ಬವೂ ದೇವರ ವಿಶೇಷ ಪೂಜೆಯಿಂದಲೇ ಆರಂಭವಾಗುವುದು. ಆಧ್ಯಾತ್ಮದ ಜೊತೆಗೆ ದೈನಂದಿನ ಏಕತಾನತೆಯಿಂದ ಬಿಡುವು ಸಿಕ್ಕಿ, ಹೊಸ ಉಲ್ಲಾಸ ತುಂಬಲು ಹಬ್ಬಗಳ ಆಚರಣೆಯನ್ನು ನಮ್ಮ ಹಿರಿಯರು ರೂಢಿಗೆ ತಂದಿದ್ದಾರೆ. ಅದನ್ನು ಅರ್ಥಪೂರ್ಣವಾಗಿ ಆಚರಿಸುವುದರ ಮೂಲಕ ಅದಕ್ಕೆ ಮತ್ತಷ್ಟು ಮೆರುಗನ್ನು ತುಂಬೋಣ.

ಭಾದ್ರಪದ ಮುಗಿಯುತ್ತಿದ್ದಂತೆಯೇ ಕಾಲಿಡುತ್ತದೆ ಆಶ್ವೀಜ ಮಾಸ. ಶರನ್ನವರಾತ್ರಿಯ ವೈಭವ. ಜಗತ್ತಿನ ಎಲ್ಲ ಮೂಲೆಗಳಿಂದ ಮೈಸೂರಿನ ದಸರಾ ನೋಡಲೆಂದೇ ಜನರು ಬರುತ್ತಾರೆ. ವಿಜಯದಶಮಿಯಂದು ನಡೆವ ಮೆರವಣಿಗೆ, ಪಂಜಿನ ಕವಾಯತು, ವಸ್ತು ಪ್ರದರ್ಶನ, ಒಂಬತ್ತು ದಿನಗಳೂ ವಿವಿಧ ಅಲಂಕಾರದಿಂದ ಶೋಭಿಸುವ ತಾಯಿ ಚಾಮುಂಡಿಯ ದರ್ಶನ, ಒಂದೇ ಎರಡೇ ಆಕರ್ಷಣೆಗಳು ದಸರಾದಲ್ಲಿ ಮನೆ ಮನೆಯಲ್ಲೂ ಗೊಂಬೆ ಕೂರಿಸುವ ಸಂಪ್ರದಾಯವು ನಮ್ಮಲ್ಲಿ ಇರುವಂತೆ ಮತ್ತೆ ಕೆಲವು ರಾಜ್ಯಗಳಲ್ಲೂ ರೂಢಿಯಲ್ಲಿದೆ. ಹತ್ತು ದಿನಗಳ ನಮ್ಮ ದಸರಾ ಬಂಗಾಳದಲ್ಲಿ ದುರ್ಗಾ ಪೂಜಾ ಆಗುತ್ತದೆ. ಬಂಗಾಳದಲ್ಲಿ ಇದು ದುರ್ಗಾ ಮಾತೆಯ ವಿಶೇಷ ಪೂಜಾ ಸಂದರ್ಭ. ರಸ್ತೆ ರಸ್ತೆಗಳಲ್ಲೂ ದೊಡ್ಡ ದೊಡ್ಡ ದುರ್ಗೆಯ ಮೂರ್ತಿಗಳನ್ನು ಭವ್ಯವಾಗಿ ಅಲಂಕರಿಸಿ ಪೂಜಿಸಲಾಗುತ್ತದೆ. ಕೊನೆಯ ದಿನ ನಮ್ಮ ಗಣೇಶನನ್ನು ವಿಸರ್ಜಿಸುವಂತೆ ಅವಳನ್ನು ನೀರಿನಲ್ಲಿ ವಿಸರ್ಜಿಸಲಾಗುತ್ತದೆ.

ಇನ್ನೇನು, ಬಂದಿತು ಕಾರ್ತೀಕ, ದೀಪಾವಳಿ. ಆಗ ಪ್ರಕೃತಿಯಲ್ಲಿ ಹುಳುಗಳ ಹಾವಳಿ ಜೋರು. ಆಗ ಮನೆಯ ಮುಂದೆ ಹಚ್ಚಿಡುವ ಸಾಲು ದೀಪಗಳಿಂದ ಅವು ಮನೆಯೊಳಗೆ ಬರಲಾರವು. ಮೊದಲ ದೀಪಾವಳಿಯನ್ನು ಆಚರಿಸುವ ಅಳಿಯಂದಿರಿಗೆ ಅತ್ತೆಯ ಮನೆಯಲ್ಲಿ ವಿಶೇಷ ಆತಿಥ್ಯ, ಬಗೆ ಬಗೆಯ ಸಿಹಿ ತಿಂಡಿಗಳ ಸುರಿಮಳೆ. ಚಳಿಗಾಲಕ್ಕೆ ಹೊಂದುವ ಖಾದ್ಯಗಳು. ಕಾರ್ತೀಕ ಸೋಮವಾರಗಳಂದು ಈಶ್ವರನಿಗೆ ವಿಶೇಷ ಪೂಜೆ, ಎಳ್ಳು ದೀಪ, ದೀಪ ದಾನ ಇತ್ಯಾದಿ. ಹೀಗೇ ಮುಂದುವರೆಯುತ್ತಾ ಮತ್ತೆ ಚೈತ್ರದಲ್ಲಿ ಯುಗದ ಆದಿ, ಶ್ರೀರಾಮ ನವಮಿ– ಬಿಸಿಲ ಬೇಗೆಗೆ ಪಾನಕ, ನೀರು ಮಜ್ಜಿಗೆ, ಮಹಾ ಶಿವರಾತ್ರಿ ಸುಗ್ಗಿಯ ಸಂಭ್ರಮವು ನಮ್ಮಲ್ಲಿ ಸಂಕ್ರಾಂತಿ ಆದರೆ, ಮತ್ತೆ ಕೆಲವರಿಗೆ ಅದು ಪೊಂಗಲ್ ಎಂದು ಕರೆಸಿಕೊಳ್ಳುತ್ತದೆ. ಅಂದು ನಮ್ಮ ಅಡುಗೆಯಲ್ಲಿ ಮುಖ್ಯವಾಗಿ ತಯಾರಾಗುವ ಹುಗ್ಗಿಯು ಅವರಲ್ಲಿ ಪೊಂಗಲ್ ಎನಿಸಿಕೊಳ್ಳುತ್ತದೆ. ರೈತಾಪಿಗಳಿಗೆ ಇದು ಬಲು ಸಂಭ್ರಮ ತರುವ ಹಬ್ಬ. ನಮ್ಮಲ್ಲಿ ರಾಸುಗಳಿಗೆ ಕಿಚ್ಚು ಹಾಯಿಸುವ ಸಂಪ್ರದಾಯ ಇದೆ .ಅವು ಕೀಟಬಾಧೆಯಿಂದ ಮುಕ್ತಿ ಹೊಂದಲು.

ಪ್ರತೀ ಹಬ್ಬವೂ ದೇವರ ವಿಶೇಷ ಪೂಜೆಯಿಂದಲೇ ಆರಂಭವಾಗುವುದು. ಆಧ್ಯಾತ್ಮದ ಜೊತೆಗೆ ದೈನಂದಿನ ಏಕತಾನತೆಯಿಂದ ಬಿಡುವು ಸಿಕ್ಕಿ, ಹೊಸ ಉಲ್ಲಾಸ ತುಂಬಲು ಹಬ್ಬಗಳ ಆಚರಣೆಯನ್ನು ನಮ್ಮ ಹಿರಿಯರು ರೂಢಿಗೆ ತಂದಿದ್ದಾರೆ. ಅದನ್ನು ಅರ್ಥಪೂರ್ಣವಾಗಿ ಆಚರಿಸುವುದರ ಮೂಲಕ ಅದಕ್ಕೆ ಮತ್ತಷ್ಟು ಮೆರುಗನ್ನು ತುಂಬೋಣ.



ಸಿಸಿ ಕ್ಲಬ್‌ನಲ್ಲಿ ಸ್ವಾತಂತ್ರ್ಯೋತ್ಸವ; ಅಭಿನಂದನೆ

ಮೈಸೂರಿನ ಕಾಸ್ಮೋಪಾಲಿಟನ್ ಕ್ಲಬ್‌ನಲ್ಲಿ 79ನೇ ಸ್ವಾತಂತ್ರ್ಯ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಆತಿಥ್ಯ ರತ್ನ ಪ್ರಶಸ್ತಿ ಪುರಸ್ಕೃತರಾದ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಅವರನ್ನು ಅಭಿನಂದಿಸಲಾಯಿತು. ಇದೇ ವೇಳೆ ಶಾಸಕರಾಗಿರುವ ಕ್ಲಬ್‌ನ ಸದಸ್ಯ ಕೆ.ಹರೀಶ್‌ಗೌಡ, ಅತೀ ಕಿರಿಯ ವಯಸ್ಸಿನ ಸಿಎ ವಿಶ್ವಾಸ್, 2026–27ನೇ ಸಾಲಿನ ನಿಯೋಜಿತ ರೋಟರಿ ಗವರ್ನರ್ ಯಶಸ್ವಿನಿ ಸೋಮಶೇಖರ್ ಅವರನ್ನೂ ಸನ್ಮಾನಿಸಲಾಯಿತು. ಕ್ಲಬ್‌ನ ಅಧ್ಯಕ್ಷ ಎಂ.ವಿ.ಶ್ರೀನಿವಾಸ್, ಕಾರ್ಯದರ್ಶಿ ಆರ್.ಆನಂದ್, ಉಪಾಧ್ಯಕ್ಷ ಕೆ.ಬಿ.ನಾಗೇಂದ್ರ, ಖಜಾಂಚಿ ಬಿ.ಎನ್.ಶೇಷಾದ್ರಿ ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು.

ಇಂದು ಕ್ರೀಡಾಕೂಟ

ಮೈಸೂರು: ಈಶಾ ಫೌಂಡೇಷನ್‌ನ 17ನೇ ವರ್ಷದ ಗ್ರಾಮೋತ್ಸವದ ಅಂಗವಾಗಿ ರೂರಲ್ ಪ್ರೀಮಿಯರ್ ಲೀಗ್ ಅನ್ನು ಆ.17ರಂದು ನಂಜನಗೂಡಿನ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಪುರುಷರಿಗೆ ವಾಲಿಬಾಲ್, ಮಹಿಳೆಯರಿಗೆ ಥ್ರೋಬಾಲ್‌ನ ಪಂದ್ಯಾವಳಿ ಆಯೋಜಿಸಲಾಗಿದೆ. ಫೈನಲ್‌ನಲ್ಲಿ ಬಹುಮಾನವಾಗಿ ವಾಲಿಬಾಲ್ 5 ಲಕ್ಷ, ಥ್ರೋಬಾಲ್ 5 ಲಕ್ಷ ನೀಡಲಾಗುತ್ತದೆ.

ವಕೀಲಿ ವೃತ್ತಿ ಟೆಸ್ಟ್ ಕ್ರಿಕೆಟ್‌ನಂತೆ ಸುದೀರ್ಘ ಪರಿಶ್ರಮದಿಂದ ಫಲ

ಯುವ ವಕೀಲರಿಗೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಉಜ್ವಲ್ ಭೂಯನ್ ಕಿವಿಮಾತು



ಮೈಸೂರಿನ ಕುವೆಂಪುನಗರದಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜು ಆವರಣದಲ್ಲಿ 17ನೇ ಪದವೀಧರ ದಿನಾಚರಣೆಯಲ್ಲಿ ಎಲ್‌ಎಲ್‌ಎಂ ಹಾಗೂ ವಿವಿಧ ಹಂತದ ಎಲ್‌ಎಲ್‌ಬಿ ವಿದ್ಯಾರ್ಥಿಗಳಿಗೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಉಜ್ವಲ್ ಭೂಯನ್ ಪದವಿ ಪ್ರಮಾಣ ಪತ್ರ ವಿತರಿಸಿದರು. ಈ ವೇಳೆ ಹೈಕೋರ್ಟ್ ನ್ಯಾಯಮೂರ್ತಿ ಅನು ಶಿವರಾಮನ್, ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ ಇದ್ದರು.

ಮೈಸೂರು, ಆ.16(ಎಸ್‌ಪಿಎನ್)– ವಕೀಲ ವೃತ್ತಿ 20–20, ಏಕ ದಿನ ಪಂದ್ಯದಂತಲ್ಲ. ಬದಲಾಗಿ ಟೆಸ್ಟ್ ಕ್ರಿಕೆಟ್‌ನಂತೆ ದೀರ್ಘವಾದ ಇನ್ನಿಂಗ್ಸ್ ಹೊಂದಿರುತ್ತದೆ ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಉಜ್ವಲ್ ಭೂಯನ್, ಯುವ ವಕೀಲರಿಗೆ ಕಿವಿಮಾತು ಹೇಳಿದರು.

ಮೈಸೂರು ಕುವೆಂಪುನಗರದ ನ್ಯೂ ಕಾಂತರಾಜ ಅರಸ್ ರಸ್ತೆಯ ಜೆಎಸ್‌ಎಸ್ ಕಾನೂನು ಕಾಲೇಜು ಆವರಣದಲ್ಲಿ 17ನೇ ಪದವೀಧರ ದಿನಾಚರಣೆಯಲ್ಲಿ ಎಲ್‌ಎಲ್‌ಎಂ ಹಾಗೂ ಎಲ್‌ಎಲ್‌ಬಿ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ವಿತರಿಸಿ ಮಾತನಾಡಿದ ನ್ಯಾಯಮೂರ್ತಿಗಳು, ಯುವ ವಕೀಲರು, ಟೆಸ್ಟ್ ಕ್ರಿಕೆಟ್‌ನಂತೆ ವಕೀಲಿ ವೃತ್ತಿಯಲ್ಲಿ ಯಶಸ್ಸು ಹೊಂದಲು ನಿರಂತರ ಅಧ್ಯಯನ, ದೇಶದ ಸಮಗ್ರತೆ ಹಾಗೂ ತಾಳ್ಮೆ, ಹಿರಿಯರ ಮಾರ್ಗದರ್ಶನ ಅತೀ ಮುಖ್ಯ ಎಂದು ಕಿವಿಮಾತು ಹೇಳಿದರು.

ದೇಶದ ಪ್ರಗತಿಗೆ, ಅಂಬೇಡ್ಕರ್ ಅವರು ಅತ್ಯುತ್ತಮವಾದ ಸಂವಿಧಾನವನ್ನು ದೇಶಕ್ಕೆ ನೀಡಿದ್ದಾರೆ. ಅವರು ರಚಿಸಿದ ಸಂವಿಧಾನದಿಂದ ದೇಶದ ಜನರು ಸಮಾನತೆ, ಭಾತೃತ್ವ ಅಳವಡಿಸಿಕೊಳ್ಳುವ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ. ಅಲ್ಲದೆ, ದೇಶದ ನ್ಯಾಯದಾನವನ್ನು ಮತ್ತಷ್ಟು ಸದೃಢಗೊಳಿಸುವ ಜವಾಬ್ದಾರಿ ನಮ್ಮ– ನಿಮ್ಮೆಲ್ಲರದು ಎಂದು ಸಲಹೆ ನೀಡಿದರು.

ಕಾನೂನು ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ವಕೀಲ ವೃತ್ತಿ ಜೊತೆಗೆ, ಖಾಸಗಿ ಕ್ಷೇತ್ರದಲ್ಲೂ ಉತ್ತಮ ಅವಕಾಶಗಳಿವೆ. ಈ ವೃತ್ತಿಯಲ್ಲಿ ಯಶಸ್ಸು ಗಳಿಸಲು, ಇಲ್ಲಿನ ಒಳನೋಟಗಳನ್ನು ಅರಿತುಕೊಳ್ಳಬೇಕು ಮತ್ತು ವ್ಯಾಜ್ಯಗಳ ನಿರ್ವಹಣೆ, ಸಮಯ ಪರಿಪಾಲನೆ ಅತೀ ಮುಖ್ಯವಾಗುತ್ತದೆ. ವಕೀಲಿ ವೃತ್ತಿ ಆಯ್ಕೆ ಮಾಡಿಕೊಳ್ಳುವ ಮುನ್ನ ಈ ಕ್ಷೇತ್ರದ ಬಗ್ಗೆ ಅಧ್ಯಯನ ಮಾಡಬೇಕು. ಇದಕ್ಕೆ ಬಾರ್ ಕೌನ್ಸಿಲ್ ಆಫ್ ಇಂಡಿಯಾ ಹಾಗೂ ಇತರೆ ರಾಜ್ಯದಲ್ಲಿನ ಬಾರ್ ಕೌನ್ಸಿಲ್‌ನಲ್ಲಿರುವ ಕಾನೂನು ಪುಸ್ತಕಗಳನ್ನು ಸಮಗ್ರವಾಗಿ ಬಳಸಿಕೊಳ್ಳುವಂತೆ ಸಲಹೆ ನೀಡಿದರು.

ಫಾಲಿ ಎಸ್.ನಾರಿಮನ್ ಆತ್ಮಕಥೆ ಅಧ್ಯಯನ ಮಾಡಿ: 'ಬಿಫೋರ್ ಮೆಮೊರಿ ಫೇಲ್' ಎಂಬುದು ಫಾಲಿ ಎಸ್.ನಾರಿಮನ್ ಅವರ ಆತ್ಮಕಥೆಯಾಗಿದ್ದು, ಈ ಪುಸ್ತಕದಲ್ಲಿ, ಭಾರತದ ಕಾನೂನು ವ್ಯವಸ್ಥೆಯಲ್ಲಿ ತಮ್ಮ ವೃತ್ತಿಜೀವನವನ್ನು ಮತ್ತು ಅನುಭವಗಳನ್ನು ಹಂಚಿಕೊಂಡಿದ್ದಾರೆ. ಫಾಲಿ ಎಸ್. ನಾರಿಮನ್ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲರಾಗಿದ್ದರು. ಅವರು ನವೆಂಬರ್ 1950 ರಲ್ಲಿ ಬಾಂಬೆ ಹೈಕೋರ್ಟ್‌ನಲ್ಲಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರಲ್ಲದೆ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಪ್ರತಿಷ್ಠಿತ ಹುದ್ದೆಗಳನ್ನು ಹೊಂದಿದ್ದರು. 'ಬಿಫೋರ್ ಮೆಮೊರಿ ಫೇಲ್ಸ್' ಪುಸ್ತಕವು ಅವರ ಜೀವನ ಮತ್ತು ವೃತ್ತಿಜೀವನದ ಬಗ್ಗೆ ಆಸಕ್ತಿದಾಯಕ ಒಳನೋಟಗಳನ್ನು ಒಳಗೊಂಡಿದೆ. ವಿಶೇಷವಾಗಿ ಕಾನೂನು ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವವರು ಈ ಕೃತಿ ಅಧ್ಯಯನ ಮಾಡಬೇಕು ಎಂದು ಸಲಹೆ ನೀಡಿದರು.

ಯಾವುದೇ ರಾಜೀ ಇಲ್ಲ: ನ್ಯಾಯಾಂಗದ ಸ್ವಾತಂತ್ರ್ಯದಲ್ಲಿ ಯಾವುದೇ ರಾಜಿ ಇಲ್ಲ. ಕೆಲವೆಡೆ ರಾಜಕೀಯ, ಕಾರ್ಯಾಂಗದ ಒತ್ತಡ ನ್ಯಾಯಾಂಗದ ಅನುಭವಕ್ಕೂ ಬಂದಿರಬಹುದು. ಆದರೆ ದೇಶದ ನ್ಯಾಯಾಂಗ ವ್ಯವಸ್ಥೆಗೆ ತಮ್ಮ ಸಾಮರ್ಥ್ಯವನ್ನು ಉಳಿಸಿಕೊಳ್ಳುವ ಶಕ್ತಿಯಿದೆ. ಭಾರತೀಯ ನ್ಯಾಯಾಂಗ ವ್ಯವಸ್ಥೆಯು ತನ್ನದೇ ಆದ ಇತಿಹಾಸ ಮತ್ತು ಪರಂಪರೆಯನ್ನು ಹೊಂದಿದ್ದು, ಹಿರಿಯರ ಮಾರ್ಗದರ್ಶನದಿಂದ ಭದ್ರ ಬುನಾದಿ ಹೊಂದಿದೆ. ಈ ವ್ಯವಸ್ಥೆಯಲ್ಲಿ ದೇಶದ ವಿವಿಧ ಹಂತದಲ್ಲಿ ಸಾವಿರಾರು ಮಂದಿ ನ್ಯಾಯಾಧೀಶರು, ವಿವಿಧ ರಾಜ್ಯದ ಹೈಕೋರ್ಟ್ ನ್ಯಾಯಮೂರ್ತಿಗಳು ಹಾಗೂ 34 ಮಂದಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳು ಕಾರ್ಯನಿರ್ವಹಿಸಿದ್ದು, ಎಲ್ಲಾ ಒತ್ತಡಗಳನ್ನು ನಿಭಾಯಿಸುವ, ಸಂವಿಧಾನದ ಘನತೆಗೆ ಕಾಪಾಡುವ ನಿಟ್ಟಿನಲ್ಲಿ ನಮ್ಮ ಪೂರ್ವಿಕರು ಮಾರ್ಗದರ್ಶನ ನೀಡಿದ್ದಾರೆ.

ಪದವಿ ಪ್ರದಾನ: ಈ ಸಂದರ್ಭದಲ್ಲಿ ಬಿ.ಎ. ಎಲ್‌ಎಲ್‌ಬಿಯಿಂದ 38 ವಿದ್ಯಾರ್ಥಿಗಳು, ಬಿಬಿಎ, ಎಲ್‌ಎಲ್‌ಬಿಯಿಂದ 45 ವಿದ್ಯಾರ್ಥಿಗಳು, ಎಲ್‌ಎಲ್‌ಬಿಯಿಂದ 41 ವಿದ್ಯಾರ್ಥಿಗಳು ಮತ್ತು ಎಲ್‌ಎಲ್‌ಎಂನಿಂದ 7 ಮಂದಿ ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರ ಸ್ವೀಕರಿಸಿದರು. ಇದರಲ್ಲಿ ರ್‍ಯಾಂಕ್ ಪಡೆದ 16 ಮಂದಿ ವಿದ್ಯಾರ್ಥಿಗಳಾದ ಬಿಎ ಎಲ್‌ಎಲ್‌ಬಿಯಿಂದ ಹೇಮಿಕಾ ಪೊನ್ನಮ್ಮ, ಅಮೂಲ್ಯ ಎನ್.ಪ್ರಸಾದ್, ಸಿ.ಶಿಫಾಲಿ ಮುತ್ತಪ್ಪ, ನಿಖಿತ ಸುಸಾನ್, ಬಿಬಿಎ ಎಲ್‌ಎಲ್‌ಬಿಯಿಂದ ಅನಘ ಕೆ.ಭಾರದ್ವಾಜ್, ಎ.ಎಸ್. ಅಕ್ಷತಾ, ಪಿ.ಡಿ.ದೀಪ್ತಿ, ಎನ್.ಅನನ್ಯ, ಯು.ಜೆ.ಶಿಥಲ್, ಎಲ್‌ಎಲ್‌ಬಿ(3 ವರ್ಷದ ಪದವಿ) ಯಿಂದ ಮರಿಯಾ ಖಾನ್, ಆರ್.ನಯ ನೀತಾ, ಶರ್ವಾರಿ ಎಸ್.ಭಟ್, ಎಂ.ಎನ್.ನಾಗಲಕ್ಷ್ಮಿ, ಎಚ್.ಆರ್. ಶಾಶ್ವತಿ, ಸುಮನ್ ಪುರೋಹಿತ್, ಎಲ್‌ಎಲ್‌ಎಂನಿಂದ ಎಸ್.ಎಂ.ಅನಿಲ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಪ್ರಾಚಾರ್ಯರಾದ ಡಾ.ಎನ್.ವಾಣಿಶ್ರೀ, ಪ್ರೊ.ಕೆ.ಎಸ್. ಸುರೇಶ್, ಪ್ರೊ.ಪಿ.ಶಿವಾನಂದಭಾರತಿ ಇದ್ದರು.

> ಆರೋಗ್ಯಯುತ ಸಮಾಜವನ್ನು ನಿರ್ಮಿಸಲು ಜೆಎಸ್‌ಎಸ್ ವಿದ್ಯಾಪೀಠದ ಶೈಕ್ಷಣಿಕ ಕಾರ್ಯಗಳು ಪ್ರಶಂಸನೀಯ. ಈ ಸಂಸ್ಥೆಯಡಿ 300ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಇಲ್ಲಿನ ಸಂಸ್ಥೆಗಳಲ್ಲಿ ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಅದರಲ್ಲೂ ಗ್ರಾಮೀಣ ಪ್ರದೇಶದ ಶಿಕ್ಷಣಕ್ಕೂ ಆದ್ಯತೆ ನೀಡಿರುವುದು ಉತ್ತಮ ಬೆಳವಣಿಗೆ.
>
> –ನ್ಯಾ.ಉಜ್ವಲ್ ಭೂಯನ್, ಸುಪ್ರೀಂಕೋರ್ಟ್ ನ್ಯಾಯಾಧೀಶರು

> ಕಾನೂನು ಕ್ಷೇತ್ರ ಸದಾ ಅಧ್ಯಯನ ಮತ್ತು ವಿಕಾಸಶೀಲ ಕ್ಷೇತ್ರ ಈ ಕ್ಷೇತ್ರದಲ್ಲಿ ಯಶಸ್ಸು ಹೊಂದಲು ಮೊದಲು ತಪ್ಪಸ್ಸು, ಸಮಾಧಾನ, ತಾಳ್ಮೆ ಸೇರಿದಂತೆ ವ್ಯಕ್ತಿತ್ವ ಬೆಳವಣಿಗೆಗೆ ಯುವ ವಕೀಲರು ಮೊದಲ ಆದ್ಯತೆ ನೀಡಬೇಕು.
>
> – ನ್ಯಾ.ಅನು ಶಿವರಾಮನ್, ಹೈಕೋರ್ಟ್ ನ್ಯಾಯಾಧೀಶರು

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

79ನೇ ಸ್ವಾತಂತ್ರ್ಯೋತ್ಸವ



79ನೇ ಸ್ವಾತಂತ್ರ್ಯೋತ್ಸವದ ಪ್ರಯುಕ್ತ 23ನೇ ವಾರ್ಡಿನ ನಿವಾಸಿ ಶ್ರವಣ್, ಶಾಸಕ ಹರೀಶ್‌ಗೌಡರಿಗೆ ತ್ರಿವರ್ಣ ಧ್ವಜ ನೀಡಿ ಶುಭಕೋರಿದರು. ಈ ಸಂದರ್ಭದಲ್ಲಿ ನಗರ ಪಾಲಿಕೆ ಮಾಜಿ ಸದಸ್ಯ ಗೋಪಿ, ನವೀನ್, ವಿನಯ್ ಯುವ ಕಾಂಗ್ರೆಸ್ ಮುಖಂಡರು, ಮಹೇಶ್, ರಘು, ಚಂದ್ರಶೇಖರ್ ಉಪಸ್ಥಿತರಿದ್ದರು.



ಮೈಸೂರಿನ ಹೂಟಗಳ್ಳಿಯ ಕೆಹೆಚ್‌ಬಿ ಕಾಲೋನಿಯಲ್ಲಿರುವ ಸುದರ್ಶನ ವಿದ್ಯಾಸಂಸ್ಥೆಯಲ್ಲಿ 79ನೇ ಸ್ವಾತಂತ್ರ್ಯೋತ್ಸವವನ್ನು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು. ಈ ವೇಳೆ ಸಂಸ್ಥೆಯ ಕಾರ್ಯದರ್ಶಿ ಎನ್.ಶ್ರೀನಿವಾಸನ್, ಸಮಾಜ ಸೇವಕರಾದ ಪುಷ್ಪ ಅಯ್ಯಂಗಾರ್, ವೈದೇಹಿ ಅಯ್ಯಂಗಾರ್, ಪ್ರಕಾಶ್ ಎಂ.ಹೆಚ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಶೇಷಾದ್ರಿ ಐಯ್ಯರ್ ರಸ್ತೆಯಲ್ಲಿರುವ ಜೆಡಿಎಸ್ ಪಕ್ಷದ ಕಚೇರಿಯಲ್ಲಿ 79ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ ಅಧ್ಯಕ್ಷತೆ ವಹಿಸಿದ್ದರು. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರು ಧ್ವಜಾರೋಹಣ ನೆರವೇರಿಸಿ ದರು. ಈ ಸಂದರ್ಭದಲ್ಲಿ, ಮಹಿಳಾಧ್ಯಕ್ಷೆ ಪ್ರೇಮಾ ಶಂಕರೇಗೌಡ, ಹೆಚ್.ಕೆ.ರಮೇಶ್, ನಗರ ಹಿರಿಯ ಉಪಾಧ್ಯಕ್ಷ ಫಾಲ್ಕನ್ ಬೋರೇಗೌಡ, ಪಿ.ಮಂಜುನಾಥ್, ಎಂ.ಎನ್.ರಾಮು, ಕೃಷ್ಣಪ್ಪ, ಪ್ರಕಾಶ್ ಪ್ರಿಯದರ್ಶನ್, ಸುಮಿತ್ರ ಲಕ್ಷ್ಮಿ, ಬಬಿತ, ಇಂದ್ರಮ್ಮ, ರಾಜಶೇಖರ್, ಚಂದ್ರಾಸ್, ಸುನಿಲ್, ಬಸವರಾಜಪ್ಪ, ಕೆ.ದೇವೇಗೌಡ, ಪುಟ್ಟಸ್ವಾಮಿಗೌಡ, ರಿಜ್ವಾನ್ ಅಹಮದ್, ಸುರೇಶ್ ಕೇಬಲ್, ಸೌಭಾಗ್ಯ, ಕೋದಂಡ, ಆನಂದ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು 50ನೇ ವಾರ್ಡ್‌ನಲ್ಲಿ ಆಮ್ ಆದ್ಮಿ ಪಕ್ಷದ ನಗರ ಘಟಕದ ವತಿಯಿಂದ 79ನೇ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ಕೊಲ್ಲೂರು ಮಹಾಲಕ್ಷ್ಮಿ ದೇವಸ್ಥಾನದ ಅಧ್ಯಕ್ಷ ನಾಗ ರಾಜು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಆಮ್ ಆದ್ಮಿ ಪಕ್ಷದ ನಗರಾಧ್ಯಕ್ಷ ಸೋಮಶೇಖರ್, ಮಹಾದೇವ, ಶಿವಕುಮಾರ್, ನಾಗರಾಜ್, ಜಯಶ್ರೀ ಮತ್ತಿತರರಿದ್ದರು.



ಮೈಸೂರು ನಗರ (ಜಿಲ್ಲಾ) ಕನ್ನಡ ಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆ ವತಿಯಿಂದ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಮಹಾತ್ಮ ಗಾಂಧೀಜಿ ಪುತ್ಥಳಿಗೆ ಮಾಲಾರ್ಪಣೆ ಮಾಡ ಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ಮಂಜುನಾಥ್, ಡಾ. ರಾಜ್ ಸಂಘದ ಅಧ್ಯಕ್ಷ ರಾಮೇಗೌಡ, ಕಾವಲುಪಡೆ ಅಧ್ಯಕ್ಷ ಮೋಹನ್ ಕುಮಾರ್‌ಗೌಡ, ಪ್ರಧಾನ ಕಾರ್ಯದರ್ಶಿ ಮೋಹನ್ ಕುಮಾರ್, ಕಾರ್ಯದರ್ಶಿ ಮುನ್ನಾ, ಸರ್ದಾರ್ ಮಣೀಶ್, ಉಪಾಧ್ಯಕ್ಷ ವಿ. ಗಿರಿಧರ್, ಯುವ ಮುಖಂಡ ಸಂತೋಷ್, ಚಲನಚಿತ್ರ ನಟ ಜಯಪ್ರಕಾಶ್ ಇನ್ನಿತರರು ಉಪಸ್ಥಿತರಿದ್ದರು.



ಊದ್ಬೂರ್ ಗೇಟ್ ಬಳಿ ಇರುವ ಸಾಹಸಸಿಂಹ ವಿಷ್ಣುವರ್ಧನ್ ಸ್ಮಾರಕ ದಲ್ಲಿ ವಿಷ್ಣುವರ್ಧನ್ ಅಭಿಮಾನಿಗಳ ಸಂಘಟನೆಯ ಒಕ್ಕೂಟ ವತಿಯಿಂದ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ವಿಷ್ಣು ಅಭಿಮಾನಿಗಳ ಒಕ್ಕೂಟದ ಅಧ್ಯಕ್ಷ ಎಂ.ಡಿ.ಪಾರ್ಥಸಾರಥಿ, ನಜರ್‌ಬಾದ್ ನಟರಾಜ್, ರಮೇಶ್ ರಾಮಪ್ಪ, ಜೀವ ಧಾರ ಗಿರೀಶ್, ಲಕ್ಷ್ಮಣ್, ಮಹೇಶ್, ಶಿವಕುಮಾರ್, ದೀಪಕ್, ಅಭಿ, ಕೃಷ್ಣೇಗೌಡ ಇನ್ನಿತರರು ಹಾಜರಿದ್ದರು.



ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಬಾಲಬೋಧಿನಿ ಶಾಲೆಯಲ್ಲಿ ಮಲ್ಲಿಗೆ ಸೇವಾ ಸಂಘದ ವತಿಯಿಂದ 79ನೇ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಗೋಪಾಲ್‌ರಾಜೆ ಅರಸ್, ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್, ಉಪಾಧ್ಯಕ್ಷ ಪುರುಷೋತ್ತಮ್, ಪ್ರಧಾನ ಕಾರ್ಯದರ್ಶಿ ದಯಾಕರ್, ಕಾರ್ಯದರ್ಶಿ ಹರೀಶ್ ಅಂಕಿತ್, ಸಂಘದ ಪೋಷಕರುಗಳಾದ ನಾಗರಾಜ್(ಟಿವಿಎಸ್), ಶಿವಾನಂದ್, ಚಂದ್ರಶೇಖರ್ ಗೌಡ, ವಿಜಯ್ ಕುಮಾರ್, ಮುಖ್ಯೋಪಾಧ್ಯಾಯಿನಿ ಲತಾಕುಮಾರಿ, ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನಲ್ಲಿ ಅರ್ಥಪೂರ್ಣ, ಅದ್ಧೂರಿ 79ನೇ ಸ್ವಾತಂತ್ರ್ಯ ದಿನಾಚರಣೆ

- ದೇಶಪ್ರೇಮ ಪ್ರತಿ ದಿನ, ಪ್ರತಿ ಕ್ಷಣ ಇರಬೇಕು
- ವೀರಯೋಧರ ಹೋರಾಟದ ಸ್ಮರಣೆ
- ಅಂಗಾಂಗ ದಾನ ಮಾಡಿದ ಕುಟುಂಬಸ್ಥರಿಗೆ ಪ್ರಶಂಸನಾ ಪತ್ರ
- ಮೈಸೂರಿನಲ್ಲಿ 65 ಕೋಟಿಯಲ್ಲಿ ಕಂಪ್ರೆಸ್ಡ್ ಬಯೋಗ್ಯಾಸ್ ಘಟಕ ಸ್ಥಾಪನೆ

• ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುತಾತ್ಮರಾದ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನ ಸ್ಮರಣೆ

• ಸರ್ಕಾರದ ಅಭಿವೃದ್ಧಿಯನ್ನು ಅಂಕಿ-ಅಂಶ ಸಹಿತ ವಿವರಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ

ಮೈಸೂರು, ಆ.16(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಿನ್ನೆ ಜಿಲ್ಲಾಡಳಿತದ ವತಿಯಿಂದ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅರ್ಥಪೂರ್ಣ ಹಾಗೂ ಅದ್ಧೂರಿಯಾಗಿ ಆಚರಿಸಲಾಯಿತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುತಾತ್ಮರಾದ ಹೋರಾಟಗಾರರ ತ್ಯಾಗ, ಬಲಿದಾನವನ್ನು ಈ ವೇಳೆ ಸ್ಮರಿಸಲಾಯಿತು. ಜೊತೆಗೆ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ವಿವರಿಸಲಾಯಿತು.

ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಜಿಲ್ಲಾಡಳಿತದಿಂದ 79 ನೇ ಸ್ವಾತಂತ್ರ್ಯೋತ್ಸವನ್ನು ಅದ್ಧೂರಿಯಿಂದ ಆಚರಿಸಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಧ್ವಜಾರೋಹಣ ನೆರವೇರಿಸಿದರು.

ಈ ವೇಳೆ ಮಾತನಾಡಿದ ಡಾ.ಮಹದೇವಪ್ಪ ಅವರು, ತ್ಯಾಗ, ಬಲಿದಾನದ ಮೂಲಕ ಬ್ರಿಟಿಷರ ಗುಲಾಮಗಿರಿ ಸಂಕೋಲೆಯಿಂದ ದೇಶವನ್ನು ಮುಕ್ತಗೊಳಿಸಿದ ಸ್ವಾತಂತ್ರ್ಯ ಹೋರಾಟಗಾರರನ್ನು ದೇಶದ ಎಲ್ಲರೂ ಸ್ಮರಿಸಬೇಕು ಎಂದರು.

ನಾವು ಮತ್ತು ನಮ್ಮ ಮುಂದಿನ ಪೀಳಿಗೆಗಳು ವಿದೇಶಿ ವಸಾಹತುಶಾಹಿ ದಬ್ಬಾಳಿಕೆಯ ನೊಗದಿಂದ ಮುಕ್ತವಾದ ಸ್ವಾತಂತ್ರ್ಯದ ಗಾಳಿಯನ್ನು ಉಸಿರಾಡಲು ನಮ್ಮ ಸ್ವಾತಂತ್ರ್ಯ ಹೋರಾಟಗಾರರು ತಮ್ಮ ಬೆವರು ಹಾಗೂ ರಕ್ತ ಸುರಿಸಿದ್ದಾರೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭಬಾಯ್ ಪಟೇಲ್, ಗೋಪಾಲಕೃಷ್ಣ ಗೋಖಲೆ, ಲೋಕಮಾನ್ಯ ಬಾಲಗಂಗಾಧರ ತಿಲಕ್, ನೇತಾಜಿ ಸುಭಾಷ್ ಚಂದ್ರಬೋಸ್, ಮೌಲಾನಾ ಆಜಾದ್, ಡಾ.ಬಿ.ಆರ್. ಅಂಬೇಡ್ಕರ್ ಸೇರಿದಂತೆ ಹಲವರು ಸ್ವಾತಂತ್ರ್ಯಕ್ಕಾಗಿ ತಮ್ಮ ಬದುಕನ್ನು ಸವೆಸಿದ್ದಾರೆ ಎಂದು ಸ್ಮರಿಸಿದರು.

ನಮ್ಮ ದೇಶಪ್ರೇಮ ಸ್ವಾತಂತ್ರ್ಯ ದಿನಾಚರಣೆ ಸಂಭ್ರಮಕ್ಕಷ್ಟೇ ಸೀಮಿತಗೊಳ್ಳಬಾರದು. ಎಲ್ಲರಲ್ಲೂ ದೇಶಪ್ರೇಮ ಪ್ರತಿ ದಿನ, ಪ್ರತಿ ಕ್ಷಣ ಇರಬೇಕು ಎಂದು ಡಾ.ಮಹದೇವಪ್ಪ ಸಲಹೆ ನೀಡಿದರು.

ನಾವೆಲ್ಲರೂ ಸುರಕ್ಷತೆ ಹಾಗೂ ನಿಶ್ಚಿಂತೆಯಿಂದ ಇರಲು ನಮ್ಮ ಹೆಮ್ಮೆಯ ಯೋಧರು ಪ್ರಾಣ ಒತ್ತೆ ಇಟ್ಟು ಗಡಿ ಕಾಯುತ್ತಿದ್ದಾರೆ. ಹಗಲು, ರಾತ್ರಿ ಹೋರಾಡುತ್ತಿರುವ ಹಾಗೂ ಹೋರಾಡುತ್ತಲೆ ವೀರ ಮರಣ ಹೊಂದಿದ ನಮ್ಮ ಹೆಮ್ಮೆಯ ಸೈನಿಕರಿಗೆ ನಾವು ತಲೆಬಾಗಿ ನಮಿಸೋಣ ಎಂದು ಮನವಿ ಮಾಡಿದರು.

ಇದೇ ವೇಳೆ ಕರ್ನಾಟಕದ ಅಭಿವೃದ್ಧಿಯನ್ನು ವಿವರಿಸಿದ ಡಾ.ಮಹದೇವಪ್ಪ, ದಾಸೋಹ ಪರಿಕಲ್ಪನೆಯಲ್ಲಿ ಹಸಿವು ಮುಕ್ತ ಸಮಾಜ ನಿರ್ಮಾಣ ಮಾಡುವ ಉದ್ದೇಶದಿಂದ ಗ್ಯಾರಂಟಿ ಯೋಜನೆ ಅನುಷ್ಠಾನ ಮಾಡಲಾಗಿದೆ. ಮೈಸೂರು ಜಿಲ್ಲೆಯಲ್ಲಿ ಅನ್ನಭಾಗ್ಯ ಯೋಜನೆಯಲ್ಲಿ ಫೆಬ್ರವರಿ 2025ರಿಂದ ಜುಲೈವರೆಗೆ 6,42,630 ಕ್ವಿಂಟಾಲ್ ಅಕ್ಕಿ ವಿತರಣೆ ಮಾಡಲಾಗಿದೆ ಎಂದರು.

ಶಕ್ತಿ ಯೋಜನೆಯಡಿ ಜುಲೈ, 2025 ವೇಳೆಗೆ 32.59 ಕೋಟಿ ಮಹಿಳೆಯರು ಶಕ್ತಿ ಯೋಜನೆಯಲ್ಲಿ ಕೆಎಸ್ ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸಿದ್ದಾರೆ. 167.40 ಕೋಟಿ ಮೊತ್ತ ಇದಕ್ಕಾಗಿ ವೆಚ್ಚವಾಗಿದೆ. 9,00,148 ಗ್ರಾಹಕರು ಗೃಹಜ್ಯೋತಿ ಯೋಜನೆ ಲಾಭ ಪಡೆಯುತ್ತಿದ್ದಾರೆ. ಯುವನಿಧಿ ಯೋಜನೆಯಲ್ಲಿ 10,539 ಫಲಾನುಭವಿಗಳಿಗೆ ಡಿಬಿಟಿ ಮೂಲಕ ನೇರವಾಗಿ ಹಣ ಸಂದಾಯ ಮಾಡಲಾಗಿದೆ ಎಂದು ಹೇಳಿದರು.

ಸಾಮಾಜಿಕ ಭದ್ರತಾ ಯೋಜನೆ, ಡಾ.ಅಂಬೇಡ್ಕರ್ ನಿವಾಸ್ ವಸತಿ ಯೋಜನೆ, ನರೇಗಾ ಯೋಜನೆಯಲ್ಲಿ ಜನರು ಪಡೆದುಕೊಂಡಿರುವ ಸೌಲಭ್ಯವನ್ನು ಅಂಕಿ ಅಂಶ ಸಹಿತ ವಿವರಿಸಿದರು.

ಮೈಸೂರು ನಗರಪಾಲಿಕೆಯಲ್ಲಿ 239 ಕೋಟಿ, ಅಂದರೆ ಶೇಕಡ 93 ರಷ್ಟು ಆಸ್ತಿ ತೆರಿಗೆ ಸಂಗ್ರಹವಾಗಿದ್ದು, ಕರ್ನಾಟಕದಲ್ಲೇ ಅತಿ ಹೆಚ್ಚು ಆಸ್ತಿ ತೆರಿಗೆ ಸಂಗ್ರಹವಾದ ಮೊದಲ ನಗರವಾಗಿದೆ. ಮೈಸೂರು ನಗರದಲ್ಲಿ ಸಂಗ್ರಹವಾಗುವ 145 ಟನ್ ಹಸಿ ಕಸ ತ್ಯಾಜ್ಯ ಬಳಸಿ ಕಂಪ್ರೆಸ್ಡ್ ಬಯೋಗ್ಯಾಸ್ ಘಟಕವನ್ನು 65.98 ಕೋಟಿ ವೆಚ್ಚದಲ್ಲಿ ಸ್ಥಾಪಿಸಲು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಜೊತೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈ ಪ್ರಸ್ತಾವನೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ ಎಂದು ಡಾ.ಮಹದೇವಪ್ಪ ಹೇಳಿದರು.

ಧ್ವಜಾರೋಹಣಕ್ಕೂ ಮುನ್ನ, ಡಾ.ಮಹದೇವಪ್ಪ ಅವರು ತೆರೆದ ಜೀಪಿನಲ್ಲಿ 24 ತುಕಡಿಗಳ ಆಕರ್ಷಕ ಪಥ ಸಂಚಲನದ ಪರಿವೀಕ್ಷಣೆ ನಡೆಸಿದರು. ತರುವಾಯ ಪೊಲೀಸ್, ಮಹಿಳಾ ನಾಗರಿಕ ಪೊಲೀಸ್ ಪಡೆ, ಗೃಹ ರಕ್ಷಕ ದಳದಿಂದ ಪಥ ಸಂಚಲನದ ಗೌರವ ವಂದನೆ ಸ್ವೀಕರಿಸಿದರು.

ಇದೇ ವೇಳೆ ಅಂಗಾಂಗ ದಾನ ಮಾಡಿರುವ ಕುಟುಂಬಗಳ ಸದಸ್ಯರಿಗೆ ಡಾ.ಮಹದೇವಪ್ಪ ಅವರು ಪ್ರಶಂಸನಾ ಪತ್ರ ನೀಡಿ ಗೌರವಿಸಿದರು. ಅಲ್ಪ ಸಂಖ್ಯಾತ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮೌಲಾನ ಆಜಾದ್ ಪ್ರತಿಭಾ ಪುರಸ್ಕಾರ ನೀಡಿದರು.

ಶಾಸಕರಾದ ತನ್ವೀರ್ ಸೇಠ್, ಸಿ.ಎನ್.ಮಂಜೇಗೌಡ, ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್, ದಕ್ಷಿಣ ವಲಯ ಐಜಿಪಿ ಡಾ.ಬೋರಲಿಂಗಯ್ಯ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎಸ್.ಯುಕೇಶ್‌ಕುಮಾರ್, ನಗರಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್ ಸೇರಿದಂತೆ ಹಲವು ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಶುಕ್ರವಾರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು 79 ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿದರು. ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ್ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಉಗ್ರರೊಂದಿಗೆ ವೀರಯೋಧರ ಸೆಣಸಾಟ ಪ್ರದರ್ಶಿಸಿದ ವಿದ್ಯಾರ್ಥಿಗಳು





ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಶುಕ್ರವಾರ ನಡೆದ 79ನೇ ಸ್ವಾತಂತ್ರ್ಯೋತ್ಸವದಲ್ಲಿ ಶಾಲಾ ವಿದ್ಯಾರ್ಥಿಗಳು ಉಗ್ರರ ವಿರುದ್ಧ ಹೋರಾಟ ಮಾಡಿ ವೀರಯೋಧ ಹುತಾತ್ಮನಾದ ದೃಶ್ಯ ಪ್ರದರ್ಶಿಸಿದರು (ಎಡಚಿತ್ರ), ಹುತಾತ್ಮ ವೀರಯೋಧನಿಗೆ ಭಾರತ ಮಾತೆ ನಮಿಸಿದ ದೃಶ್ಯವನ್ನು (ಬಲಚಿತ್ರ) ಕಾಣಬಹುದು.

ಭಾರತದ ವೀರಯೋಧರು ಭಯೋತ್ಪಾದಕರ ಜೊತೆ ಸೆಣಸಾಡುವ ಹಾಗೂ ಹುತಾತ್ಮರಾಗುವ ದೃಶ್ಯವನ್ನು ಶಾಲಾ ವಿದ್ಯಾರ್ಥಿಗಳು ಪ್ರದರ್ಶಿಸಿದ್ದು ಈ ಬಾರಿಯ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಅತ್ಯಂತ ವಿಶಿಷ್ಟವಾಗಿತ್ತು ಆಟಿಕೆಯ ಎಕೆ 47 ಹಿಡಿದು ಯೋಧರು ಸೆಣಸಾಡುವ ದೃಶ್ಯ ರೋಮಾಂಚನಕಾರಿಯಾಗಿತ್ತು. ಭಾರತ ಮಾತೆ ವೀರಯೋಧನಿಗೆ ನಮಿಸುವ ದೃಶ್ಯ ನೋಡುಗರ ಕಣ್ಣಾಲಿಗಳಲ್ಲಿ ನೀರೂರಿಸಿತು.

ಲಿಟಲ್ ಜಮ್ಸ್ ಶಾಲಾ ವಿದ್ಯಾರ್ಥಿಗಳು ನಾವೆಲ್ಲರೂ ಒಂದೇ ಎಂಬ ಗೀತೆಗೆ ನೃತ್ಯ ಪ್ರದರ್ಶಿಸಿದರು. 12 ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳು ಬ್ರಿಕ್ಸ್ ನೃತ್ಯ ಪ್ರದರ್ಶಿಸಿ ನೋಡುಗರನ್ನು ಆಕರ್ಷಿಸಿದರು.

ಮಳೆಯ ಕಾರಣ ಪಂಜಿನ ಕವಾಯತು ಮೈದಾನದ ಕೆಲವೆಡೆ ನೀರು ನಿಂತಿತ್ತು. ಇದರಿಂದ ಪಥಸಂಚಲನ ನಡೆಸುವ ಪಡೆಗಳಿಗೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನೀಡುವ ಮಕ್ಕಳಿಗೆ ತೊಂದರೆಯಾಯಿತು.



ಮೈಸೂರಿನ ಚಾಮರಾಜಪುರಂನ ಲಕ್ಷ್ಮೀ ರಾಮಸ್ವಾಮಿ ಸೌಧ ಅಪಾರ್ಟ್‌ಮೆಂಟ್‌ನಲ್ಲಿ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಈ ಸಂದರ್ಭದಲ್ಲಿ ಅಪಾರ್ಟ್‌ಮೆಂಟ್ ಅಧ್ಯಕ್ಷ ಸತ್ಯನಾರಾಯಣ, ಕಾರ್ಯದರ್ಶಿ ರಘುಪತಿ ತಾಮ್ಹನ್‌ಕರ್, ಅಪಾರ್ಟ್‌ಮೆಂಟ್ ನಿವಾಸಿಗಳು ಉಪಸ್ಥಿತರಿದ್ದರು.



ಮೈಸೂರಿನ ನರಸಿಂಹರಾಜ ಮೊಹಲ್ಲಾದ ಟಿ. ಎನ್. ಎನ್. ಆದರ್ಶ ವಿದ್ಯಾರ್ಥಿ ನಿಲಯದಲ್ಲಿ 79ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ನಿಲಯದ ಕಾರ್ಯ ದರ್ಶಿ ಎಂ. ಪಾಟೀಲ್ ಧ್ವಜಾರೋಹಣ ನೆರವೇರಿಸಿದರು. ಸದಸ್ಯರಾದ ಪುಟ್ಟರಾಜು, ಶಂಕರ್ ನಾರಾಯಣ, ಪ್ರಸಾದ್, ಸುಭಾಷ್, ಪುಟ್ಟಯ್ಯ, ಆಫಸರ್ ಪಾಷ, ಶಶಿಧರ್, ಮುರಳೀಧರ, ಅಮೃತ ಯೋಗಿ, ಶ್ರೀಮತಿ ವಿಜಯ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಕೇರ್ಗಳ್ಳಿಯಲ್ಲಿರುವ ರಿಷಭ್‌ಸಿದ್ಧಿ ಬಡಾವಣೆಯಲ್ಲಿ ನಿವಾಸಿಗಳು 79ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಿದರು. ವಾಯು ಪಡೆಯ ನಿವೃತ್ತ ಅಧಿಕಾರಿ ಅರವಿಂದ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸ್ವಾತಂತ್ರ್ಯೋತ್ಸವ ಹಬ್ಬದ ಮಾದರಿ ಆಚರಣೆ ಆಗಬೇಕು

ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಸ್ವಾತಂತ್ರ್ಯೋತ್ಸವ; ಧ್ವಜಾರೋಹಣ ನೆರವೇರಿಸಿದ ಡಾ|| ಬಿ. ದಿನೇಶ್

ಮೈಸೂರು, ಆ.16(ಎಂಟಿವೈ)– ಸ್ವಾತಂತ್ರ್ಯ ದಿನಾಚರಣೆಯನ್ನು ದೇಶದ ಪ್ರತಿ ಮನೆ ಮನೆಗಳಲ್ಲಿ ಹಬ್ಬದ ರೀತಿಯಲ್ಲಿ ಸಂಭ್ರಮದಿಂದ ಆಚರಿಸಬೇಕು ಎಂದು ಜಯದೇವ ಹೃದ್ರೋಗ ಸಂಸ್ಥೆಯ ವೈದ್ಯರಾದ ಡಾ. ಬಿ. ದಿನೇಶ್ ತಿಳಿಸಿದರು.

ಮೈಸೂರು ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಈ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ದೇಶದ ಎಲ್ಲಾ ಜನರಿಗೂ ಉತ್ತಮ ಚಿಕಿತ್ಸೆ ನೀಡುವ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣ ಮಾಡಲು ಆಸ್ಪತ್ರೆಯ ಎಲ್ಲಾ ಸಿಬ್ಬಂದಿ ಪ್ರತಿಜ್ಞೆ ಮಾಡೋಣ. ಇನ್ನೂರು ವರ್ಷಗಳಿಗೂ ಹೆಚ್ಚು ವರ್ಷ ಭಾರತವನ್ನು ಆಳಿದ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದುಕೊಳ್ಳಲು ಅನೇಕ ಮಹನೀಯರು ತ್ಯಾಗ, ಬಲಿದಾನ, ಹೋರಾಟ ಮಾಡಿದ್ದಾರೆ. ಜನಸಾಮಾನ್ಯರು, ಪತ್ರಿಕೆಗಳು ಸಹ ಸಹಕಾರ ನೀಡಿದ್ದಾರೆ. ಅಂತಹ ಮಹನೀಯರನ್ನು ಇಂದು ನೆನೆದು ಕೊಳ್ಳಬೇಕು. ಭಾರತ ಸ್ವಾತಂತ್ರ್ಯ ಬಂದ ನಂತರದಲ್ಲಿ ಸಂಶೋಧನಾ ಕ್ಷೇತ್ರದಲ್ಲಿ, ವೈಜ್ಞಾನಿಕ ಕ್ಷೇತ್ರದಲ್ಲಿ, ತಂತ್ರಜ್ಞಾನದಲ್ಲಿ, ಆರ್ಥಿಕತೆಯಲ್ಲಿ ತುಂಬಾ ಮುಂದುವರೆದಿದ್ದು, ಚಂದ್ರಲೋಕಕ್ಕೂ ಭಾರತೀಯರು ಹೋಗಿ ಬಂದಿದ್ದಾರೆ. ಭಾರತ ಪ್ರಪಂಚದ ಬಲಿಷ್ಠ ರಾಷ್ಟ್ರಗಳಲ್ಲಿ ಒಂದಾಗಿದೆ. ಭಾರತೀಯ ವೈದ್ಯರು ಪ್ರಪಂಚದಾದ್ಯಂತ ಎಲ್ಲಾ ದೇಶಗಳಲ್ಲಿಯೂ ಸೇವೆ ಮಾಡುತ್ತಿದ್ದಾರೆ. ನಮ್ಮ ಜಯದೇವ ಆಸ್ಪತ್ರೆಗೆ ಬೇರೆ ಬೇರೆ ದೇಶಗಳಿಂದಲೂ ಬಂದು ಚಿಕಿತ್ಸೆ ಪಡೆಯುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದರು.

ಈ ಸಂದರ್ಭದಲ್ಲಿ ವೈದ್ಯರಾದ ಡಾ. ಹರ್ಷಾ ಬಸಪ್ಪ, ಡಾ. ರಾಜೀತ್, ಡಾ. ವೀಣಾ ನಂಜಪ್ಪ, ಡಾ. ದೇವರಾಜ್, ಡಾ. ಸ್ನೇಹಲ್, ಡಾ. ಮಂಜುನಾಥ್, ಡಾ. ಶಶಿಕಾಂತ್, ಡಾ. ಶ್ರೀನಿಧಿ ಹೆಗ್ಗಡೆ, ಡಾ. ಶ್ರೀಮಂತ್, ಡಾ. ನಿಶ್ಚಿಂತ್, ಡಾ. ಸಚಿನ್‌ರಾವ್, ಡಾ. ಶಶಿಕಾಂತ್, ಡಾ. ಜಯಶೀಲನ್, ಡಾ. ಹರ್ಷ ಎಂ.ಎಂ., ಡಾ. ರಂಜಿತಾ, ನರ್ಸಿಂಗ್ ಅಧೀಕ್ಷಕಿ ಯೋಗಲಕ್ಷ್ಮಿ, ಹರೀಶ್‌ಕುಮಾರ್, ವಾಣಿ ಮೋಹನ್, ರಮೇಶ್, ಯೋಗಾನಂದ್, ಶಂಕರ್, ಮೋಹಿನಿ, ಚಂಪಕಮಾಲ, ಕಾವೇರಿ ಹರೀಶ್, ಗುರುಮೂರ್ತಿ, ನಾಗರಾಜ್ ಇನ್ನಿತರರು ಪಾಲ್ಗೊಂಡಿದ್ದರು.



ಮೈಸೂರು ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಆಸ್ಪತ್ರೆಯ ವೈದ್ಯ ಡಾ.ಬಿ.ದಿನೇಶ್ ಧ್ವಜಾರೋಹಣ ನೆರವೇರಿಸಿದರು.

ದೇಶವಾಸಿಗಳು ಒಗ್ಗಟ್ಟಾಗಿ ಸ್ವಾತಂತ್ರ್ಯೋತ್ಸವ ಆಚರಿಸಬೇಕು

ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ



ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್ ಧ್ವಜಾರೋಹಣ ನೆರವೇರಿಸಿದರು.

ಮೈಸೂರು, ಆ.16(ಎಂಟಿವೈ)– ಸ್ವಾತಂತ್ರ್ಯ ದಿನಾಚರಣೆ ಧರ್ಮ, ಜಾತಿ, ಭೇದವನ್ನು ಮರೆತು ಎಲ್ಲರೂ ಒಗ್ಗಟ್ಟಾಗಿ ಸಂಭ್ರಮದಿಂದ ಆಚರಿಸುವ ಹಬ್ಬ ಎಂದು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಸ್ವಾತಂತ್ರ್ಯ ಬಂದು 79 ವರ್ಷಗಳಲ್ಲಿ ಭಾರತ ವಿಶ್ವದಲ್ಲಿಯೇ ಪ್ರಬಲ ರಾಷ್ಟ್ರವಾಗಿ ಹೊರಹೊಮ್ಮಿದೆ. ದೇಶ, ಗಡಿ ವಿಚಾರ ಬಂದಾಗ ನಾವೆಲ್ಲರೂ ಒಂದೇ. ಅಂದು ಬ್ರಿಟೀಷರಿಂದ ಸ್ವಾತಂತ್ರ್ಯ ಪಡೆಯಲು ಲಕ್ಷಾಂತರ ಜನರು ಹುತಾತ್ಮರಾಗಿದ್ದಾರೆ. ಅವರ ಸ್ಮರಣೆಯನ್ನು ನಾವು ಇಂದು ಮಾಡಬೇಕಾಗಿದೆ ಎಂದರು.

ಆದಿವಾಸಿ ಅಧ್ಯಯನ ಕೇಂದ್ರದ ಮುಖ್ಯಸ್ಥ ಕೃಷ್ಣಮೂರ್ತಿ ಮಾತನಾಡಿ, ಸ್ವಾತಂತ್ರ್ಯ ಹೋರಾಟದ ಕಿಚ್ಚು ಆದಿವಾಸಿಗಳಿಂದ ಪ್ರಾರಂಭವಾಗಿ ದೇಶಾದ್ಯಂತ ನಾಗರಿಕರಿಂದ ಹಿಡಿದು ಅನೇಕ ಮಹನೀಯರ ಹೋರಾಟ ಗೌರವ ಶ್ರಮದಿಂದ ನಮಗೆ ಸ್ವಾತಂತ್ರ್ಯ ಲಭಿಸಿದೆ ಎಂದರು.

ಈ ಸಂದರ್ಭದಲ್ಲಿ ಲೆಕ್ಕಾಧಿಕಾರಿ ಬಿ.ಆರ್. ಭವ್ಯ, ಡಾ.ಮೋಹನ್, ಡಾ.ರವೀಶ್‌ಗಣಿ, ಗುಣಧರ್, ಡಾ. ರವಿಕುಮಾರ್, ಡಾ. ಮಂಜುನಾಥ್, ಹೇಮಚಂದ್ರ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡಿಗರ ಪಾತ್ರ ದೊಡ್ಡದು: ಚಲುವರಾಯಸ್ವಾಮಿ

ಮಂಡ್ಯದಲ್ಲಿ 79ನೇ ಸ್ವಾತಂತ್ರ್ಯ ದಿನ ಆಚರಣೆ



ಮಂಡ್ಯದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಭಾಗವಹಿಸಿದ್ದರು.

ಮಂಡ್ಯ: ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡಿಗರ ಪಾತ್ರ ದೊಡ್ಡದ್ದು, ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿರಾಯಣ್ಣ, ಗಂಗಾಧರ ರಾವ್ ದೇಶಪಾಂಡೆ, ನಿಜಲಿಂಗಪ್ಪ ಸೇರಿದಂತೆ ಹಲವರನ್ನು ಇಂದು ನಾವು ನೆನೆಸಿಕೊಳ್ಳಬೇಕಿದೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ನಗರದ ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದ ವತಿಯಿಂದ ಆಯೋಜಿಸಲಾಗಿದ್ದ 79ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ನಮ್ಮ ಸರ್ಕಾರದ ಮೂಲ ಧ್ಯೇಯ ಸಮಾನತೆ ಮತ್ತು ಸಾಮಾಜಿಕ ನ್ಯಾಯ. ಅದರಲ್ಲೂ ಜನಸಾಮಾನ್ಯರ ಮತ್ತು ಹಿಂದುಳಿದ ವರ್ಗದವರ ಅಗತ್ಯತೆಗಳನ್ನು ಪೂರೈಸುವ ಆಶಯವನ್ನು ನಮ್ಮ ಸರ್ಕಾರ ಹೊಂದಿದೆ. ಆರ್ಥಿಕ ಸಬಲೀಕರಣ, ಮಹಿಳಾ ಸಬಲೀಕರಣ, ಸಾಮಾಜಿಕ ನ್ಯಾಯ ಮತ್ತು ಸಮಾನತೆ ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ಅನೇಕ ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಅದರಲ್ಲಿ ಮಹತ್ವಾಕಾಂಕ್ಷಿ 5 ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸುವ ಮೂಲಕ ನುಡಿದಂತೆ ನಡೆದಿದ್ದೇವೆ ಎಂಬ ಹೆಗ್ಗಳಿಕೆ ನಮ್ಮ ಸರ್ಕಾರದ ಹೆಮ್ಮೆ ಎಂದು ತಿಳಿಸಿದರು.

ನೀರಾವರಿ ಯೋಜನೆ: ಕೃಷ್ಣರಾಜಸಾಗರ ಜಲಾಶಯದ ಯೋಜನೆಯಡಿ ವಿ.ಸಿ. ನಾಲೆ ಎರಡನೇ ಹಂತದ ಆಧುನೀಕರಣ ಪ್ಯಾಕೇಜ್–1 ಕಾಮಗಾರಿ, ಮದ್ದೂರು ತಾಲೂಕಿನಲ್ಲಿ ಬರುವ ಕೆಮ್ಮಣ್ಣುನಾಲೆ ಆಧುನೀಕರಣ ಕಾಮಗಾರಿ, ಲೋಕಸರ ಶಾಖಾ ನಾಲೆಯ ಆಧುನೀಕರಣ ಕಾಮಗಾರಿ, ಹೆಬ್ಬಕವಾಡಿ ಶಾಖಾ ನಾಲೆ ಕಾಮಗಾರಿ, ನಿಡಘಟ್ಟ ಶಾಖಾ ನಾಲೆ ಆಧುನೀಕರಣ ಕಾಮಗಾರಿ ಹಾಗೂ ಸಂಪರ್ಕ ನಾಲೆ ಅಭಿವೃದ್ಧಿ ಕಾಮಗಾರಿಗಳನ್ನು ಒಟ್ಟು ರೂ. 667.00 ಕೋಟಿಗಳ ಅಂದಾಜಿನಲ್ಲಿ ಕೈಗೆತ್ತಿಕೊಳ್ಳಲಾಗಿದೆ ಎಂದರು.

ಕೃಷ್ಣರಾಜಸಾಗರ ಯೋಜನೆಯಡಿಯಲ್ಲಿ ಬರುವ ಅಣೆಕಟ್ಟುಗಳು, ನಾಲೆಗಳು, ಪಿಕಪ್‌ಗಳು, ಅಚ್ಚುಕಟ್ಟು ರಸ್ತೆ, ರಸ್ತೆ ತಡೆಗೋಡೆ, ಕೆರೆ–ಕಟ್ಟೆ ಹಾಗೂ ಇತರೆ ಅಭಿವೃದ್ಧಿ ಮತ್ತು ದುರಸ್ಥಿ ಕಾಮಗಾರಿಗಳನ್ನು ರೂ.204.00 ಕೋಟಿಗಳ ಅಂದಾಜಿನಲ್ಲಿ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಪ್ರಸಕ್ತ ಮುಂಗಾರು ಬೆಳೆಗಾಗಿ ಈಗಾಗಲೇ ನೀರಾವರಿ ಸಲಹಾ ಸಮಿತಿಯಲ್ಲಿ ತೀರ್ಮಾನ ತೆಗೆದುಕೊಂಡಂತೆ ರೈತರಿಗೆ ಅನುಕೂಲವಾಗುವಂತೆ ಮುಂಗಾರು ಬೆಳೆಗಳಿಗೆ ನೀರನ್ನು ಹರಿಸಲು ಕ್ರಮವಹಿಸಲಾಗುತ್ತದೆ ಎಂದು ಹೇಳಿದರು.

ಜಿಲ್ಲೆಯ 5 ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬು ಅರೆಯುವ ಕಾರ್ಯ ಪ್ರಾರಂಭಿಸಲಾಗಿದೆ. ಇದುವರೆಗೂ ಜಿಲ್ಲೆಯ ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ 5,13,921 ಮೆಟ್ರಿಕ್ ಟನ್ ಕಬ್ಬು ನುರಿಸಲಾಗಿರುತ್ತದೆ ಎಂದು ಮಾಹಿತಿ ನೀಡಿದರು.

ಮೈಶುಗರ್ ಸಕ್ಕರೆ ಕಾರ್ಖಾನೆಯನ್ನು ಯಶಸ್ವಿಯಾಗಿ ಮುನ್ನಡೆಸುವ ದೃಷ್ಟಿಯಿಂದ ನಮ್ಮ ಸರ್ಕಾರದಿಂದ ರೂ.10.00 ಕೋಟಿ ಆರ್ಥಿಕ ನೆರವು ನೀಡಲಾಗಿದೆ. ಅಲ್ಲದೇ, ಸಂಬಂಧಿಸಿದಂತೆ, 2023–24ನೇ ಸಾಲಿನ ರವರೆಗೆ ಹಲವು ವರ್ಷಗಳಿಂದ ಬಾಕಿ ಇದ್ದ ರೂ.53 ಕೋಟಿ ವಿದ್ಯುತ್ ಬಿಲ್ಲನ್ನು ನಮ್ಮ ಸರ್ಕಾರ ಮನ್ನಾ ಮಾಡಿದೆ ಮತ್ತು 2023–24 ನೇ ಸಾಲಿನಲ್ಲಿ ಮೈ–ಶುಗರ್ ಸಕ್ಕರೆ ಕಾರ್ಖಾನೆ ಪ್ರಪ್ರಥಮ ಬಾರಿಗೆ 1.51 ಕೋಟಿ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಿದ್ದು, 71 ಲಕ್ಷ ಯೂನಿಟ್ ವಿದ್ಯುತ್ ಅನ್ನು ಮಾರಾಟ ಮಾಡುವ ಮೂಲಕ ರೂ 4.5 ಕೋಟಿ ಉಳಿತಾಯ ಮಾಡಿರುತ್ತದೆ ಹಾಗೂ ಹಲವು ವರ್ಷಗಳಿಂದ ಕಾರ್ಮಿಕರಿಗೆ ನೀಡಬೇಕಾಗಿದ್ದ ಬಾಕಿ ವೇತನವನ್ನು ಪರಿಷ್ಕರಿಸಿ, ರೂ.4.0 ಕೋಟಿಗಳ ವೇತನವನ್ನು ಪಾವತಿಸಲಾಗಿದೆ ಎಂದು ಹೇಳಿದರು.

ಹಲವು ವರ್ಷಗಳಿಂದ ಸರ್ಕಾರಿ ಭೂಮಿ ಮಂಜೂರಾತಿಯಾಗಿ, ಪೋಡಿಯಾಗಲು ಬಾಕಿ ಇರುವ ಪ್ರಕರಣಗಳನ್ನು ದುರಸ್ತಿ ಮಾಡಲು ದುರಸ್ತು ಪೋಡಿ ಆಂದೋಲನವನ್ನು ಕೈಗೊಳ್ಳಲಾಗಿದ್ದು, ಕಳೆದ 5 ತಿಂಗಳಿನಿಂದ ಇಲ್ಲಿಯವರೆಗೆ 1500 ಕಂದಾಯ ನ್ಯಾಯಾಲಯ ಪ್ರಕರಣಗಳನ್ನು ಸ್ವಯಂ ಪ್ರೇರಿತವಾಗಿ ದರಖಾಸ್ತು ಪೋಡಿ ಮಾಡಿಕೊಡಲಾಗಿದೆ. ಹಾಗೂ ಗ್ರಾಮ ಆಡಳಿತ ಅಧಿಕಾರಿಗಳಿಗೆ ಒಟ್ಟು–354 ಲ್ಯಾಪ್‌ಟಾಪ್‌ಗಳನ್ನು ವಿತರಿಸಲಾಗಿದ್ದು, ಇ–ಆಫೀಸ್ ಮೂಲಕವೇ ಕಾರ್ಯನಿರ್ವಹಿಸಲು ಸೂಚಿಸಲಾಗಿರುತ್ತದೆ ಎಂದರು.

ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮ ಆಡಳಿತಾಧಿಕಾರಿಗಳ ಹುದ್ದೆಯನ್ನು ಭರ್ತಿಮಾಡುವ ಉದ್ದೇಶದಿಂದ ಪಾರದರ್ಶಕವಾಗಿ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದು, ನಮ್ಮ ಜಿಲ್ಲೆಯಲ್ಲಿ 68 ಗ್ರಾಮ ಆಡಳಿತ ಅಧಿಕಾರಿಗಳನ್ನು ನೇಮಕಾತಿ ಮಾಡಲಾಗಿದೆ ಎಂದು ತಿಳಿಸಿದರು.

ಮಳವಳ್ಳಿ ತಾಲ್ಲೂಕಿನ ತಾಲೂಕು ಕಚೇರಿಗೆ ರೂ.16.00 ಕೋಟಿ ಮೊತ್ತದಲ್ಲಿ ನೂತನವಾಗಿ ಪ್ರಜಾಸೌಧ ನಿರ್ಮಿಸಲು ನಮ್ಮ ಸರ್ಕಾರದಿಂದ ಈಗಾಗಲೇ ಅನುಮೋದನೆ ನೀಡಲಾಗಿದ್ದು, ಶೀಘ್ರವೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಶಾಸಕರಾದ ಪಿ.ರವಿಕುಮಾರ್, ದಿನೇಶ್ ಗೂಳಿಗೌಡ, ಮುಡಾ ಅಧ್ಯಕ್ಷ ನಯೀಮ್, ನಗರಸಭೆ ಅಧ್ಯಕ್ಷ ಎಂ.ವಿ.ಪ್ರಕಾಶ್, ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ.ಹೆಚ್.ಕೃಷ್ಣ, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಓ ಕೆ.ಆರ್.ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ, ಉಪ ವಿಭಾಗಾಧಿಕಾರಿ ಶಿವಮೂರ್ತಿ, ಮಂಡ್ಯ ತಹಶೀಲ್ದಾರ್ ವಿಶ್ವನಾಥ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಬನ್ನಂಗಾಡಿ ಗ್ರಾಪಂಗೆ ಅಧ್ಯಕ್ಷರ ಆಯ್ಕೆ



ನೂತನ ಅಧ್ಯಕ್ಷರನ್ನು ಅಭಿನಂದಿಸಿದ ಸದಸ್ಯರು ಮತ್ತು ಗ್ರಾಮಸ್ಥರು.

ಪಾಂಡವಪುರ, ಆ.16– ತಾಲೂಕಿನ ಬನ್ನಂಗಾಡಿ ಗ್ರಾಪಂ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಅಂತನಹಳ್ಳಿ ಮಂಜಯ್ಯ ಅವರು ಗುರುವಾರ ಅವಿರೋಧವಾಗಿ ಆಯ್ಕೆಯಾದರು.

ಗ್ರಾಪಂನ ಹಿಂದಿನ ಅಧ್ಯಕ್ಷ ಬಲರಾಮಶೆಟ್ಟಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯ ಅಧ್ಯಕ್ಷ ಸ್ಥಾನಕ್ಕೆ ಮಂಜಯ್ಯ ಹೊರತುಪಡಿಸಿ ಉಳಿದ ಯಾವೊಬ್ಬ ಸದಸ್ಯರು ನಾಮಪತ್ರವನ್ನು ಸಲ್ಲಿಸದ ಹಿನ್ನೆಲೆಯಲ್ಲಿ ಗ್ರಾಪಂನ ನೂತನ ಅಧ್ಯಕ್ಷರಾಗಿ ಮಂಜಯ್ಯ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಆದ ತಾಪಂ ಇಓ ವೀಣಾ ಅವರು ಘೋಷಿಸಿದರು.

ಮಂಜಯ್ಯ ಅಧ್ಯಕ್ಷರಾಗಿ ಆಯ್ಕೆಯಾಗುತ್ತಿದ್ದಂತೆಯೇ ಪಟಾಕಿ ಸಿಡಿಸಿ ಸಿಹಿಹಂಚಿ ಸಂಭ್ರಮಿಸಿದರು. ನೂತನ ಅಧ್ಯಕ್ಷರನ್ನು ಎಲ್ಲಾ ಸದಸ್ಯರು, ಮುಖಂಡರು ಅಭಿನಂದಿಸಿದರು.

ಸಂದರ್ಭದಲ್ಲಿ ಉಪಾಧ್ಯಕ್ಷೆ ಭಾಗ್ಯಮ್ಮ, ಸದಸ್ಯರಾದ ಗಾಡಿ ಯೋಗೇಶ್, ಬಿ.ಜಿ.ಪ್ರಭಾಕರ್, ಬಲರಾಮಶೆಟ್ಟಿ, ಜಯಲಕ್ಷ್ಮಿ ಮರಿಸ್ವಾಮೀಗೌಡ, ಶೃತಿನಾಗೇಶ್, ಸವಿತನಾಗಣ್ಣ, ರಾಮಶೆಟ್ಟಿ, ಪದ್ಮಮ್ಮಚಲುವರಾಜು, ರವಿಕುಮಾರ್, ಮುಖಂಡರಾದ ತಾಪಂ ಮಾಜಿ ಅಧ್ಯಕ್ಷ ಬಿ.ಡಿ.ಹುಚ್ಚೇಗೌಡ, ತಾಪಂ ಮಾಜಿ ಸದಸ್ಯ ಬಿ.ಪಿ.ಶ್ರೀನಿವಾಸ್, ಶಿವೇಗೌಡ, ಕರೀಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ವಾಸು, ಅಂತನಹಳ್ಳಿ ಶಿವಸ್ವಾಮಿ, ಯೋಗೇಶ್, ಬಿ.ಎಚ್.ಪ್ರಸನ್ನ, ಬಿ.ಎಸ್.ಶ್ರೀನಿವಾಸ್, ಕಿಕ್ಕೇರಿಶೆಟ್ಟಿ, ಮಹದೇವಪ್ಪ ಸೇರಿದಂತೆ ಹಲವರಿದ್ದರು.

ಆ.19ರಂದು ಕೆಲವೆಡೆ ವಿದ್ಯುತ್ ವ್ಯತ್ಯಯ

ಮಂಡ್ಯ, ಆ.16– ಹಂಪಾಪುರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ನಿರ್ವಹಣೆ ಕೆಲಸ ಹಮ್ಮಿಕೊಂಡಿರುವುದರಿಂದ ಆ.19 ರಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ಹಂಪಾಪುರ ವಿದ್ಯುತ್ ವಿತರಣಾ ಕೇಂದ್ರದ ಕೆರಗೋಡು, ದೊಡ್ಡಗರುಡನಹಳ್ಳಿ, ಬಿಳಿದೇಗಲು, ಮುದಗಂದೂರು, ಮಾರಗೌಡನಹಳ್ಳಿ, ಬಿ.ಹೊಸೂರು, ಹಂಪಾಪುರ, ಕಲ್ಮಂಟಿದೊಡ್ಡಿ, ಸೌದೇನಹಳ್ಳಿ, ಬೆಟ್ಟಹಳ್ಳಿ, ಬೀಚನಹಳ್ಳಿ, ಪುರದಕೊಪ್ಪಲು, ಎಂ.ಹೊನ್ನೇನಹಳ್ಳಿ, ಬಿದರಕಟ್ಟೆ ಬೆನ್ನಹಟ್ಟಿ, ಮನುಗನಹಳ್ಳಿಯಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ

ಜ್ಞಾನ ಮುದ್ರ ವಿದ್ಯಾ ಮಂದಿರದಲ್ಲಿ ಸ್ವಾತಂತ್ರ್ಯೋತ್ಸವ



ಭಾರತೀನಗರ ಸಮೀಪದ ಮೆಣಸಗೆರೆ ಗ್ರಾಮದಲ್ಲಿರುವ ಜ್ಞಾನ ಮುದ್ರ ವಿದ್ಯಾ ಮಂದಿರ ಶಾಲೆಯ ವಿದ್ಯಾರ್ಥಿಗಳು ಮಹಾನ್ ನಾಯಕರುಗಳ ವಿವಿಧ ವೇಷಭೂಷಣ ತೊಟ್ಟು ಜಾಥಾ ನಡೆಸುವ ಮೂಲಕ ಸ್ವಾತಂತ್ರ್ಯ ದಿನವನ್ನು ಆಚರಿಸಿದರು.

ಮತಗಳ್ಳತನದ ವಿರುದ್ಧ ಪಾಂಡವಪುರದಲ್ಲಿ ಜಾಗೃತಿ ಜಾಥಾ



ಪಾಂಡವಪುರ ಕಾಂಗ್ರೆಸ್ ಕಚೇರಿಯಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ರಾಷ್ಟ್ರಧ್ವಜಾರೋಹಣ ನೆರವೇರಿಸಿ ರಾಷ್ಟ್ರನಾಯಕರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಆಚರಿಸಲಾಯಿತು. ನಂತರ ಮತಗಳ್ಳತನ ವಿರೋಧಿಸಿ ಪ್ರತಿಭಟನೆಯ ಮೂಲಕ ಜಾಗೃತಿ ಜಾಥಾ ನಡೆಸಲಾಯಿತು.

ಕೃಷಿ ಕೂಲಿ ಕಾರ್ಮಿಕರ ಸಮಸ್ಯೆಗಳನ್ನು ಆದ್ಯತೆ ಮೇಲೆ ಪರಿಹರಿಸಿ: ಚಲುವರಾಯಸ್ವಾಮಿ



ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡುತ್ತಿರುವ ಸಚಿವ ಚಲುವರಾಯಸ್ವಾಮಿ.

ಮಂಡ್ಯ: ಕೃಷಿ ಕೂಲಿ ಕಾರ್ಮಿಕರು ಸಮಸ್ಯೆಗಳನ್ನು ಪರಿಹರಿಸಲು ಮನವಿಗಳನ್ನು ಜಿಲ್ಲಾಡಳಿತಕ್ಕೆ ಸಲ್ಲಿಸಿದ್ದು, ನಿಯಮಾನುಸಾರ ಪರಿಹರಿಸಬಹುದಾದ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಿ ವರದಿ ನೀಡುವಂತೆ ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಸಭೆ ನಡೆಸಿ ಮಾತನಾಡಿದ ಅವರು, ವಸತಿ ಹಾಗೂ ನಿವೇಶನ ರಹಿತ ಬಡ ಕುಟುಂಬಗಳಿಗೆ ಗ್ರಾಮೀಣ ಭಾಗದಲ್ಲಿ ನಿವೇಶನ ಒದಗಿಸಲು ಸರ್ಕಾರಿ ಭೂಮಿ ಇದ್ದಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಭೆ ನಡೆಸಿ ಕ್ರಮ ಕೈಗೊಳ್ಳಿ. ಗ್ರಾಮಗಳಲ್ಲಿ ಹಕ್ಕು ಪತ್ರ, ನಿವೇಶನ ಕುರಿತು ಸಮಸ್ಯೆಗಳಿದ್ದಲ್ಲಿ ತಹಸೀಲ್ದಾರ್, ತಾಲೂಕು ಪಂಚಾಯತ್ ಹಾಗೂ ಶಾಸಕರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಸಮಸ್ಯೆ ಪರಿಹಾರವಾಗದಿದ್ದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೆ ತನ್ನಿ ಎಂದರು.

ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ 100 ದಿನ ಕೂಲಿ ಕೊಡಬೇಕು ಎಂಬ ನಿಯಮವಿದ್ದರೂ, ಕೇಂದ್ರ ಸರ್ಕಾರದಿಂದ ನಿಗದಿಪಡಿಸುವ ಮಾನವ ದಿನಗಳಿಗೆ ಕೂಲಿ ಅನುದಾನ ಬಿಡುಗಡೆಯಾಗುತ್ತದೆ. 100 ದಿನವಿದೆ ಎಂದು ಕೆಲಸ ಕೊಟ್ಟು ಕೂಲಿ ಪಾವತಿಗೆ ಹಣ ಬಿಡುಗಡೆಯಾಗದಿದ್ದರೆ ಮುಂದಿನ ದಿನಗಳಲ್ಲಿ ಕಷ್ಟವಾಗುತ್ತದೆ. ಈ ಕುರಿತಂತೆ ಪಂಚಾಯತ್ ರಾಜ್ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ ನಂತರ ಈ ಸಮಸ್ಯೆ ಪರಿಹರಿಸಲಾಗುವುದು ಎಂದರು.

ಒಂದನೇ ಪುಟದಿಂದ

ಪರಿಶಿಷ್ಟರ ಸ್ಥಿತಿ ಸುಧಾರಿಸಿಲ್ಲ

ಸಮರ್ಪಕ ಕ್ರಿಯಾಯೋಜನೆ ರೂಪಿಸಿ ಪರಿಶಿಷ್ಟ ಜಾತಿ/ಪಂಗಡದ ಜನರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಪರಿಸ್ಥಿತಿ ಸುಧಾರಣೆಗೆ ಯೋಜನಾಬದ್ಧವಾಗಿ ಕಾರ್ಯ ನಿರ್ವಹಿಸಬೇಕು. ವಿವಿಧ ಕಲ್ಯಾಣ ಯೋಜನೆಗಳಡಿ ಬ್ಯಾಂಕ್‌ಗಳು ಸಕಾಲದಲ್ಲಿ ಹಣಕಾಸು ನೆರವು ಒದಗಿಸುವುದನ್ನು ಖಾತ್ರಿಪಡಿಸಬೇಕು. ಸಾಲ ಸೌಲಭ್ಯ ಒದಗಿಸಲು ವಿಳಂಬ ಧೋರಣೆ ತೋರುವ ಬ್ಯಾಂಕ್‌ಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಸರ್ಕಾರದ ಯೋಜನೆಗಳು ಶೇ.100ರಷ್ಟು ಎಸ್‌ಸಿ/ಎಸ್‌ಟಿ ಜನಸಂಖ್ಯೆ ತಲುಪುವಂತೆ ಕ್ರಮ ಕೈಗೊಳ್ಳಬೇಕು. ರಾಜ್ಯದಲ್ಲಿ ದೇವದಾಸಿ ಪದ್ಧತಿ ಇನ್ನೂ ಜೀವಂತವಾಗಿ ದೆಯೆಂದರೆ ನಾವೆಲ್ಲರೂ ತಲೆತಗ್ಗಿಸಬೇಕಾದ ವಿಷಯ, ದೇವದಾಸಿ ಪುನರ್‌ವಸತಿ ಕಾರ್ಯ ಪರಿಣಾಮಕಾರಿ ಯಾಗಿಸಲು ಸೆಪ್ಟೆಂಬರ್ ಮೊದಲ ವಾರದಿಂದ ಪುನರ್ ಸಮೀಕ್ಷೆ ಕೈಗೊಳ್ಳಲು ನಿರ್ಧರಿಸಲಾಗಿದೆ, ಯಾವುದೇ ಕಾರಣಕ್ಕೂ ದೇವದಾಸಿ ಪದ್ಧತಿ ಮುಂದುವರೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಹೆಣ್ಣು ಮಕ್ಕಳನ್ನು ದೇವದಾಸಿ ಪದ್ಧತಿಗೆ ದೂಡುವ ಪಾಲಕರು ಸೇರಿದಂತೆ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗು ವಂತೆ ಕ್ರಮ ಕೈಗೊಳ್ಳಲಾಗುವುದು, ಸಮಾಜ ಕಲ್ಯಾಣ ಇಲಾಖೆ ಹಾಗೂ ಮಹಿಳಾ ಮಕ್ಕಳ ಕಲ್ಯಾಣ ಇಲಾಖೆ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದರು. ದೇವದಾಸಿಯರೂ ಸೇರಿದಂತೆ ಸಫಾಯಿ ಕರ್ಮಚಾರಿಗಳು ಮುಂತಾದ ಸಮಾಜದಿಂದ ನಿರ್ಲಕ್ಷಿತ ವರ್ಗಗಳ ಜೀವನಮಟ್ಟ ಸುಧಾರಣೆಗೆ ಸರಿಯಾದ ಕಾರ್ಯಕ್ರಮ ರೂಪಿಸಬೇಕು ಎಂದರು.

ಇಂದು ಬಿಜೆಪಿ ಭಾರಿ ಪ್ರತಿಭಟನೆ

ತೋರಿಸಿದ ಎಲ್ಲಾ ಸ್ಥಳಗಳಲ್ಲಿ ಮೃತದೇಹಗಳ ಅವಶೇಷಗಳಿಗಾಗಿ ನಡೆಸಿದ ಶೋಧ ಕಾರ್ಯಾಚರಣೆಯಿಂದ ಇದುವರೆಗೆ ಶಂಕಿತ ಪುರಾವೆಗಳು ಯಾವುದೂ ಪತ್ತೆ ಆಗಿಲ್ಲ. ತನಿಖಾ ವರದಿ ಸರ್ಕಾರಕ್ಕೆ ಸಲ್ಲಿಕೆ ಆಗಬೇಕಿದ್ದು, ಧರ್ಮಸ್ಥಳ ವಿರುದ್ಧ ಯಾರು ಅಪಪ್ರಚಾರ ನಡೆಸಿರುವರೋ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಪ್ರತಿಭಟನಾ ಸಭೆ ಸರ್ಕಾರವನ್ನು ಆಗ್ರಹಿಸಲಿದೆ. ಮುಸುಕುಧಾರಿ ಯಾರು, ಈತನ ಹಿಂದಿರುವ ವ್ಯಕ್ತಿಗಳು ಯಾರೆಂಬುದು ಬಹಿರಂಗವಾಗಬೇಕು, ಈ ಕೃತ್ಯದ ಹಿಂದಿನ ಉದ್ದೇಶ ಏನಿತ್ತು ಎಂಬ ಎಲ್ಲ ಮಾಹಿತಿಯನ್ನು ಜನತೆ ಮುಂದಿಡಬೇಕು ಎಂದು ಒತ್ತಾಯಿಸಲಿದ್ದಾರೆ. ಈ ಹಿಂದೆ ಇಂತಹುದೇ ಅಪಪ್ರಚಾರ ಎದುರಾದಾಗ ಅನೇಕ ತನಿಖೆಗಳು ನಡೆದಿದ್ದು, ಯಾವುದೂ ಸಾಬೀತಾಗಿಲ್ಲ. ಸರ್ಕಾರಕ್ಕೆ ಇದರ ಅರಿವಿದ್ದರೂ, ವಿಶೇಷ ತನಿಖಾ ತಂಡ ರಚಿಸಿದ್ದಾದರೂ ಏಕೆ, ಮುಖ್ಯಮಂತ್ರಿಗಳನ್ನೇ ದಾರಿ ತಪ್ಪಿಸಿದ್ದಾರೆಯೇ. ಈ ವಿಚಾರದಲ್ಲಿ ನಿಮ್ಮ ಸಂಪುಟದಲ್ಲೇ ಒಡಕಿದೆ, ಧರ್ಮಸ್ಥಳದ ವಿರುದ್ಧ ಯಾರೇ ಅಪಪ್ರಚಾರ ಮಾಡಿದರೂ ತಕ್ಕ ಶಿಕ್ಷೆ ಅನುಭವಿಸಲಿದ್ದಾರೆ ಎಂದರು. ಯಲಹಂಕ ವಿಧಾನಸಭಾ ಕ್ಷೇತ್ರ ಪ್ರತಿನಿಧಿಸಿರುವ ಎಸ್.ಆರ್.ವಿಶ್ವನಾಥ್ ನೇತೃತ್ವದಲ್ಲಿ ಧರ್ಮಸ್ಥಳ ಚಲೋ ಹಮ್ಮಿಕೊಳ್ಳಲಾಗಿದೆ.

ಬಿಜೆಪಿ ರಾಜಕೀಯ ಮಾಡುತ್ತಿದೆ

ನಾಯಕರು ಧ್ವನಿ ಎತ್ತಿದ್ದಾರೆ. ಆ ಭಾಗದ ನಮ್ಮ ನಾಯಕರು ಆರಂಭದಲ್ಲೇ ಭೇಟಿ ಮಾಡಿ ಚರ್ಚಿಸಿದ್ದಾರೆ. ಅಧಿಕಾರದಲ್ಲಿರುವ ಕಾರಣ ವಿಚಾರವನ್ನು ಚರ್ಚಿಸಬಾರದೆಂದು ಮಾತನಾಡಲಿಲ್ಲ. ಯಾರಿಗೂ ಅನ್ಯಾಯವಾಗಲು ಬಿಡುವುದಿಲ್ಲ ಎಂಬ ಭರವಸೆಯನ್ನು ಮುಖ್ಯಮಂತ್ರಿ ಸಹ ನೀಡಿದ್ದಾರೆ, ಕಾನೂನು ಪ್ರಕಾರ ತನಿಖೆ ಆಗುತ್ತದೆ, ತಪ್ಪು ಸಂದೇಶ ನೀಡಿ, ಅಪಪ್ರಚಾರ ಮಾಡಿದ್ದರೆ ಅಂತಹವರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಲಾಗುವುದು. ಇದಕ್ಕೆ ಕುಮ್ಮಕ್ಕು ನೀಡುತ್ತಿರುವವನು ಮುಖ್ಯಮಂತ್ರಿಗಳನ್ನೇ ಕೊಲೆಗಾರ ಎಂದಿದ್ದಾನೆ. ಆತನ ಬಗ್ಗೆ ವರದಿ ಮಾಡಿದ್ದೀರಾ, ಇದೆಲ್ಲದರ ಮಾಹಿತಿ ನಮ್ಮ ಬಳಿ ಇದೆ ಎಂದರು. ಗುಂಡಿ ಅಗೆಯುವುದನ್ನು ನಿಲ್ಲಿಸುವ ಬಗ್ಗೆ ತನಿಖೆ ನಡೆಸುತ್ತಿರುವವರೇ ನಿರ್ಧರಿಸುತ್ತಾರೆ. ನಾವು ನಮ್ಮ ಮೂಲಗಳಿಂದ ಮಾಹಿತಿ ಸಂಗ್ರಹಿಸುತ್ತೇವೆ. ನಮಗೆ ಪೊಲೀಸರಿಂದಲೇ ಮಾಹಿತಿ ಬರಬೇಕು ಎಂದೇನಿಲ್ಲ ಎಂದರು.

ಮೈಸೂರು ಬಿಜೆಪಿ ಆಗ್ರಹ

ನಡೆಸಿಲ್ಲವೆಂಬಂತೆ ಗೋಚರವಾಗುತ್ತಿದೆ. ಇದರ ತನಿಖೆ ಪ್ರಗತಿ ಏನು ಎಂದು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಈ ತನಕ ಯಾವುದೇ ಮಾಹಿತಿ ನೀಡಿಲ್ಲ ಎಂದರು. ಡ್ರಗ್ಸ್ ಜಾಲದಲ್ಲಿ ಬಂಧನವಾಗಿರುವ ಆರೋಪಿಗಳು ಮುಂಬೈ ಪೊಲೀಸರ ವಶದಲ್ಲಿದ್ದು, ಬಾಡಿ ವಾರಂಟ್ ಪಡೆದು ಮೈಸೂರು ಪೊಲೀಸರು, ಮುಂಬೈ ಪೊಲೀಸರು ಅಲ್ಲಿಂದ ಬಂದು ಆರೋಪಿಗಳ ಹೆಡೆಮುರಿ ಕಟ್ಟಿ ಬಂಧಿಸಿ, ನೂರಾರು ಕೋಟಿಯ ಡ್ರಗ್ಸ್ ಜಪ್ತಿ ಮಾಡಿದ ಬಳಿಕ ಮೈಸೂರು ಪೊಲೀಸರು ಫೀಲ್ಡ್‌ಗಿಳಿದು, ಹುಡುಕಾಟ ನಡೆಸುತ್ತಿರುವುದು ಹಾಸ್ಯಾಸ್ಪದ ಎಂದು ಅಭಿಪ್ರಾಯಪಟ್ಟಿದ್ದಾರೆ. ಆರೋಪಿಗಳ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ನಗರ ವಕ್ತಾರ ಮಹೇಶ್ ರಾಜೇ ಅರಸ್, ಕಚೇರಿ ಕಾರ್ಯದರ್ಶಿ ನಂದಕುಮಾರ್ ಉಪಸ್ಥಿತರಿದ್ದರು.

ಬಳ್ಳಾರಿ ಜೈಲಿಗೆ ದರ್ಶನ್?

ಆರೋಪಿಗಳಿಗೆ ರಾಜಾತಿಥ್ಯ ಮತ್ತು ಜೈಲು ಅಧಿಕಾರಿಗಳ ಸುರಕ್ಷತೆ ದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದ್ದು, ಕಳೆದ ಬಾರಿಯ ರಾಜಾತಿಥ್ಯ ಪ್ರಕರಣ ಉಲ್ಲೇಖಿಸಿ, ಭದ್ರತಾ ಹಿತದೃಷ್ಟಿಯಿಂದ ಆರೋಪಿಗಳ ಸ್ಥಳಾಂತರ ಅತ್ಯಗತ್ಯ ಎಂದು ಮನವಿ ಮಾಡಲಾಗಿದೆ.

ಆರೋಪಿ ದರ್ಶನ್ ಜಾಮೀನು ರದ್ದು ಆದೇಶದ ವೇಳೆ ಸುಪ್ರೀಂಕೋರ್ಟ್, ಜೈಲು ಅಧಿಕಾರಿಗಳ ಕಾರ್ಯನಿರ್ವಹಣೆ ಬಗ್ಗೆ ಕಟುವಾಗಿ ಟೀಕಿಸಿತ್ತು. ನ್ಯಾಯಾಲಯದ ಟೀಕೆಯಿಂದಾಗಿ, ಜೈಲು ಅಧಿಕಾರಿಗಳು ಹೆಚ್ಚಿನ ವಿವಾದಗಳಿಗೆ ಅವಕಾಶ ಆಗದಂತೆ ಆರೋಪಿಗಳನ್ನು ಬೇರೆಡೆಗೆ ವರ್ಗಾಯಿಸಲು ನಿರ್ಧರಿಸಿದ್ದು, ನ್ಯಾಯಾಲಯದ ಅಂತಿಮ ತೀರ್ಪು ಬಂದ ನಂತರ ಸ್ಥಳಾಂತರ ಪ್ರಕ್ರಿಯೆ ನಡೆಯಲಿದೆ.

ಯಾವ ಆರೋಪಿ ರಾಜ್ಯದ ಯಾವ ಕಾರಾಗೃಹಕ್ಕೆ ಸ್ಥಳಾಂತರ ಆಗಲಿದ್ದಾನೆ ಎಂಬ ಬಗ್ಗೆ ನಿಖರ ಮಾಹಿತಿ ಇಲ್ಲವಾದರೂ, ನಟ ದರ್ಶನ್ ಬಳ್ಳಾರಿ ಜೈಲಿಗೆ, ಜಗದೀಶ್, ಲಕ್ಷ್ಮಣ್ ಶಿವಮೊಗ್ಗ ಕಾರಾಗೃಹಕ್ಕೆ, ನಾಗರಾಜ್ ಗುಲ್ಬರ್ಗಾ ಜೈಲಿಗೆ, ಪ್ರದೋಷ್ ಬೆಳಗಾವಿಗೆ, ಪವಿತ್ರಾ ಗೌಡ, ಅನುಕುಮಾರ್ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲೇ ಉಳಿಯುವ ಸಾಧ್ಯತೆ ಇದೆ. ನಟ ದರ್ಶನ್ ಜೈಲಿನಲ್ಲಿ ಮೊದಲ ದಿನದ ಬೇಸರ ಮರೆತು ಸಹಜ ಸ್ಥಿತಿಗೆ ಮರಳಿದ್ದಾರೆ. ರಾತ್ರಿ ಅನ್ನ ಮತ್ತು ಸಾಂಬಾರ್ ಸೇವಿಸಿ ಮಲಗಿದ್ದಾರೆ. ಕಾರಾಗೃಹ ಸಿಬ್ಬಂದಿ ಹಾಗೂ ಇತರ ಸಹಚರರೊಂದಿಗೆ ಸಹಜವಾಗಿಯೇ ಮಾತನಾಡಿದ್ದಾರೆ. ಹೈಕೋರ್ಟ್ ಜಾಮೀನು ಆದೇಶಕ್ಕೆ ಸುಪ್ರೀಂಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದಾಗಲೇ, ಜಾಮೀನು ರದ್ದು ಆಗಬಹುದೆಂದು ನಿರೀಕ್ಷಿಸಿದ್ದು ಮಾನಸಿಕವಾಗಿ ಸಿದ್ಧನಾಗಿದ್ದೆ ಎಂದು ದರ್ಶನ್ ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ ಎನ್ನಲಾಗಿದೆ. ಪ್ರಕರಣದ ಪ್ರಮುಖ ಆರೋಪಿ ಪವಿತ್ರಾ ಗೌಡ ಮಹಿಳಾ ಬ್ಯಾರಕ್‌ನಲ್ಲಿದ್ದು, ನಿನ್ನೆ ರಾತ್ರಿ ಊಟ ಮಾಡಿ, ಸಹ ಕೈದಿಗಳೊಂದಿಗೆ ಸಹಜವಾಗಿ ಮಾತನಾಡುತ್ತಾ ಕಾಲ ಕಳೆದಿದ್ದಾರೆ ಎನ್ನಲಾಗಿದೆ. ಮತ್ತೊಂದೆಡೆ ದರ್ಶನ್ ಜೈಲು ಸೇರಿರುವುದರಿಂದ ದುಃಖಿತರಾಗಿರುವ ಪತ್ನಿ ವಿಜಯಲಕ್ಷ್ಮಿ ಜಾಲತಾಣದ ತಮ್ಮ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್‌ನಲ್ಲಿ ಒಡೆದ ಹೃದಯದ ಎಮೋಜಿ ಬಳಸಿಕೊಂಡಿರುವುದು ವೈರಲ್ ಆಗಿದೆ. ದರ್ಶನ್ ಫ್ಯಾನ್‌ಗಳು, ಫಾರಂ ಹೌಸ್‌ನಲ್ಲಿ ಸಾಕಿದ ಪ್ರಾಣಿಗಳ ನಡುವೆ ದರ್ಶನ್ ವಾಕಿಂಗ್ ಮಾಡುತ್ತಿರುವ ಫೋಟೋ ಪೋಸ್ಟ್ ಮಾಡಿ, 'ಸ್ಟೇ ಸ್ಟ್ರಾಂಗ್' ಎಂದು ವಿಜಯಲಕ್ಷ್ಮಿ ಅವರಿಗೆ ಧೈರ್ಯ ತುಂಬಿದ್ದಾರೆ.

ದರ್ಶನ ಭಾಗ್ಯ ಕಲ್ಪಿಸದ ಪೂಜಾರಿಗಳು!

ಕಾರ್ಯದರ್ಶಿಗಳಿಗೂ ಮಾಹಿತಿ ತಲುಪಿದೆ. ಬಳಿಕ ದರ್ಶನಕ್ಕಾಗಿ ಪಟ್ಟು ಹಿಡಿದಿದ್ದ ಭಕ್ತರ ಮನವೊಲಿಸುವಲ್ಲಿ ಶ್ರೀಧರ್ ದೀಕ್ಷಿತ್ ಯಶಸ್ವಿಯಾಗಿದ್ದಾರೆ. ರಾತ್ರಿ ಗರ್ಭಗುಡಿಯ ಪರದೆ ಸರಿಸಿದ ನಂತರ ಬೆಳಗ್ಗೆವರೆಗೂ ತೆರೆಯುವಂತಿಲ್ಲ ಎಂದು ಮನವರಿಕೆ ಮಾಡಿಕೊಟ್ಟು, ನಾಳೆ ಬೆಳಗ್ಗೆ ದರ್ಶನಕ್ಕೆ ಬರುವಂತೆ ಹೇಳಿ ಕಳುಹಿಸಿದ್ದಾರೆ.

ಭಕ್ತರ ಆಕ್ರೋಶ: ನಾವು 9.15ಕ್ಕೆ ದೇವಸ್ಥಾನದೊಳಗೆ ಹೋದೆವು. ಗರ್ಭಗುಡಿ ಬಳಿ ಹೋಗುತ್ತಿದ್ದಂತೆ ಅಲ್ಲಿದ್ದ ಅರ್ಚಕರು ದಿಢೀರ್ ಪರದೆ ಸರಿಸಿದರು. ತಕ್ಷಣಕ್ಕೆ ಆಶ್ಚರ್ಯವಾದರೂ ಕೆಲಹೊತ್ತಿನಲ್ಲಿ ಪರದೆ ಸರಿಸಿ, ದರ್ಶನಕ್ಕೆ ಅವಕಾಶ ಮಾಡಿಕೊಡಬಹುದು ಎಂದು ಕಾದಿದ್ದೆವು. ಆದರೆ ಗರ್ಭಗುಡಿಯಿಂದ ಬಂದ ಅರ್ಚಕರು ನಮ್ಮನ್ನು ಗದರಿಸಿದರು. ನೀವೇನು ಮಾಡುತ್ತಿದ್ದೀರಿ ಇಲ್ಲಿ, ಇಲ್ಲಿಂದ ಹೊರಡಿ. ಬೆಳಗ್ಗೆ ದರ್ಶನಕ್ಕೆ ಬನ್ನಿ ಎಂದು ನಿಷ್ಠೂರವಾಗಿ ಹೇಳಿದರು. ನಮಗೆ ಆಘಾತವಾದಂತಾಯಿತು. ಬೆಂಗಳೂರಿನಿಂದ ಬಂದಿದ್ದೇವೆ, ದಯಮಾಡಿ ದರ್ಶನಕ್ಕೆ ಅನುವು ಮಾಡಿಕೊಡಿ ಎಂದು ಪರಿಪರಿಯಾಗಿ ಬೇಡಿದೆವು. ಆದರೆ ಅವರು ನಮ್ಮ ಮಾತಿಗೆ ಮನ್ನಣೆ ನೀಡಲಿಲ್ಲ. ಬದಲಾಗಿ ಉಡಾಫೆಯಿಂದ ವರ್ತಿಸಿದರು. ದರ್ಶನಕ್ಕೆ ಅನುವು ಮಾಡಿಕೊಡುವಂತೆ ನಾವು ಪಟ್ಟು ಹಿಡಿದಾಗ ಕೆರಳಿದ ಅರ್ಚಕರು, ಹಾಗಾದರೆ ದೇವಸ್ಥಾನದಲ್ಲೇ ಮಲಗಿ, ಬೆಳಗ್ಗೆ 7 ಗಂಟೆಗೆ ದರ್ಶನ ಮಾಡಿಕೊಂಡು ತೆರಳಿ ಎಂದು ನೊಂದು ಭಕ್ತರೊಬ್ಬರು ವಿವರಿಸಿದ್ದಾರೆ.

ದೇವರು ಕೊಟ್ಟರೂ....: 'ದೇವರು ಕೊಟ್ಟರೂ ಪೂಜಾರಿ ಕೊಡನು' ಗಾದೆ ಮಾತನ್ನು ಇಂತಹವರನ್ನೇ ನೋಡಿ ಕಟ್ಟಿರಬಹುದು. ದೂರದಿಂದ ತಾಯಿಯ ದರ್ಶನಕ್ಕೆ ಬಂದವರೊಂದಿಗೆ ಸೌಜನ್ಯದಿಂದ ವರ್ತಿಸುವುದನ್ನು ಬಿಟ್ಟು, ಈ ರೀತಿ ದುರ್ವರ್ತನೆ ತೋರುವುದು ಎಷ್ಟು ಸರಿ. ದೇವಾಲಯ ಪ್ರವೇಶಿಸಿದವರಿಗೆ ತಾಯಿಯ ದರ್ಶನ ಸಿಗುವುದಿಲ್ಲ ಎಂದರೆ ಏನರ್ಥ. ಅದರಲ್ಲೂ ರಾತ್ರಿ ಬಾಗಿಲು ಮುಚ್ಚುವ ಮುನ್ನ ದೇವಸ್ಥಾನದೊಳಗಿರುವ ಎಲ್ಲರಿಗೂ ದರ್ಶನ ಮಾಡಿಸಲೇಬೇಕು. ತಡವಾಗಿತ್ತು ಎನ್ನುವುದಾದರೆ ಮುಖ್ಯದ್ವಾರದಲ್ಲಿ ಏಕೆ ಒಳಗೆ ಬಿಟ್ಟರು. ನಾವು ಗರ್ಭಗುಡಿ ಬಳಿ ಹೋದಾಗ ದಿಢೀರ್ ಪರದೆ ಸರಿಸಿದ್ದಲ್ಲದೆ, ದೇವಿಯ ಮುಂದೆ ಭಕ್ತರೊಂದಿಗೆ ಒರಟಾಗಿ ಮಾತನಾಡಿದ್ದು ನಿಜಕ್ಕೂ ಮನಸ್ಸಿಗೆ ಘಾಸಿಯಾಗಿದೆ ಎಂದು ಅಳಲು ತೋಡಿಕೊಂಡಿದ್ದಾರೆ.

ಪವಿತ್ರಾ ಗೌಡ–7313, ದರ್ಶನ್–7314 ವಿಚಾರಣಾಧೀನ ಕೈದಿ ನಂಬರ್

ಬೆಂಗಳೂರು, ಆ.16– ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಸುಪ್ರೀಂಕೋರ್ಟ್‌ನಿಂದ ಜಾಮೀನು ರದ್ದುಗೊಂಡು ಮತ್ತೆ ಪರಪ್ಪನ ಅಗ್ರಹಾರದ ಸೆಂಟ್ರಲ್ ಜೈಲಿನಲ್ಲಿರುವ ಪವಿತ್ರ ಗೌಡ, ನಟ ದರ್ಶನ್ ಸೇರಿದಂತೆ ಐವರಿಗೆ ವಿಚಾರಣಾಧೀನ ಕೈದಿ ನಂಬರ್ ಅನ್ನು ಜೈಲಿನ ಅಧಿಕಾರಿಗಳು ನೀಡಿದ್ದಾರೆ. ಪ್ರಕರಣದ ಎ–1 ಆರೋಪಿಯಾಗಿರುವ ಪವಿತ್ರ ಗೌಡ ಅವರಿಗೆ ವಿಚಾರಣಾಧೀನ ಕೈದಿ ನಂಬರ್ 7313, ಎ–2 ಆರೋಪಿ ದರ್ಶನ್ ಅವರಿಗೆ 7314, ಎ–11 ಆರೋಪಿ ದರ್ಶನ್ ಅವರ ವ್ಯವಸ್ಥಾಪಕ ಆರ್.ನಾಗರಾಜ್‌ಗೆ 7315, ಎ–12 ಆರೋಪಿಗಿರುವ ದರ್ಶನ್ ಕಾರು ಚಾಲಕ ಎಂ.ಲಕ್ಷ್ಮಣ್ ಗೆ 7316, ಹಾಗೂ ಎ–14 ಆರೋಪಿ ಯಾಗಿರುವ ಪ್ರದೂಷ್ ರಾವ್ ಅವರಿಗೆ 7317 ನಂಬರ್ ನೀಡಲಾಗಿದೆ. ಇದೇ ಪ್ರಕರಣದಲ್ಲಿ ಕಳೆದ ವರ್ಷ ಜೂನ್‌ನಲ್ಲಿ ಬಂಧಿಸಿದ್ದಾಗ ದರ್ಶನ್ ಅವರಿಗೆ ವಿಚಾರಣಾಧೀನ ಕೈದಿ ನಂಬರ್ 6106 ನೀಡಲಾಗಿತ್ತು. ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರವಾದ ಮೇಲೆ ಅಲ್ಲಿ ದರ್ಶನ್‌ಗೆ ಕೈದಿ ನಂಬರ್ 511ನ್ನು ನೀಡಲಾಗಿತ್ತು.

ಶುಕ್ಲಾ ಭಾರತಕ್ಕೆ: ಮೋದಿ ಭೇಟಿ

ಮಿಷನ್‌ಗಾಗಿ ಅಮೆರಿಕದಲ್ಲಿ ತರಬೇತಿ ಪಡೆಯುತ್ತಿರುವ ಶುಕ್ಲಾ ಅವರು ನಾಳೆ ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿ ಮಾಡಿ, ಶೀಘ್ರದಲ್ಲೇ ತಮ್ಮ ತವರು ಲಖನೌಗೆ ಪ್ರಯಾಣಿಸುವ ನಿರೀಕ್ಷೆಯಿದೆ. ನಂತರ ಆಗಸ್ಟ್ 22–23 ರಂದು ನಡೆಯಲಿರುವ ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆಯಲ್ಲಿ ಭಾಗವಹಿಸಲು ಶುಕ್ಲಾ ಅವರು ರಾಜಧಾನಿಗೆ ಹಿಂತಿರುಗುವ ನಿರೀಕ್ಷೆಯಿದೆ. ವಿಮಾನದಲ್ಲಿ ಕುಳಿತು ನಗುತ್ತಿರುವ ಫೋಟೋವನ್ನು ಶುಕ್ಲಾ ಅವರು ತಮ್ಮ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿದ್ದಾರೆ 'ನಾನು ಭಾರತಕ್ಕೆ ಹಿಂತಿರುಗಲು ವಿಮಾನದಲ್ಲಿ ಕುಳಿತಾಗ, ನನ್ನ ಹೃದಯದಲ್ಲಿ ಭಾವನೆಗಳ ಮಿಶ್ರಣವಿದೆ. ಕಳೆದ ಒಂದು ವರ್ಷದಿಂದ ಈ ಕಾರ್ಯಾಚರಣೆಯ ಸಮಯದಲ್ಲಿ ನನ್ನ ಸ್ನೇಹಿತರು ಮತ್ತು ಕುಟುಂಬವಾಗಿದ್ದ ಅದ್ಭುತ ಜನರ ಗುಂಪನ್ನು ಬಿಟ್ಟು ಹೋಗುವುದು ನನಗೆ ದುಃಖ ತಂದಿತ್ತು. ಕಾರ್ಯಾಚರಣೆಯ ನಂತರ ಮೊದಲ ಬಾರಿಗೆ ನನ್ನ ಎಲ್ಲಾ ಸ್ನೇಹಿತರು, ಕುಟುಂಬ ಮತ್ತು ದೇಶದ ಪ್ರತಿಯೊಬ್ಬರನ್ನು ಭೇಟಿಯಾಗಲು ತುಂಬಾ ಉತ್ಸುಕನಾಗಿದ್ದೇನೆ. ಜೀವನ ಎಂದರೆ ಇದೇ ಎಂದು ನಾನು ಭಾವಿಸುತ್ತೇನೆ–ಎಲ್ಲವೂ ಒಂದೇ ಬಾರಿಗೆ' ಎಂದು ಶುಕ್ಲಾ ಪೋಸ್ಟ್‌ನಲ್ಲಿ ಹೇಳಿದ್ದಾರೆ.

'ಮಿಷನ್ ಸಮಯದಲ್ಲಿ ಮತ್ತು ನಂತರ ಎಲ್ಲರಿಂದಲೂ ಅದ್ಭುತ ಪ್ರೀತಿ ಮತ್ತು ಬೆಂಬಲವನ್ನು ಪಡೆದ ನಂತರ ನನ್ನ ಅನುಭವಗಳನ್ನು ನಿಮ್ಮೆಲ್ಲರೊಂದಿಗೆ ಹಂಚಿಕೊಳ್ಳಲು ಭಾರತಕ್ಕೆ ಹಿಂತಿರುಗಲು ನಾನು ಕಾತರದಿಂದ ಕಾಯುತ್ತಿದ್ದೇನೆ. ವಿದಾಯ ಕಷ್ಟ ಆದರೆ ನಾವು ಜೀವನದಲ್ಲಿ ಚಲಿಸುತ್ತಲೇ ಇರಬೇಕು. ನನ್ನ ಕಮಾಂಡರ್ ಪೆಗ್ಗಿ ವಿಟ್ಸನ್ ಪ್ರೀತಿಯಿಂದ ಹೇಳುವಂತೆ, 'ಬಾಹ್ಯಾಕಾಶ ಹಾರಾಟದಲ್ಲಿ ಏಕೈಕ ಸ್ಥಿರವೆಂದರೆ ಬದಲಾವಣೆ'. ಅದು ಜೀವನಕ್ಕೂ ಅನ್ವಯಿಸುತ್ತದೆ ಎಂದು ನಾನು ನಂಬುತ್ತೇನೆ' ಎಂದು ಶುಭಾಂಶು ಶುಕ್ಲಾ ಹೇಳಿದ್ದಾರೆ.

ವಾರ್ಷಿಕ ಫಾಸ್ಟ್‌ಟ್ಯಾಗ್ ಪಾಸ್‌ಗೆ ಚಾಲನೆ


ಅಧಿಕೃತ ವೆಬ್‌ಸೈಟ್‌ಗಳಲ್ಲಿಯೂ ಲಭ್ಯವಿರುತ್ತದೆ.

ಪಾಸ್ ಆಯಕ್ಟಿವೇಟೆಡ್ : ಪಾಸ್ ಅನ್ನು ಆಯಕ್ಟಿವೇಟೆಡ್ ಮಾಡಲು ನಿಮ್ಮ ವಾಹನ ಮತ್ತು ಫಾಸ್ಟ್‌ಟ್ಯಾಗ್ ಅನ್ನು ಪರಿಶೀಲಿಸಬೇಕಾಗುತ್ತದೆ. ತದನಂತರ ರೂ. 3,000 ಪಾವತಿಸಬೇಕಾಗುತ್ತದೆ. ಪೇಮೆಂಟ್ ಮಾಡಿದ ಎರಡು ಗಂಟೆಗಳಲ್ಲಿ ಅದು ಆಕ್ಟಿವೇಟೆಡ್ (activated) ಆಗುತ್ತದೆ. ತದನಂತರ ಪಾಸ್ ಅನ್ನು ಒಂದು ವರ್ಷದವರೆಗೆ ಬಳಸಬಹುದು. ರಾಜ್ಯ ಸರ್ಕಾರಗಳು ಅಥವಾ ಸ್ಥಳೀಯ ಸಂಸ್ಥೆಗಳಿಂದ ನಿರ್ವಹಿಸಲ್ಪಡುವ ಎಕ್ಸ್‌ಪ್ರೆಸ್‌ವೇಗಳು, ರಾಜ್ಯ ಹೆದ್ದಾರಿಗಳಲ್ಲಿ (SH) ಟೋಲ್ ಪ್ಲಾಜ್‌ಗಳಲ್ಲಿ ಫಾಸ್ಟ್‌ಟ್ಯಾಗ್ ನಿಯಮಿತವಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಬಳಕೆದಾರ ಶುಲ್ಕಗಳು ಅನ್ವಯಿಸಬಹುದು.

ಫಾಸ್ಟ್‌ಟ್ಯಾಗ್ ಇದ್ದರೆ ಓಕೆ: ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಪ್ರಕಾರ, ಈಗಾಗಲೇ ತಮ್ಮ ವಾಹನಗಳಲ್ಲಿ ಫಾಸ್ಟ್‌ಟ್ಯಾಗ್ ಹೊಂದಿರುವವರು ಹೊಸ ಫಾಸ್ಟ್‌ಟ್ಯಾಗ್ ಖರೀದಿಸುವ ಅಗತ್ಯವಿಲ್ಲ. ನಿಮ್ಮ ಬಳಿ ಇರುವ ಪಾಸ್‌ನಲ್ಲಿಯೇ ಈ ಪಾಸ್ ಅನ್ನು ಆಕ್ಟಿವೇಟೆಡ್ (activated) ಮಾಡಿಕೊಳ್ಳಬಹುದು.ಆದಾಗ್ಯೂ ವಾರ್ಷಿಕ ಪಾಸ್ ಪಡೆಯಲು ಫಾಸ್ಟ್‌ಟ್ಯಾಗ್‌ನ KYC ಅತ್ಯಗತ್ಯವಾಗಿರುತ್ತದೆ.

ನಾನು ವಜಾ ಆಗಲು ಆ ಮೂವರೇ ಕಾರಣ...

ಬೆಂಗಳೂರು,ಆ.16(ಕೆಎಂಶಿ)– ತಮ್ಮ ವಿರುದ್ಧ ಷಡ್ಯಂತ್ರ ರೂಪಿಸಿ ತಾವು ಸಚಿವ ಸ್ಥಾನ ಕಳೆದುಕೊಳ್ಳಲು ಕಾರಣ ರಾದ ಮೂವರ ಮೇಲೆ ವರಿಷ್ಠರಿಗೆ ದೂರು ನೀಡಲು ಮಾಜಿ ಸಚಿವ ಕೆ.ಎನ್. ರಾಜಣ್ಣ ದೆಹಲಿಗೆ ತೆರಳಲಿದ್ದಾರೆ.



ಸಂಪುಟದಿಂದ ವಜಾಗೊಳಿಸಲು ಈ ಮೂವರು ನಾಯಕರ ಪಿತೂರಿಯೇ ಕಾರಣ ಎಂದು ರಾಜಣ್ಣ ಎಲ್ಲ ಮಾಹಿತಿಯೊಂದಿಗೆ ಲಿಖಿತ ದೂರು ನೀಡಲಿದ್ದಾರೆ. ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ರಾಷ್ಟ್ರಾದ್ಯಂತ ಮತಗಳ್ಳತನ ವಿರುದ್ಧ ನಡೆಸಿರುವ ಹೋರಾಟವನ್ನು ನಾನು ಟೀಕಿಸಿಲ್ಲ. ನಮ್ಮದೇ ಆಡಳಿತದಲ್ಲಿ ನಡೆದಿರುವ ಲೋಪಗಳನ್ನು ಹೇಳಿದ್ದೇನೆ. ಜೊತೆಗೆ ಕೆಲವು ಸತ್ಯ ಘಟನೆಗಳನ್ನು ಬಹಿರಂಗಪಡಿಸಿದ್ದು ಕೆಲವು ನಾಯಕರಿಗೆ ಹಿಡಿಸದೆ, ನನ್ನ ವಿರುದ್ಧ ಷಡ್ಯಂತ್ರ ರೂಪಿಸಿದ್ದಾರೆ. ನಾನು ಹೇಳದಿರುವುದನ್ನು ತಿರುಚಿ, ವರದಿ ಸಿದ್ಧಪಡಿಸಿ, ವರಿಷ್ಠರಿಗೆ ದೂರು ತಲುಪಿಸಲಾಗಿದೆ. ನನ್ನ ವಿರುದ್ಧದ ಶಿಸ್ತು ಕ್ರಮದಲ್ಲಿ ಸಿದ್ದರಾಮಯ್ಯ ಅವರ ಯಾವುದೇ ಪಾತ್ರವಿಲ್ಲ, ಎಲ್ಲವೂ ಈ ಮೂವರ ಸಂಚು. ನನ್ನ ವಿರುದ್ಧ ಷಡ್ಯಂತ್ರ ನಡೆಸಿದವರನ್ನು, ನಾನೂ ರಾಜಕೀಯವಾಗಿ ಬಿಡುವುದಿಲ್ಲ ಎಂದು ರಾಜಣ್ಣ ಗುಡುಗಿದ್ದಾರೆ. ನಿನ್ನೆ ಸ್ವಕ್ಷೇತ್ರ ಮಧುಗಿರಿಯಲ್ಲಿ ಷಡ್ಯಂತ್ರದ ಬಗ್ಗೆ ಮಾತನಾಡಿದರಾದರೂ, ಯಾರ ಹೆಸರನ್ನೂ ಪ್ರಸ್ತಾಪಿಸದೆ ಮೂವರು ಪ್ರಮುಖರು ಎಂದಿದ್ದರು. ಈಗಾಗಲೇ ರಾಹುಲ್ ಗಾಂಧಿ ಭೇಟಿಗೆ ಸಮಯ ಕೋರಿರುವರಾದರೂ, ಸಮಯ ನಿಗದಿಯಾಗಿಲ್ಲ. ಆದರೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ದೆಹಲಿಗೆ ಬಂದಾಗ ಭೇಟಿಗೆ ಅವಕಾಶ ನೀಡುವುದಾಗಿ ತಿಳಿಸಿದ್ದಾರೆ. ದೆಹಲಿ ಭೇಟಿ ನಂತರ ಕೆಲವು ಮಹತ್ವದ ವಿಚಾರಗಳನ್ನು ಬಹಿರಂಗಪಡಿಸುವುದಾಗಿ ರಾಜಣ್ಣ ತಿಳಿಸಿದ್ದಾರೆ.

ಗಾಂಧೀಜಿಯವರ ಶಾಂತಿಯುತ ಹೋರಾಟದ ಫಲ ನಮಗೆ ಸ್ವಾತಂತ್ರ್ಯ ಲಭಿಸಿತು

ಎಐಸಿಸಿ ಕಾರ್ಯದರ್ಶಿ ಸಂದೀಪ್ ಅಭಿಮತ



ಮೈಸೂರು ನಗರ ಕಾಂಗ್ರೆಸ್ ಭವನದಲ್ಲಿ ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ 79ನೇ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು.

ಮೈಸೂರು,ಆ.16(ಎಂಟಿವೈ)– ಪ್ರಪಂಚದ ಇತರೆ ದೇಶಗಳ ಸ್ವಾತಂತ್ರ್ಯ ಹೋರಾಟಕ್ಕಿಂತ ನಮ್ಮ ದೇಶದ ಹೋರಾಟ ಭಿನ್ನವಾಗಿತ್ತು. ಏಕೆಂದರೆ ಮಹಾತ್ಮ ಗಾಂಧಿ ಶಾಂತಿಯ ಹೋರಾಟಕ್ಕೆ ಕರೆ ಕೊಟ್ಟರೇ ಹೊರತು ರಕ್ತಪಾತದಿಂದ ಸ್ವಾತಂತ್ರ್ಯವನ್ನು ಪಡೆಯಲು ಬಯಸಲಿಲ್ಲ ಎಂದು ಎಐಸಿಸಿ ಕಾರ್ಯದರ್ಶಿ ಬಿ.ಎಂ.ಸಂದೀಪ್ ಹೇಳಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಶುಕ್ರವಾರ ಆಯೋಜಿಸಿದ್ದ 79ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ವಾಭಿಮಾನದ ಹೋರಾಟದ ಫಲವಾಗಿ ಸ್ವಾತಂತ್ರ್ಯ ಬಂತೇ ಹೊರತು ಯಾರ ದಾಕ್ಷಿಣ್ಯ ದಿಂದಲೂ ಅಲ್ಲ. ಲಾಲ ಲಜಪತ ರಾಯ್, ಗೋಪಾಲ ಕೃಷ್ಣ ಗೋಖಲೆಯಂತಹ ಮಹನೀಯರು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿದ್ದಾರೆ. ಆದರೆ, ಸಾವರ್ಕರ್, ಬ್ರಿಟಿಷರಿಗೆ ಕ್ಷಮಾಪಣಾ ಪತ್ರವನ್ನು ಬರೆದು ಕೊಡುವುದರ ಮೂಲಕ ನಮ್ಮ ಮಣ್ಣಿನ ಹೋರಾಟಕ್ಕೆ ಕಳಂಕ ತರಲು ಹೊರಟಿದ್ದರು ಎಂದು ದೂರಿದರು.

ಎಲ್ಲಾ ಜಾತಿ ವರ್ಗದವರು ಸಮಾನರು ಎಂದು ಹೇಳುವ ನಮ್ಮ ಸಂವಿಧಾನವನ್ನು ದುರ್ಬಲಗೊಳಿಸುವ ಹುನ್ನಾರವನ್ನು ಕೋಮುವಾದಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಡೆಸುತ್ತಿವೆ ಎಂದು ದೂರಿದರು. ಈ ಸಂದರ್ಭದಲ್ಲಿ ನಗರದ ರಾಮಸ್ವಾಮಿ ವೃತದಿಂದ ಕಾಂಗ್ರೆಸ್ ಕಚೇರಿಯವರೆಗೆ ತಿರಂಗಾ ಯಾತ್ರೆ ನಡೆಸಿ, ನಂತರ ಕಾಂಗ್ರೆಸ್ ಭವನದಲ್ಲಿ ಧ್ವಜಾರೋಹಣ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್ ಗೌಡ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮುಖಂಡರಾದ ಎಂ.ಶಿವಣ್ಣ, ಮಾಜಿ ಮೇಯರ್‌ಗಳಾದ ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಈಶ್ವರ್ ಚಕ್ಕಡಿ, ನಾಗೇಶ್, ಶಿವಪ್ರಸಾದ್, ರಮೇಶ್, ಡೈರಿ ವೆಂಕಟೇಶ್, ಪ್ರದೀಪ್ ಇತರರಿದ್ದರು.

ಸಾತ್ವಿಕ, ತಾಮಸ ಭಕ್ತಿಗೂ ಶಿವ ಒಲಿಯುತ್ತಾನೆ

ಪ್ರವಚನಕಾರರಾದ ಪ್ರೊ.ಕೆ.ಅನಂತರಾಮು ವಿವರಣೆ



ಮೈಸೂರು, ಆ. 16–ಶಿವನು ಸಾತ್ವಿಕ ಭಕ್ತಿಗೂ ಒಲಿಯುತ್ತಾನೆ, ತಾಮಸ ಭಕ್ತಿಗೂ ಒಲಿಯುತ್ತಾನೆ. ತಾಮಸ ಭಕ್ತಿಗೆ ಬೇಡರ ಕಣ್ಣಪ್ಪ ಉದಾಹರಣೆ ಎಂದು ಪ್ರೊ. ಕೆ.ಅನಂತರಾಮು ಹೇಳಿದರು.

ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಮಠದಲ್ಲಿ ಶ್ರಾವಣ ಮಾಸದ 20ನೇ ದಿನದ ಪ್ರವಚನ ನೀಡುತ್ತಾ ಅವರು ತಿಳಿಸಿದರು.

ದ್ರಾವಿಡನಾಡಿನ 63 ಜನ ಶಿವಭಕ್ತರದ್ದು ಒಂದೊಂದು ರೀತಿ ಭಕ್ತಿ. ಒಬ್ಬೊಬ್ಬರು ವಿವಿಧ ಸಂದರ್ಭಗಳಲ್ಲಿ ತಮ್ಮ ಅಂಗಾಂಗಗಳನ್ನು ಶಿವನಿಗೆ ಅರ್ಪಿಸಿ ತಮ್ಮ ಭಕ್ತಿಯನ್ನು ಮೆರೆದಿದ್ದಾರೆ ಎಂದು ಶ್ರೀ ಲಕ್ಕಣ ದಂಡೇಶನು ಶಿವತತ್ತ್ವ ಚಿಂತಾಮಣಿಯಲ್ಲಿ ತಿಳಿಸಿದ್ದಾರೆ. ಶಿವಭಕ್ತಿ ಮೂಲಕ ಶಿವನನ್ನು ಒಲಿಸಿಕೊಳ್ಳುವುದು 63 ಜನ ಶಿವಭಕ್ತರ ಪರಮಗುರಿ.

ದ್ರಾವಿಡ ರಾಜ್ಯದ ಕರಿಯೂರು ಎಂಬ ಪಟ್ಟಣವನ್ನು ಪಗಳಚೋಳ ಎಂಬ ರಾಜನು ಆಳುತ್ತಿದ್ದ. ಅವನ ರಾಜ್ಯದಲ್ಲಿ ಇರಿಭಕ್ತ ಎಂಬ ಪರಮ ಶಿವಭಕ್ತ ಶಿವನಿಗೆ ಏನಾದರು ಅಪಚಾರವಾದರೆ ಯಾರೇ ಆದರೂ ಇರಿಯುತ್ತಿದ್ದ. ಪಗಳಚೋಳನ ಆಸ್ಥಾನದಲ್ಲಿದ್ದ ಶಿವಗಾಮಿ ಎಂಬ ಕೆಲಸಗಾರ ಶಿವನ ಪೂಜೆಗಾಗಿ ಹೂವುಗಳನ್ನು ಸಂಗ್ರಹಿಸಿಕೊಂಡು ಬರುತ್ತಿದ್ದ. ಈ ವೇಳೆ ರಾಜನ ಆನೆಯ ಸೊಂಡಿಲಿನಿಂದ ಆ ಹೂವುಗಳೆಲ್ಲಾ ನೆಲಕ್ಕೆ ಬಿತ್ತು. ಇದನ್ನು ನೋಡಿದ ಇರಿಭಕ್ತ ಶಿವಪೂಜೆಗೆ ತೆಗೆದುಕೊಂಡು ಹೋಗುತ್ತಿದ್ದ ಹೂವುಗಳನ್ನು ಕೆಳಗೆ ಚೆಲ್ಲಿದೆ ಎಂಬ ಕೋಪದಿಂದ ಆನೆಯ ಸೊಂಡಿಲನ್ನು ಕತ್ತರಿಸಿದ. ಈ ವಿಷಯವನ್ನು ತಿಳಿದ ಪಗಳಚೋಳ, ತಪ್ಪು ಮಾಡಿರುವುದು ಆನೆಯಾದರೂ, ಆನೆಯನ್ನು ಸಾಕಿರುವುದು ನಾನಲ್ಲವೇ ಎಂದು ತನ್ನ ತಲೆಯನ್ನು ತಾನೇ ಕತ್ತರಿಸಿಕೊಂಡ. ಈ ಎರಡೂ ಪ್ರಸಂಗಗಳನ್ನು ನೋಡಿದ ಇರಿಭಕ್ತ ತನ್ನ ತಪ್ಪಿನಿಂದಾಗಿ ಈ ಎರಡು ಘಟನೆಗಳು ಸಂಭವಿಸಿದವು ಎಂಬ ಭಾವನೆಯಿಂದ ತಾನೂ ತಲೆಯನ್ನು ಕತ್ತರಿಸಿಕೊಂಡುಬಿಟ್ಟ. ಈ ಮೂರು ಜನ ಶಿವಭಕ್ತರ ಭಕ್ತಿಯನ್ನು ನೋಡಿದ ಶಿವನು ಮೂವರನ್ನು ಕೈಲಾಸಕ್ಕೆ ಕರೆದುಕೊಂಡು ಹೋದನು. ಹೀಗೆ ತಮಿಳುನಾಡಿನ ಶಿವಭಕ್ತರದ್ದು ಒಂದೊಂದು ರೀತಿಯ ಭಕ್ತಿ ಎಂದರು.

ಗರಡಿಯಲ್ಲಿ ದೊಡ್ಡ ಪೂಜೆ



ಮೈಸೂರಿನ ಕುಂಬಾರಕೊಪ್ಪಲಿನ ಮಧ್ಯ ಗರಡಿಯಲ್ಲಿ ಶುಕ್ರವಾರ ದೊಡ್ಡ ಪೂಜೆ ನೆರವೇರಿಸಲಾಯಿತು. ಈ ವೇಳೆ ಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಕಾಂಗ್ರೆಸ್ ಮುಖಂಡ ಕೆ.ವಿ.ಚೇತನ್ ಮತ್ತು ಗ್ರಾಮದ ಯುವಕರು ಹಾಜರಿದ್ದರು.

ತಿರಂಗಾ ಬೈಕ್ ರ‍್ಯಾಲಿಗೆ ಚಾಲನೆ...



ಮಾಜಿ ಉಪ ಮೇಯರ್, ಮೈಸೂರು ನಗರ ಎಸ್‌ಸಿ ಮೋರ್ಚಾ ಅಧ್ಯಕ್ಷ ವಿ.ಶೈಲೇಂದ್ರ ನೇತೃತ್ವದಲ್ಲಿ ಬಿಜೆಪಿ ಕಚೇರಿಯಲ್ಲಿ ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ತಿರಂಗಾ ಬೈಕ್ ರ‍್ಯಾಲಿಗೆ ಮೈಸೂರು–ಕೊಡಗು ಸಂಸದ ಯದುವೀರ್ ಒಡೆಯರ್ ಚಾಲನೆ ನೀಡಿದರು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಕುಂಬರಳ್ಳಿ ಸುಬ್ಬಣ್ಣ ಇತರರಿದ್ದರು.

ಹಾರೋಹಳ್ಳಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ...



ಮೈಸೂರು ತಾಲೂಕು ಜಯಪುರ ಹೋಬಳಿಯ ಹಾರೋಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮವನ್ನು ಹಿರಿಯ ದಂಪತಿ ರಾಜಮ್ಮ ಮತ್ತು ರಾಜು ಧ್ವಜಾರೋಹಣ ಮಾಡಿದರು. ಈ ವೇಳೆ 2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದ 9 ವಿದ್ಯಾರ್ಥಿಗಳಿಗೆ 1.500 ರೂ. ಪ್ರೋತ್ಸಾಹ ಧನದ ಚೆಕ್ ನೀಡಿದರು. ಹಾರೋಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ರೇವಣ್ಣ, ಸದಸ್ಯರಾದ ನಟರಾಜ್, ಯಜಮಾನ್ ಚೆಲುವರಾಜು, ರಾಮ್ ಪ್ರಸಾದ್, ಮುಖ್ಯಶಿಕ್ಷಕ ಬಸವರಾಜು ಮತ್ತು ಶಾಲಾ ಶಿಕ್ಷಕರು ಉಪಸ್ಥಿತರಿದ್ದರು.

ಸ್ವಾತಂತ್ರ್ಯ ದಿನಾಚರಣೆ...



ಕಡಕೊಳದ ಡಾ.ಬಿ.ಆರ್.ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯದಲ್ಲಿ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಗ್ರಾಪಂ ಸದಸ್ಯ ರವಿಗೌಡ, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಮಿಕ ವಿಭಾಗದ ಕಾರ್ಯಾಧ್ಯಕ್ಷ ಕಡಕೊಳ ಭರತ್, ಮಹೇಶ್, ಕಾರ್ಮಿಕ ವಿಭಾಗದ ಮಾಜಿ ಅಧ್ಯಕ್ಷ ಶಿವಲಿಂಗ, ಮುಖಂಡರಾದ ಕುಮಾರ್, ಮಹೇಶ್, ಮನೋಜ್, ನಿಲಯ ಮೇಲ್ವಿಚಾರಕ ರವಿಚಂದ್ರ ಇದ್ದರು.

ಸೆಸ್ಕ್ ಪ್ರಧಾನ ಕಚೇರಿಯಲ್ಲಿ ಸ್ವಾತಂತ್ರ್ಯೋತ್ಸವ



ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್)ದಿಂದ 79ನೇ ಸ್ವಾತಂತ್ರ್ಯ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮೈಸೂರು, ಆ.16(ಎಂಟಿವೈ)– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್)ದಿಂದ 79ನೇ ಸ್ವಾತಂತ್ರ್ಯ ದಿನವನ್ನು ಶುಕ್ರವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ವಿಜಯನಗರ ಎರಡನೇ ಹಂತದಲ್ಲಿರುವ ನಿಗಮದ ಪ್ರಧಾನ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಧ್ವಜಾರೋಹಣ ನೆರವೇರಿಸಿದರು.

ಇದೇ ಸಂದರ್ಭದಲ್ಲಿ ನಿಗಮ ವ್ಯಾಪ್ತಿಯ ಐದು ಜಿಲ್ಲೆಗಳಲ್ಲಿ ವಿದ್ಯುತ್ ಮಾರ್ಗಗಳ ನಿರ್ವಹಣಾ ಕಾಮಗಾರಿಯನ್ನು ಅಚ್ಚುಕಟ್ಟಾಗಿ ಮಾಡಿದ ಕಿರಿಯ ಇಂಜಿನಿಯರ್‌ಗಳು, ಪವರ್ ಮ್ಯಾನ್‌ಗಳು, ಕುಸುಮ್–ಸಿ ಯೋಜನೆಯ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಶ್ರಮಿಸಿದ ಕಿರಿಯ ಇಂಜಿನಿಯರ್, ಸಹಾಯಕ ಇಂಜಿನಿಯರ್‌ಗಳು ಮತ್ತು ಹೆಚ್ಚುವರಿ ಜಿಎಸ್ಟಿ ತೆರಿಗೆಯನ್ನು ತಡೆಯುವಲ್ಲಿ ಕಾನೂನಾತ್ಮಕವಾಗಿ ಹೋರಾಟ ನಡೆಸಿದ ತೆರಿಗೆ ಶಾಖೆಯ ಅಧಿಕಾರಿಗಳು ಮತ್ತು ಎಂಟಿ ವಿಭಾಗದ ಅಧಿಕಾರಿಗಳು, ಸಿಬ್ಬಂದಿಗೆ ಬೆಳ್ಳಿ ಪದಕ ಹಾಗೂ ಪ್ರಶಂಸನಾ ಪತ್ರವನ್ನು ನೀಡಿ ಗೌರವಿಸಲಾಯಿತು.

ಡಿ.ಸಾಲುಂಡಿ ಸರ್ಕಾರಿ ಪ್ರೌಢಶಾಲೆಯಲ್ಲಿ ಸ್ವಾತಂತ್ರ್ಯೋತ್ಸವ



ಮೈಸೂರು ತಾಲೂಕು ಡಿ.ಸಾಲುಂಡಿ ಸರ್ಕಾರಿ ಪ್ರೌಢಶಾಲೆಯಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ 2024–25ನೇ ಸಾಲಿನಲ್ಲಿ ಡಿಸ್ಟಿಂಕ್ಷನ್ ಪಡೆದ 10 ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಲಾಯಿತು. ಚಿತ್ರದಲ್ಲಿ ಗ್ರಾ.ಪಂ. ಸದಸ್ಯರಾದ ಬಸವರಾಜು, ಮರಿಗೌಡ, ಶಿವರಾಜು, ಡೈರಿ ಮರಿಗೌಡ, ಎಸ್‌ಡಿಎಂಸಿ ಅಧ್ಯಕ್ಷ ನಟರಾಜು, ಗ್ರಾಮಸ್ಥರಾದ ಚಿಕ್ಕಬುದ್ಧಿ, ಶಾಲಾ ಶಿಕ್ಷಕ ಎಸ್.ಆನಂದ, ಶಿಕ್ಷಕಿ ಭವ್ಯ, ಲತಾ, ರೂಪಾದೇವಿ, ಯೋಗಿತಾ ಹಾಗೂ ಶೀಲಾ ಅವರನ್ನು ಕಾಣಬಹುದು.

ಭ್ರಷ್ಟಾಚಾರ ನಿರ್ಮೂಲನೆ, ಸ್ವಚ್ಛತೆ ನಿಜವಾದ ಸ್ವಾತಂತ್ರ್ಯ

ಮೈಗ್ರಾಪನ ಭಾಮಿ ವಿ.ಶೆಣೈ ಕಿವಿಮಾತು



ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಮಠದಲ್ಲಿ 79ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು.

ಮೈಸೂರು,ಆ.16–ದೇಶದಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಮಾಡುವ ಮತ್ತು ಸ್ವಚ್ಛತೆ ಕಾಪಾಡುವ ಬಗ್ಗೆ ಜಾಗೃತಿ ಮೂಡಿಸುವುದೇ ನಿಜವಾದ ಸ್ವಾತಂತ್ರ್ಯ ಎಂದು ಮೈಸೂರು ಗ್ರಾಹಕ ಪರಿಷತ್ತಿನ ಸ್ಥಾಪಕ ಕಾರ್ಯಾಧ್ಯಕ್ಷ ಭಾಮಿ ವಿ. ಶೆಣೈ ಹೇಳಿದರು.

ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಮಠದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಆಶೀರ್ವಾದಗಳೊಂದಿಗೆ ಜರುಗಿದ 79ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಧ್ವಜಾರೋಹಣವನ್ನು ನೆರವೇರಿಸಿ, ಮಾತನಾಡಿದರು. ಯಾವುದೇ ಸರ್ಕಾರಿ ಕಚೇರಿಗಳಿಗೆ ಹೋದರೂ ಬಹುತೇಕ ಕಡೆ ಭ್ರಷ್ಟಾಚಾರ ತಾಂಡವವಾಡುತ್ತಿದೆ. ನಮ್ಮ ಕೆಲಸ ಮಾಡಿಸಿಕೊಳ್ಳಲು ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ನಾವೇ ಲಂಚ ಕೊಡುತ್ತೇವೆ. ಯಾವುದೇ ಕಾರಣಕ್ಕೂ ಲಂಚ ಕೊಡಬಾರದು. ಹಾಗೆ ಮಾಡುವುದರಿಂದ ದೇಶದಲ್ಲಿ ಹಂತಹಂತವಾಗಿ ಭ್ರಷ್ಟಾಚಾರ ನಿರ್ಮೂಲನೆ ಆಗುತ್ತದೆ. ಇದು ಆಂದೋಲನದ ರೀತಿಯಲ್ಲಿ ಆಗಬೇಕು.

ಕಸದ ಸಮಸ್ಯೆಯೂ ಭ್ರಷ್ಟಾಚಾರದಂತೆ ಮತ್ತೊಂದು ಗಂಭೀರ ಸಮಸ್ಯೆಯಾಗಿದೆ. ರಸ್ತೆಗಳಲ್ಲಿ ಯಾರಾದರು ಕಸವನ್ನು ಸುರಿದರೆ ಪ್ರಶ್ನೆ ಮಾಡುವ ಮನೋಧರ್ಮವನ್ನು ರೂಢಿಸಿಕೊಳ್ಳಬೇಕು. ಅದನ್ನು ನಾವು ಮಾಡುತ್ತಿಲ್ಲ. ದೇಶದಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಹಾಗೂ ಸ್ವಚ್ಛತೆ ಬಗ್ಗೆ ಜನರಲ್ಲಿ ಎಂದು ಅರಿವು ಮೂಡುತ್ತದೆಯೋ ಅಂದು ದೇಶಕ್ಕೆ ನಿಜವಾಗಿ ಸ್ವಾತಂತ್ರ್ಯ ಲಭಿಸಿದಂತಾಗುತ್ತದೆ. ಇಂದು ಜಗತ್ತಿನಲ್ಲಿ ದೇಶದೇಶಗಳ ನಡುವೆ ಯುದ್ಧಗಳು ನಡೆಯುತ್ತಿವೆ. ಅವು ಮನುಕುಲಕ್ಕೆ ಒಳ್ಳೆಯದಲ್ಲ. ಯುದ್ಧಗಳ ಅಗತ್ಯ ಇದೆಯೇ ಎಂದು ಆಲೋಚಿಸುವ ಅನಿವಾರ್ಯತೆ ಇದೆ. ಪರಿಸರ ಸಂರಕ್ಷಣೆಗಾಗಿ ಸ್ವೀಡನ್ ದೇಶದ ಗ್ರೇಟಾ ಥನ್‌ಬರ್ಗ್ ಎಂಬ ಬಾಲಕಿ ಕ್ರಾಂತಿ ಮಾಡಿದಳು. ಪ್ರತಿ ಶುಕ್ರವಾರ ಸ್ವೀಡನ್ ಸಂಸತ್ ಮುಂದೆ ಅವಳು ಮಾಡುತ್ತಿದ್ದ ಪ್ರತಿಭಟನೆ ಪರಿಸರ ಸಂರಕ್ಷಣೆ ಹೋರಾಟಕ್ಕೆ ಹೊಸ ದಿಕ್ಕು ತೋರಿಸಿತು. ಅವಳ ನಡೆಯಿಂದ ಇಂದು ಭಾರತದಲ್ಲಿಯೂ ಮಕ್ಕಳು ಪರಿಸರ ಸಂರಕ್ಷಣೆಗಾಗಿ ಜಾಗೃತಗೊಂಡಿದ್ದಾರೆ ಎಂದು ತಿಳಿಸಿದರು.

ಧ್ವಜಾರೋಹಣ ಮತ್ತು ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಜೆಎಸ್‌ಎಸ್ ಲಲಿತಾಕಲಾ ತಂಡದ ರೂಪಾ ಮತ್ತು ವಿನುತಾ ಪ್ರಾರ್ಥನೆ ಸಲ್ಲಿಸಿದರು. ಎಸ್.ನಂದೀಶ್ ಸ್ವಾಗತಿಸಿದರು. ಗುರುಕುಲ ನಂದೀಶ್ ದೇವರು ವಂದನಾರ್ಪಣೆ ಮಾಡಿದರು. ಸುಮನ್ ವಿ.ಶೆಣೈ, ಶ್ರೀಮಠದ ಗುರುಕುಲ ಸಾಧಕರು, ಸಿಬ್ಬಂದಿವರ್ಗ ಹಾಗೂ ಆರಕ್ಷಕ ಸಿಬ್ಬಂದಿ ಉಪಸ್ಥಿತರಿದ್ದರು.

ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ....



ಮೈಸೂರಿನ ಕುರುಬಾರಹಳ್ಳಿಯ (ಬಾಡಿಗಾರ್ಡ್) ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಜಯಂತಿಯನ್ನು ಆಚರಿಸಲಾಯಿತು. ಲಯನ್ಸ್ ಜಿಲ್ಲಾ ಸಂಪುಟದ ಕಾರ್ಯದರ್ಶಿ ಸಿದ್ದೇಗೌಡ, ಛತ್ರಪತಿ ಶಿವಾಜಿ ಸೊಸೈಟಿ ಅಧ್ಯಕ್ಷ ನಾಗೇಂದ್ರ ರಾವ್, ಕಾರ್ಯದರ್ಶಿ ಹರಿರಾವ್, ಮುಖಂಡ ಕೃಷ್ಣಯ್ಯ, ವನಸಿರಿ ಬಿಲ್ಡರ್ಸ್ ಸಂಸ್ಥಾಪಕ ಸುಧೀಂದ್ರ, ಮೈಸೂರು ಕೋ ಆಪರೇಟಿವ್ ಬ್ಯಾಂಕಿನ ನಿರ್ದೇಶಕ ರವಿಕುಮಾರ್, ಚಾಮುಂಡಿ ಸಂಸ್ಥೆ ಅಧ್ಯಕ್ಷ ರವಿಕುಮಾರ್, ಲೋಕೇಶ್, ವಿನೋದ್, ಶಿವಾಜಿರಾವ್, ವಲಯ ಅಧ್ಯಕ್ಷ ಲೋಕೇಶ್, ಶಾಲೆಯ ಮುಖ್ಯ ಶಿಕ್ಷಕಿ ಅಂಬುಜ, ಜೆಸಿಐ ಮೈಸೂರು ಸಂಘಟನೆ ಸದಸ್ಯರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಮೈಸೂರು ತಾಲೂಕು ಶ್ರೀರಾಂಪುರದ ನವಚೇತನ ಬಸವೇಶ್ವರ ಟ್ರಸ್ಟ್ ವಿಶೇಷ ಮಕ್ಕಳ ಶಾಲೆಯಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಸನ್ಮಾನಿಸಲಾಯಿತು. ಗೋಪಾಲಗೌಡ ಆಸ್ಪತ್ರೆ ಮಾಲೀಕ ಡಾ.ಸುಶ್ರುತ ಗೌಡ, ವೈದ್ಯರಾದ ಡಾ.ಮಾಲೇಗೌಡ, ಪಿ.ಶ್ರೀನಿವಾಸ್, ಮುಖಂಡರಾದ ಮಹದೇವ, ಅಮೀನಾ ಬೇಗಂ, ಪರಿಸರ ಚಂದ್ರು, ಮೈನಾ.ಲೋಕೇಶ್, ವಿಷ್ಣು ನಾಚಪ್ಪ ಪಿಗ್ನೇಶ್, ಬಸವರಾಜು, ಸಿದ್ದಾಮೇಗೌಡ ಉಪಸ್ಥಿತರಿದ್ದರು.

ಶುಭಾಶಯ...



ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಸಚಿವ ಸಾ.ರಾ. ಮಹೇಶ್ ಅವರನ್ನು ಯರಗನಹಳ್ಳಿ ವಾರ್ಡ್ ಜೆಡಿಎಸ್ ಅಧ್ಯಕ್ಷ ಮಹೇಶ್, ಮುಖಂಡರಾದ ಶಿವಕುಮಾರ್, ರಾಮಣ್ಣ ಅಭಿನಂದಿಸಿ, ಶುಭಾಶಯ ಕೋರಿದರು.

ಮಾದಕ ಪದಾರ್ಥ ದೊರೆತ ಅಂಗಡಿ ವಿರುದ್ಧ ಕ್ರಮ ಕೈಗೊಳ್ಳದ ಬಗ್ಗೆ ನಿವಾಸಿಗಳ ಬೇಸರ

ಮೈಸೂರು,ಆ.16(ಎಂಟಿವೈ)–ಮೈಸೂರಿನ ನಜರ್‌ಬಾದ್ ವೃತ್ತದ ಬಳಿ ಅನ್ಯ ರಾಜ್ಯದ ವ್ಯಕ್ತಿಯ ಕಿರಾಣಿ ಅಂಗಡಿಯಲ್ಲಿ ಮಾದಕ ವಸ್ತುಗಳು ಪತ್ತೆಯಾಗಿದ್ದರೂ, ಆ ಅಂಗಡಿಯನ್ನು ಪೊಲೀಸರು ಮುಚ್ಚಿಸಿಲ್ಲ ಎಂದು ನಜರ್‌ಬಾದ್ ನಿವಾಸಿಗಳು ದೂರಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನಜ್ಜರ್‌ಬಾದ್ ನಿವಾಸಿ ದೀಪಕ್ ಪುಟ್ಟಸ್ವಾಮಿ ಮಾತನಾಡಿ, ಇತ್ತೀಚೆಗೆ ಎಲ್ಲಾ ಅಂಗಡಿಗಳಲ್ಲಿ ಪರಿಶೀಲನೆ ನಡೆಸುತ್ತಿರುವ ಮೈಸೂರು ನಗರ ಪೊಲೀಸರು ಸುಳಿವು ದೊರೆತ ಅಂಗಡಿಗಳಲ್ಲಿ ಮಾದಕ ಅಂಶವುಳ್ಳ ವಸ್ತುಗಳನ್ನು ವಶಪಡಿಸಿಕೊಳ್ಳುತ್ತಿರುವುದು ಶ್ಲಾಘನೀಯ. ಖಚಿತ ಸುಳಿವಿನ ಮೇರೆಗೆ ನಜ್ಜರ್‌ಬಾದ್ ವೃತ್ತದಲ್ಲಿರುವ ಹೊರ ರಾಜ್ಯದ ವ್ಯಕ್ತಿಯ ಕಿರಾಣಿ ಅಂಗಡಿ ಮೇಲೆ ಇತ್ತೀಚೆಗೆ ಪೊಲೀಸರು ದಾಳಿ ನಡೆಸಿ, ಮಾದಕ ವಸ್ತು ವಶಕ್ಕೆ ಪಡೆದಿದ್ದಾರೆ. ಆದರೆ, ಇದುವರೆಗೂ ಆ ಅಂಗಡಿಯನ್ನು ಮುಚ್ಚಿಸಿಲ್ಲ. ಎಂದಿನಂತೆ ಆ ಅಂಗಡಿ ತೆರೆದಿದ್ದು, ಮತ್ತೆ ಮಾದಕ ವಸ್ತುಗಳನ್ನು ಯುವಕರಿಗೆ ನೀಡುತ್ತಿರುವ ಅನುಮಾನವಿದೆ ಈ ಹಿನ್ನೆಲೆಯಲ್ಲಿ ಆ ಅಂಗಡಿಯನ್ನು ಮುಚ್ಚಿಸಬೇಕೆಂದು ಆಗ್ರಹಿಸಿದರು.

ಅಚ್ಚರಿ ಸಂಗತಿ ಎಂದರೆ ಕಿರಾಣಿ ಅಂಗಡಿ ಮಾಲೀಕನನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಆದರೂ ಏನೂ ಕ್ರಮ ಕೈಗೊಂಡಿಲ್ಲ. ಈ ಪ್ರದೇಶದ ಅಧಿಕ ಯುವ ಜನರು ಮಾದಕವಸ್ತು ವ್ಯಸನಿಗಳಾಗಿ ತಮ್ಮ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಇಂತಹ ಅಂಗಡಿಗಳೇ ಕಾರಣವಾಗಿವೆ. ಆದ್ದರಿಂದ ಈ ಅಂಗಡಿ ಮಾತ್ರವಲ್ಲ, ಈ ರೀತಿಯ ಇತರೆ ಅಂಗಡಿಗಳಲ್ಲೂ ತಪಾಸಣೆ ನಡೆಸಿ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ನಜರ್‌ಬಾದ್ ನಿವಾಸಿಗಳಾದ ಸುನಿಲ್ ನಾರಾಯಣ್, ಶ್ರೀಪಾಲ್, ಸುರೇಶ್ ರಾವ್, ನಿರಂಜನ್‌ರಾವ್ ಇನ್ನಿತರರಿದ್ದರು.

ದೇಶ - ವಿದೇಶ

ಪಾಕಿಸ್ತಾನದ ಸ್ವಾತಂತ್ರ್ಯ ದಿನದಂದು ಉಗ್ರರ ದಾಳಿ; ಪೊಲೀಸ್ ಅಧಿಕಾರಿ ಸಾವು



ಪೇಶಾವರ: ಪಾಕಿಸ್ತಾನದ ಸ್ವಾತಂತ್ರ್ಯ ದಿನದಂದು ಪೇಶಾವರದಲ್ಲಿ ಉಗ್ರರ ದಾಳಿ ನಡೆದಿದ್ದು, ಓರ್ವ ಪೊಲೀಸ್ ಅಧಿಕಾರಿ ಸಾವನ್ನಪ್ಪಿದ್ದು, ಮತ್ತೋರ್ವ ಗಂಭೀರವಾಗಿ ಗಾಯಗೊಂಡಿದ್ದಾರೆ. ವಾಯುವ್ಯ ಪೇಶಾವರದ ಹೊರವಲಯದಲ್ಲಿರುವ ಪೊಲೀಸ್ ಠಾಣೆಯ ಮೇಲೆ ಅಪರಿಚಿತ ಬಂದೂಕುಧಾರಿಗಳು ದಾಳಿ ನಡೆಸಿದ್ದಾರೆ. ಪ್ರಾಣ ಕಳೆದುಕೊಂಡ ಪೊಲೀಸ್ ಅಧಿಕಾರಿಯನ್ನು ಕಾನ್‌ಸ್ಟೇಬಲ್ ಅಬು ಬಕರ್ ಎಂದು ಗುರುತಿಸಲಾಗಿದ್ದು, ಹರೂನ್ ಎಂಬ ಅಧಿಕಾರಿ ದಾಳಿಯಲ್ಲಿ ಗಾಯಗೊಂಡಿದ್ದಾರೆ.

ಭಯೋತ್ಪಾದಕರು ಪೇಶಾವರದಿಂದ ನೈರುತ್ಯಕ್ಕೆ ಸುಮಾರು 30 ಕಿ.ಮೀ ದೂರದಲ್ಲಿರುವ ಹಸನ್ ಖೇಲ್ ಪೊಲೀಸ್ ಠಾಣೆ ಮೇಲೆ ದಾಳಿ ಮಾಡಿದ್ದಾರೆ. ಪೊಲೀಸರು ದಾಳಿಗೆ ಪ್ರತಿದಾಳಿ ನಡೆಸಿದರು. ಈ ಪ್ರದೇಶದಲ್ಲಿ ನಡೆಯುತ್ತಿರುವ ಕಾರ್ಯಾಚರಣೆಗಳನ್ನು ಬೆಂಬಲಿಸಲು ಹೆಚ್ಚುವರಿ ಪಡೆಗಳನ್ನು ಕಳುಹಿಸಲಾಗಿದೆ. ತೆಹ್ರೀಕ್–ಎ–ತಾಲಿಬಾನ್ ಪಾಕಿಸ್ತಾನ್‌ನ ಹಿಂದಿನ ಭದ್ರ ಕೋಟೆಯಾಗಿದ್ದ ಬಜೌರ್ ಜಿಲ್ಲೆಯ ಲೋವಿ ಮಾಮುಂಡ್ ಮತ್ತು ವಾರ್ ಮಾಮುಂಡ್ ತಹಸಿಲ್‌ಗಳಲ್ಲಿ ಕರ್ಫ್ಯೂ ವಿಧಿಸಲಾಗಿದ್ದು, ಪಾಕಿಸ್ತಾನಿ ಸೇನೆ 3 ದಿನಗಳ ಕಾರ್ಯಾಚರಣೆ ಆರಂಭಿಸಿದೆ.

ಮುಂಬೈನಲ್ಲಿ ಭಾರೀ ಮಳೆ: ಭೂಕುಸಿತದಿಂದ ಇಬ್ಬರು ಸಾವು



ಮುಂಬೈ: ಮುಂಬೈನಲ್ಲಿ ಭಾರಿ ಮಳೆಯಾಗುತ್ತಿದ್ದು, ಶನಿವಾರ ಪೂರ್ವ ಉಪನಗರ ವಿಖ್ರೋಲಿಯಲ್ಲಿ ಸಂಭವಿಸಿದ ಭೂಕುಸಿತದಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ ಮತ್ತು ಹಲವರು ಗಾಯಗೊಂಡಿದ್ದಾರೆ ಎಂದು ಮಹಾನಗರ ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ. ಹತ್ತಿರದ ಗುಡ್ಡದ ಮಣ್ಣು ಮತ್ತು ಕಲ್ಲುಗಳು ಗುಡಿಸಲಿನ ಮೇಲೆ ಕುಸಿದು ಬಿದ್ದ ಪರಿಣಾಮ ನಾಲ್ವರು ಗಾಯಗೊಂಡಿದ್ದಾರೆ ಎಂದು ಬೃಹನ್‌ಮುಂಬೈ ಮುನ್ಸಿಪಲ್ ಕಾರ್ಪೊರೇಷನ್(ಬಿಎಂಸಿ) ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಒಂದೇ ಕುಟುಂಬಕ್ಕೆ ಸೇರಿದ ಗಾಯಾಳುಗಳನ್ನು ರಾಜವಾಡಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ವೈದ್ಯರು ಅವರಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ ಎಂದು ಘೋಷಿಸಿದರು. ಅಗ್ನಿಶಾಮಕ ದಳ, ಸ್ಥಳೀಯ ಪೊಲೀಸರು ಮತ್ತು ನಾಗರಿಕ ಸಿಬ್ಬಂದಿ ಸೇರಿದಂತೆ ತುರ್ತು ರಕ್ಷಣಾ ತಂಡಗಳನ್ನು ತಕ್ಷಣ ಸ್ಥಳಕ್ಕೆ ಕರೆಸಲಾಯಿತು ಎಂದು ಅಧಿಕಾರಿ ತಿಳಿಸಿದ್ದಾರೆ.

ಮೃತರನ್ನು ಶಾಲು ಮಿಶ್ರಾ(19) ಮತ್ತು ಸುರೇಶ್ ಮಿಶ್ರಾ(50) ಎಂದು ಗುರುತಿಸಲಾಗಿದ್ದು, ಆದರೆ ಇತರ ಇಬ್ಬರು, ಆರತಿ ಮಿಶ್ರಾ (45) ಮತ್ತು ರುತುರಾಜ್ ಮಿಶ್ರಾ (20) ಗಾಯಗೊಂಡಿದ್ದಾರೆ. ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಅವರು ಹೇಳಿದ್ದಾರೆ.

ಪಿಒಕೆಯಲ್ಲಿ ಭಾರೀ ಮಳೆ: ಒಂದೇ ದಿನ 342 ಮಂದಿ ಸಾವು



ಇಸ್ಲಾಮಾಬಾದ್: ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ (ಪಿಒಕೆ)ಹಲವು ಭಾಗಗಳಲ್ಲಿ ಭಾರೀ ಮಳೆಯಾಗುತ್ತಿದ್ದು, ಕಳೆದ 24 ಗಂಟೆಯಲ್ಲಿ ಕನಿಷ್ಠ 342 ಜನರು ಸಾವನ್ನಪ್ಪಿದ್ದಾರೆ ಮತ್ತು ಹಲವರು ಗಾಯಗೊಂಡಿದ್ದಾರೆ. ಧಾರಾಕಾರ ಮಳೆ ನಂತರ ಖೈಬರ್ ಪಖ್ತುನ್ಖ್ವಾ ಪ್ರಾಂತ್ಯದಲ್ಲಿ ಹೆಚ್ಚಿನ ಸಾವುಗಳು ಆಗಿವೆ. ವಿವಿಧ ಜಿಲ್ಲೆಗಳಲ್ಲಿ ಹಠಾತ್ ಪ್ರವಾಹದಿಂದ ಹಲವಾರು ಕಟ್ಟಡಗಳು ಧ್ವಂಸಗೊಂಡಿವೆ. ಪಾಕ್ ಆಕ್ರಮಿತ ಕಾಶ್ಮೀರದ ಗಿಲ್ಗಿಟ್–ಬಾಲ್ಟಿಸ್ತಾನ್‌ನಲ್ಲಿರುವ ಕಾರಕೋರಂ ಹೆದ್ದಾರಿ ಮತ್ತು ಬಾಲ್ಟಿಸ್ತಾನ್ ಹೆದ್ದಾರಿ ಸೇರಿದಂತೆ ಪ್ರಮುಖ ರಸ್ತೆಗಳನ್ನು ಬಂದ್ ಮಾಡಲಾಗಿದೆ. ಬುನರ್ ಜಿಲ್ಲೆಯಲ್ಲಿ ಒಟ್ಟು 75, ಮನ್ಸೆಹ್ರಾದಲ್ಲಿ 17 ಮತ್ತು ಖೈಬರ್ ಪಖ್ತುನ್ಖ್ವಾದ ಬಜೌರ್ ಮತ್ತು ಬಟಾಗ್ರಾಮ್ ಜಿಲ್ಲೆಗಳಲ್ಲಿ ತಲಾ 18 ಜನರು ಸಾವನ್ನಪ್ಪಿದ್ದಾರೆ ಎಂದು ಸ್ಥಳೀಯ ಸರ್ಕಾರಿ ಅಧಿಕಾರಿಗಳು ತಿಳಿಸಿದ್ದಾರೆ. ಗುರುವಾರ ರಾತ್ರಿಯಿಂದ ಕೆಲವು ಭಾಗಗಳಲ್ಲಿ ಮೇಘ ಸ್ಫೋಟದಿಂದ ಉಂಟಾದ ಹಠಾತ್ ಪ್ರವಾಹದಲ್ಲಿ ಮಕ್ಕಳು ಸೇರಿದಂತೆ 125ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಎಂದು ಪ್ರಾಂತೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ವಕ್ತಾರ ಫೈಜಿ ಶುಕ್ರವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮದ್ಯ ಕಳ್ಳಸಾಗಣೆದಾರರಿಂದ ದಾಳಿ; ಹೋಮ್ ಗಾರ್ಡ್ ಸಾವು, ಕಾನ್‌ಸ್ಟೇಬಲ್‌ಗೆ ಗಾಯ



ಪಾಟ್ನಾ: ಬಿಹಾರದ ಗೋಪಾಲ್‌ಗಂಜ್ ಜಿಲ್ಲೆಯಲ್ಲಿ ಶನಿವಾರ ಬೆಳಗಿನ ಜಾವ ಮದ್ಯ ಕಳ್ಳಸಾಗಣೆದಾರರ ಗುಂಪೊಂದು ಭದ್ರತಾ ಸಿಬ್ಬಂದಿ ಮೇಲೆ ದಾಳಿ ನಡೆಸಿದ್ದು, ಹೋಮ್ ಗಾರ್ಡ್ ಒಬ್ಬರು ಸಾವನ್ನಪ್ಪಿದ್ದಾರೆ ಮತ್ತು ಅಬಕಾರಿ ಇಲಾಖೆಯ ಕಾನ್‌ಸ್ಟೆಬಲ್ ಗಾಯಗೊಂಡಿದ್ದಾರೆ. ಮೃತ ಹೋಮ್ ಗಾರ್ಡ್, ಗೋಪಾಲ್‌ಗಂಜ್ ಜಿಲ್ಲೆಯ ಕುಚಾಯ್‌ಕೋಟ್ ಪೊಲೀಸ್ ಠಾಣೆ ವ್ಯಾಪ್ತಿಯ ಬೆಂಗಾಲ್ ಖಾರ್ ಗ್ರಾಮದ ನಿವಾಸಿ ಅಭಿಷೇಕ್ ಕುಮಾರ್ ಪಾಠಕ್(30) ಎಂದು ಗುರುತಿಸಲಾಗಿದೆ. ಇಂದು ಬೆಳಗ್ಗೆ 4.30ರ ಸುಮಾರಿಗೆ ಪಾಠಕ್ ಮತ್ತು ಇತರ ಅಬಕಾರಿ ಇಲಾಖೆ ಅಧಿಕಾರಿಗಳು, ನೆರೆಯ ಉತ್ತರ ಪ್ರದೇಶದಿಂದ ಅಕ್ರಮ ಮದ್ಯ ಸಾಗಿಸುತ್ತಿದ್ದರು ಎನ್ನಲಾದ ವಾಹನವನ್ನು ಬೆನ್ನಟ್ಟುತ್ತಿದ್ದಾಗ ಈ ಘಟನೆ ಸಂಭವಿಸಿದೆ. ನಿಲ್ಲಿಸಲು ಪದೇ ಪದೇ ಸೂಚಿಸಿದರೂ, ಚಾಲಕ ವಾಹನ ನಿಲ್ಲಿಸಿಲ್ಲ. ಅಬಕಾರಿ ತಂಡವು ಶೋಧ ಮುಂದುವರಿಸುತ್ತಿದ್ದಂತೆ, ಮದ್ಯ ಕಳ್ಳಸಾಗಣೆದಾರರು ವಿಶಾಂಭರ್ಪುರ ಪೊಲೀಸ್ ಠಾಣೆ ವ್ಯಾಪ್ತಿಯ ಸಿಪಾಯಾ ಎಂಜಿನಿಯರಿಂಗ್ ಕಾಲೇಜು ಬಳಿ ದಾಳಿ ನಡೆಸಿದರು. ಈ ದಾಳಿಯಲ್ಲಿ, ಗೃಹರಕ್ಷಕ ದಳದ ಒಬ್ಬ ಸಿಬ್ಬಂದಿ ಸಾವನ್ನಪ್ಪಿದರು ಮತ್ತು ಕಾನ್‌ಸ್ಟೆಬಲ್ ಗಾಯಗೊಂಡಿದ್ದಾರೆ.

2022ರಲ್ಲಿ ಟ್ರಂಪ್ ಅಧ್ಯಕ್ಷರಾಗಿದ್ದರೆ ಉಕ್ರೇನ್ ಜೊತೆ ಯುದ್ಧವಾಗುತ್ತಿರಲಿಲ್ಲ



ಅಲಾಸ್ಕಾ: 2022ರಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಧಿಕಾರದಲ್ಲಿದ್ದರೆ, ರಷ್ಯಾ–ಉಕ್ರೇನ್ ಸಂಘರ್ಷ ಎಂದಿಗೂ ಸಂಭವಿಸುತ್ತಿರಲಿಲ್ಲ ಎಂದು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿದ್ದಾರೆ. ಟ್ರಂಪ್ ಹಲವಾರು ಬಾರಿ ಈ ಹೇಳಿಕೆಯನ್ನು ನೀಡಿದ್ದಾರೆ, ಉಕ್ರೇನ್–ರಷ್ಯಾ ಯುದ್ಧಕ್ಕೆ ಅವರ ಪೂರ್ವವರ್ತಿ ಜೋ ಬಿಡೆನ್ ಅವರನ್ನು ದೂಷಿಸಿದ್ದಾರೆ.

ಟ್ರಂಪ್ ಅವರೊಂದಿಗೆ ಸುಮಾರು 3 ಗಂಟೆಗಳ ಮಾತುಕತೆ ನಂತರ ಜಂಟಿ ಪತ್ರಿಕಾಗೋಷ್ಠಿಯಲ್ಲಿ, ಮಾತನಾಡಿದ ಪುಟಿನ್, 2022 ರಲ್ಲಿ, ಎರಡು ರಾಷ್ಟ್ರಗಳ ನಡುವಿನ ಉದ್ವಿಗ್ನತೆಗಳು ಹಿಂತಿರುಗದ ಹಂತವನ್ನು ತಲುಪಲು ಬಿಡಬಾರದು ಎಂದು ಬಿಡೆನ್‌ಗೆ ಎಚ್ಚರಿಕೆ ನೀಡಿದ್ದೆ ಎಂದರು. ಇಂದು, ಅಧ್ಯಕ್ಷ ಟ್ರಂಪ್ ಅವರು ಆಗ ಅಧ್ಯಕ್ಷರಾಗಿದ್ದರೆ, ಯುದ್ಧ ಇರುತ್ತಿರಲಿಲ್ಲ, ಆ ಬಗ್ಗೆ ನನಗೆ ಖಾತ್ರಿ ಇತ್ತು. 2022ರಲ್ಲಿ ಹಿಂದಿನ ಆಡಳಿತದೊಂದಿಗಿನ ಕೊನೆಯ ಸಂಪರ್ಕದ ಸಮಯದಲ್ಲಿ ಯುದ್ಧದ ವಿಷಯಕ್ಕೆ ಬಂದಾಗ ಪರಿಸ್ಥಿತಿ ಹಿಂತಿರುಗದ ಹಂತಕ್ಕೆ ತರಬಾರದು ಎಂದು ನಾನು ನನ್ನ ಹಿಂದಿನ ಅಮೇರಿಕನ್ ಸಹೋದ್ಯೋಗಿಗೆ ಮನವರಿಕೆ ಮಾಡಲು ಪ್ರಯತ್ನಿಸಿದೆ. ಅದು ದೊಡ್ಡ ತಪ್ಪು ಎಂದು ನಾನು ಆಗ ನೇರವಾಗಿ ಹೇಳಿದ್ದೆ. ಶುಕ್ರವಾರದ ಮಾತುಕತೆಗಳು ಉಪಯುಕ್ತವಾಗಿದ್ದವು ಮತ್ತು ರಚನಾತ್ಮಕ ವಾತಾವರಣದಲ್ಲಿ ನಡೆದವು ಎಂದು ಪುಟಿನ್ ತಿಳಿಸಿದ್ದಾರೆ.

ಮೈಸೂರು ಮಿತ್ರ

ರಾಜಾಸೀಟ್‌ನಲ್ಲಿ ಗ್ಲಾಸ್ ಬ್ರಿಡ್ಜ್ ಯೋಜನೆ ರದ್ದು : ಶಾಸಕ ಡಾ.ಮಂಥರ್ ಗೌಡ



ಮಡಿಕೇರಿ: ರೈತರ ಮತ್ತು ಸಾರ್ವಜನಿಕರ ತೀವ್ರ ವಿರೋಧದ ಹಿನ್ನಲೆಯಲ್ಲಿ ರಾಜಾಸೀಟ್‌ನಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲುದ್ದೇಶಿಸಿದ್ದ ಗ್ಲಾಸ್ ಬ್ರಿಡ್ಜ್‌ನ್ನು ಕೈ ಬಿಡಲಾಗಿದೆ ಎಂದು ಶಾಸಕ ಡಾ. ಮಂಥರ್ ಗೌಡ ತಿಳಿಸಿದ್ದಾರೆ.

ಪ್ರವಾಸಿಗರನ್ನು ಸೆಳೆಯುವ ದೃಷ್ಟಿಯಿಂದ ಹಾಗೂ ರಾಜಾಸೀಟ್‌ನ ಸೊಬಗನ್ನು ಹೆಚ್ಚಿಸುವ ಹಿನ್ನೆಲೆಯಲ್ಲಿ ಅಲ್ಲಿ ಗ್ಲಾಸ್ ಬಿಡ್ಜ್‌ನ್ನು ನಿರ್ಮಿಸಲು ಯೋಜಿಸಲಾಗಿತ್ತು. ಆದರೆ ಈ ಸಂಬಂಧ ರೈತರು, ವಿರೋಧ ವ್ಯಕ್ತಪಡಿಸಿ ಚಳವಳಿ ನಡೆಸಿದ್ದರು.

ನಗರಸಭೆಯಲ್ಲೂ ಈ ವಿಷಯ ತೀವ್ರ ಚರ್ಚೆಗೆ ಎಡಮಾಡಿಕೊಟ್ಟಿದ್ದು, ಬಹುತೇಕ ಸದಸ್ಯರು ಸದನದಲ್ಲೇ ವಿರೋಧ ವ್ಯಕ್ತಪಡಿಸಿದ್ದರು. ಯಾವುದೆ ಕಾರಣಕ್ಕೂ ಈ ಗ್ಲಾಸ್ ಬ್ರಿಡ್ಜ್ ನಿರ್ಮಿಸಲು ಅವಕಾಶ ಕೊಡುವುದಿಲ್ಲ ಎಂದು ಬಿಜೆಪಿ ಸದಸ್ಯರು ಕಳೆದ ಬುಧವಾರ ನಡೆದಿದ್ದ ನಗರಸಭೆ ಮಾಸಿಕ ಸಭೆಯಲ್ಲಿ ಸಾರಿದ್ದರು. ನಗರಸಭೆ ಸದಸ್ಯ ಉಮೇಶ್ ಸುಬ್ರಮಣಿ ರಾಜಾಸೀಟ್ ಪಕ್ಕದಲ್ಲೆ ಇರುವ ಇಂದಿರಾ ನಗರ, ಚಾಮುಂಡೇಶ್ವರಿ ನಗರಗಳು ಮಳೆಯಿಂದ ಸಂಕಷ್ಟಕ್ಕೆ ಸಿಲುಕುವ ಸೂಕ್ಷ್ಮ ವಲಯಗಳಾಗಿವೆ. ಮುಂಗಾರಿನ ಅವಧಿಯಲ್ಲಿ ಮನೆಗಳನ್ನು ತೆರವುಗೊಳಿಸುವಂತೆ ಹಲವರಿಗೆ ನೋಟಿಸನ್ನು ಹಿಂದೆ ನೀಡಲಾಗಿದೆ. ಇದರ ಪಕ್ಕದಲ್ಲೆ ಇರುವ ರಾಜಾಸೀಟು ಸಹ ಬೆಟ್ಟ ಪ್ರದೇಶವಾಗಿದೆ. ಅಲ್ಲಿ ಗ್ಲಾಸ್ ಬ್ರಿಡ್ಜ್ ಯೋಜನೆ ಜಾರಿ ಎಷ್ಟು ಸರಿ ಎಂದು ನಗರಸಭೆಯ ಮಾಸಿಕ ಸಭೆಯಲ್ಲಿ ಪ್ರಶ್ನಿಸಿದ್ದರು.

ಕೇವಲ ಪ್ರವಾಸೋದ್ಯಮದ ಅಭಿವೃದ್ಧಿಯ ನೆಪದಲ್ಲಿ ಇಂತಹ ಪರಿಸರ ವಿರೋಧಿ ಯೋಜನೆಗಳನ್ನು ಜಾರಿಗೊಳಿಸುವ ಪ್ರಯತ್ನಗಳು ನಡೆಯುತ್ತಿದೆ. ಈಗಾಗಲೆ ಭಾಗಮಂಡಲ ರಸ್ತೆಯಲ್ಲಿ, ಅಬ್ಬಿ ಫಾಲ್ಸ್ ರಸ್ತೆಯಲ್ಲಿ ಗ್ಲಾಸ್‌ಬ್ರಿಡ್ಜ್‌ಗಳು ನಿರ್ಮಾಣವಾಗಿ ಪ್ರಸ್ತುತ ಸ್ಥಗಿತವಾಗಿದೆ. ಇವುಗಳು ಇರುವ ಪ್ರದೇಶಗಳಲ್ಲಿ ಪ್ರವಾಸಿಗರ ಬೀಡು, ವಾಹನಗಳ ದಟ್ಟಣೆಯಿಂದ ಆ ಪ್ರದೇಶಗಳಲ್ಲಿನ ಸ್ಥಳೀಯರು ತೀವ್ರ ಸಂಕಷ್ಟ ಎದುರಿಸುವಂತಾಗಿದೆ. ಕೇವಲ ಪ್ರವಾಸೋದ್ಯಮದ ಅಭಿವೃದ್ಧಿಯ ನೆಪದಲ್ಲಿ ಇಂತಹ ಪರಿಸರ ವಿರೋಧಿ ಯೋಜನೆಗಳನ್ನು ಜಾರಿಗೊಳಿಸುವ ಪ್ರಯತ್ನಗಳು ನಡೆಯುತ್ತಿದೆ ಎಂದು ಪಶ್ಚಿಮ ಘಟ್ಟ ಸಂರಕ್ಷಣಾ ಸಮಿತಿಯ ಮಾಜಿ ಅಧ್ಯಕ್ಷ ಶಾಂತೆಯಂಡ ರವಿಕುಶಾಲಪ್ಪ ಆರೋಪಿಸಿದ್ದರು.

ತಾರತಮ್ಯ ಇಲ್ಲದೆ ಒಟ್ಟುಗೂಡಿ ಪ್ರಗತಿಯತ್ತ ಚಿಂತನೆ ಮಾಡೋಣ: ಸಚಿವ ಭೋಸರಾಜು



ನಗರದ ಕೋಟೆ ಆವರಣದಲ್ಲಿ ನಡೆದ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಆಕರ್ಷಕ ಪಥ ಸಂಚಲನದ ಗೌರವ ರಕ್ಷೆ ಸ್ವೀಕರಿಸಿದರು

ಮಡಿಕೇರಿ,ಆ.16–ಸ್ವಾತಂತ್ರ್ಯದ ಪರಿಕಲ್ಪನೆಯ ಸಮಗ್ರತೆಯನ್ನು ಅರ್ಥೈಸಿಕೊಂಡು ಯಾವುದೇ ತಾರತಮ್ಯ ಇಲ್ಲದೆ ಎಲ್ಲರೂ ಒಟ್ಟುಗೂಡಿ ಪ್ರಗತಿಯತ್ತ ಚಿಂತನೆ ಮಾಡೋಣ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು ಸಂದೇಶ ನೀಡಿದರು.

ನಗರದ ಕೋಟೆ ಆವರಣದಲ್ಲಿ ನಡೆದ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಮಾತನಾಡಿದ ಸಚಿವರು ಬಹು ಹಿಂದಿನಿಂದಲೂ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುವ ನಾಯಕರನ್ನು ಕೊಟ್ಟಿದೆ. ಅದೇ ಸಂದರ್ಭದಲ್ಲಿ ಭಾರತೀಯ ಸೈನ್ಯದಲ್ಲಿ ಪ್ರಮುಖ ಹುದ್ದೆಗಳನ್ನು ನಿರ್ವಹಿಸಿ ದೇಶಕ್ಕಾಗಿ ಸೇವೆ ಸಲ್ಲಿಸಿದ ಸ್ಮರಣೀಯರನ್ನು ಸಹ ನೀಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.ಈ ಬಾರಿ ದೀಪಾ ಬಾಸ್ತಿ ಅವರ 'ಹಾರ್ಟ್ ಲ್ಯಾಂಪ್'ಕಥಾ ಸಂಕಲನಕ್ಕೆ ಅಂತಾರಾಷ್ಟ್ರೀಯ ಮಟ್ಟದ ಬೂಕರ್ ಪ್ರಶಸ್ತಿ ದೊರೆತಿದ್ದು, ಜಿಲ್ಲೆಗೆ ಕೀರ್ತಿಯನ್ನು ತಂದಿದೆ ಎಂದು ಹರ್ಷಿಸಿದರು.

ತಲಾ ಆದಾಯ ಹೆಚ್ಚಳ: ಗ್ಯಾರಂಟಿ ಯೋಜನೆಗಳಿಂದ ನಾಡಿನ ಜನರ ತಲಾ ಆದಾಯ ಹೆಚ್ಚಾಗಿದೆ. ಬಡವರ ಸಂಖ್ಯೆ ಹಾಗೂ ಅಸಮಾನತೆ ಕಡಿಮೆಯಾಗುತ್ತಿದ್ದು, ಸಮ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಲಾಗುತ್ತಿದೆ. ಪೊನ್ನಂಪೇಟೆ ಕುಶಾಲ ನಗರ ತಾಲೂಕು ಇಲ್ಲಿ ಸರ್ಕಾರ ಪ್ರಜಾಸೌಧ ಹೆಸರಿನಲ್ಲಿ 2 ಆಡಳಿತ ಸೌಧ ನಿರ್ಮಾಣಕ್ಕೆ ತಲಾ 8.65 ಕೋಟಿ ರೂ.ವನ್ನು ಮಂಜೂರು ಮಾಡಿದ್ದು, ಟೆಂಡರ್ ಪ್ರಕ್ರಿಯೆಯೂ ಆಗಿದ್ದು, ಶೀಘ್ರ ಕಾಮಗಾರಿಗೆ ಚಾಲನೆ ದೊರೆಯಲಿದೆ

ರಸ್ತೆಗಳ ಅಭಿವೃದ್ಧಿ: ರಸ್ತೆಗಳ ಅಭಿವೃದ್ಧಿಗಾಗಿ ವಿಧಾನಸಭಾ ಕ್ಷೇತ್ರಕ್ಕೆ 15 ಕೋಟಿ ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರಕ್ಕೆ 15 ಕೋಟಿ ಅನುದಾನ ಬಿಡುಗಡೆಯಾಗಿದೆ. ಹೆಚ್ಚುವರಿಯಾಗಿ ಮಡಿಕೇರಿ ವಿಧಾನಸಭಾ ಕ್ಷೇತ್ರಕ್ಕೆ 15 ಕೋಟಿ ಅನುದಾನ ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರಕ್ಕೆ ರೂ.52.60 ಕೋಟಿ ಅನುದಾನ ಬಿಡುಗಡೆಯಾಗಿದ್ದು ರಸ್ತೆಗಳ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದೆ ಎಂದರು.

ಆಕರ್ಷಕ ಪಥ ಸಂಚಲನ: ಜಿಲ್ಲಾ ಪೊಲೀಸ್ ಸೇರಿದಂತೆ ವಿವಿಧ ಶಾಲೆಗಳ ಎನ್‌ಸಿಸಿ, ಸೇವಾದಳ, ಸ್ಕೌಟ್ಸ್ ವಿದ್ಯಾರ್ಥಿಗಳಿಂದ ಆಕರ್ಷಕ ಪಥ ಸಂಚಲನ ನಡೆಯಿತು.ಉಸ್ತುವಾರಿ ಸಚಿವರು ಪಥ ಸಂಚಲನದ ಗೌರವ ವಂದನೆ ಸ್ವೀಕರಿಸಿದರು.

ವೇದಿಕೆಯಲ್ಲಿ ಶಾಸಕ ಡಾ.ಮಂತರ್ ಗೌಡ, ನಗರ ಸಭೆ ಅಧ್ಯಕ್ಷೆ ಪಿ.ಕಲಾವತಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ಧರ್ಮಜ ಉತ್ತಪ್ಪ, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿ.ಪಂ. ಸಿಇಓ ಆನಂದ್ ಪ್ರಕಾಶ್ ಮೀನಾ, ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ದಿನೇಶ್ ಕುಮಾರ್ ಉಪಸ್ಥಿತರಿದ್ದರು.

ನದಿಗೆ ಹಾರಿ ಆತ್ಮಹತ್ಯೆ ಯತ್ನ ಅರಣ್ಯ ಸಿಬ್ಬಂದಿಗಳಿಂದ ರಕ್ಷಣೆ



ಕುಶಾಲನಗರ: ಕಾವೇರಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ ವ್ಯಕ್ತಿಯೋರ್ವನ ಪ್ರಾಣ ಉಳಿಸುವಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಯಶಸ್ವಿಯಾಗಿರುವ ಘಟನೆ ಗುರು ವಾರ ಟೋಲ್‌ಗೇಟ್ ಬಳಿ ನಡೆದಿದೆ.

ಸಾಲಬಾಧೆಯಿಂದ ಬೇಸತ್ತು ಕುಶಾಲನಗರ–ಕೊಪ್ಪ ಕಾವೇರಿ ನದಿ ಸೇತುವೆಯಿಂದ ನದಿಗೆ ಹಾರುತ್ತಿದ್ದ ಆಟೋ ಚಾಲಕ ಹರೀಶ (40) ಎಂಬಾತನನ್ನು ಅರಣ್ಯ ತಪಾಸಣಾ ಗೇಟ್ ಸಿಬ್ಬಂದಿಗಳಾದ ಸಂಪತ್ ಮತ್ತು ಹೆಚ್.ವಿ ಧರ್ಮ ರಕ್ಷಣೆ ಮಾಡಿದ್ದಾರೆ.

ನಾಳೆ ಮಡಿಕೇರಿಯಲ್ಲಿ ಉದ್ಯೋಗ ಮೇಳ

ಮಡಿಕೇರಿ: ಜಿಲ್ಲಾ ಉದ್ಯೋಗ ವಿನಿಮಯ ಇಲಾಖೆಯಿಂದ ಆ.18ರ ಬೆಳಗ್ಗೆ 11 ರಿಂದ 1 ಗಂಟೆಯವರೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಮಿನಿ ಉದ್ಯೋಗ ಮೇಳ ನಡೆಯಲಿದೆ. ಈ ಮೇಳದಲ್ಲಿ ನಗರದ ವುಡ್‌ಸ್ಟಾಕ್ ರೆಸಾರ್ಟ್, ತಾಜ್ ರೆಸಾರ್ಟ್ಸ್, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್, ಕಲ್ಯಾಣಿ ಮೋಟಾರ್ಸ್, ಮೈಸೂರಿನ ಮುತ್ತೂಟ್ ಫೈನಾನ್ಸ್, ಪ್ಯಾಲೇಸ್ ಟೊಯೋಟ ತಮ್ಮ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದ್ದಾರೆ.

ಬಕ್ಕ ಅಂಗನವಾಡಿ ಕೇಂದ್ರದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ

ನಾಪೋಕ್ಲು, ಆ.16–ಸಮೀಪದ ಬೆಟ್ಟಗೇರಿ ಗ್ರಾಮದ ಬಕ್ಕ ಅಂಗನವಾಡಿ ಕೇಂದ್ರದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಅಂಗನವಾಡಿ ಮಕ್ಕಳಿಗೆ ರಾಧಾ ಕೃಷ್ಣ ಛದ್ಮವೇಷ ಹಾಕಿಸಿ ಸಿಹಿ ಹಂಚುವ ಮೂಲಕ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆ ಶೈಲಜಾ ಕಿರಿಯ ಆರೋಗ್ಯ ಸಹಾಯಕಿ ಕೃತಿಕ ರಾಣಿ, ಆಶಾ ಕಾರ್ಯಕರ್ತೆಯರಾದ ಜಯಚಿತ್ರ, ಉಷಾ, ಪ್ರಮೀಳಾ ಅಂಗನವಾಡಿ ಸಹಾಯಕಿ ಹೇಮ, ಪೋಷಕರು ಸಾರ್ವಜನಿಕರು ಭಾಗವಹಿಸಿ ಸಂಭ್ರಮಿಸಿದರು.



ಅಂಗನವಾಡಿ ಮಕ್ಕಳಿಗೆ ಛದ್ಮವೇಷ ಹಾಕಿಸಿ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು.

ಮುಸಲ್ಮಾನರನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿರುವ ಕಾಂಗ್ರೆಸ್: ಟೀಕೆ

ಮಡಿಕೇರಿ: ಮುಸಲ್ಮಾನರನ್ನು ಕೇವಲ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿರುವ ಕಾಂಗ್ರೆಸ್ ಪಕ್ಷ ಯಾವುದೇ ಅಧಿಕಾರವನ್ನು ನೀಡದೆ ಅನ್ಯಾಯ ಮಾಡುತ್ತಿದೆ ಎಂದು ಜಿಲ್ಲಾ ಜಾತ್ಯತೀತ ಜನತಾದಳದ ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ಕೆ.ಜಿ.ಜಾಶಿರ್ ಟೀಕಿಸಿದ್ದಾರೆ.

ಜಿಲ್ಲೆಯಲ್ಲಿ ಬದಲಾವಣೆ ತರಬೇಕು ಎಂಬ ಉದ್ದೇಶದಿಂದ ಮುಸಲ್ಮಾನ ಸಮುದಾಯದವರು ಒಗ್ಗೂಡಿ ಶೇ.99ರಷ್ಟು ಮತಗಳನ್ನು ಕಾಂಗ್ರೆಸ್‌ಗೆ ಹಾಕಿ ಇಬ್ಬರು ಶಾಸಕರನ್ನು ಗೆಲ್ಲಿಸಿದ್ದೇವೆ. ಈಗ ಕಾಂಗ್ರೆಸ್ ಅಧಿಕಾರದಲ್ಲಿದ್ದರೂ ಜಿಲ್ಲೆಯ ಮುಸಲ್ಮಾನ ಸಮುದಾಯವನ್ನು ಎರಡನೇ ದರ್ಜೆ ಕೆಲಸಗಾರರಂತೆ ನಡೆಸಿಕೊಳ್ಳುತ್ತಿದೆ ಎಂದು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಸಂಸದರು ಯಾವುದೇ ಪ್ರಚಾರವನ್ನು ಬಯಸದೆ ಸಮುದಾಯದ ಅಭಿವೃದ್ಧಿಗೆ ಸಹಕಾರ ನೀಡುತ್ತಿದ್ದಾರೆ. ವಿರಾಜಪೇಟೆ ಶಾಸಕರು ಕ್ಷೇತ್ರಕ್ಕೆ ಸಾವಿರ ಕೋಟಿ ತಂದಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ, ಮುಸಲ್ಮಾನರ ಕ್ರೀಡಾ ಕೂಟಗಳಿಗೆ ಸರಕಾರದ ಅನುದಾನ ದೊರೆಯುತ್ತಿಲ್ಲ. ಮುಸಲ್ಮಾನರೇ ಹೆಚ್ಚಿನ ಸಂಖ್ಯೆಯಲ್ಲಿರುವ ಗ್ರಾಮಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿದರೂ ಯಾವುದೇ ಅಭಿ ವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಿಲ್ಲ. ಕೇವಲ ಒಂದು ಗುಂಪಿನ ಓಲೈಕೆಗಾಗಿ ತಮ್ಮ ಕಾರ್ಯವನ್ನು ಸೀಮಿತಗೊಳಿಸಿದ್ದಾರೆ ಎಂದು ಅವರು ಆರೋಪಿಸಿದರು.

ಕಾಂಗ್ರೆಸ್ ಪಕ್ಷ ಮುಸಲ್ಮಾನ ಸಮುದಾಯಕ್ಕೆ ಏನು ಕೊಡುಗೆ ನೀಡುತ್ತಿದೆ ಎನ್ನುವುದನ್ನು ಜೆಡಿಎಸ್ ಗಮನಿಸುತ್ತಿದೆ. ಇದೇ ರೀತಿ ಕಡೆಗಣನೆ ಮುಂದು ವರೆದರೆ ಮುಸಲ್ಮಾನರು ಕಾಂಗ್ರೆಸ್ಸನ್ನು ತೊರೆದು ಪರ್ಯಾಯ ರಾಜಕೀಯ ಶಕ್ತಿಯೊಂದಿಗೆ ಗುರುತಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಜೆಡಿಎಸ್ ಅಲ್ಪಸಂಖ್ಯಾತರ ಘಟಕದ ಮಡಿಕೇರಿ ತಾಲ್ಲೂಕು ಅಧ್ಯಕ್ಷ ಕೆ.ಎಂ.ಅಶ್ರಫ್, ವಿರಾಜಪೇಟೆ ತಾಲೂಕು ಅಧ್ಯಕ್ಷ ಮಜೀದ್ ಚೊಕಂಡಳ್ಳಿ, ಯುವ ಘಟಕದ ಅಧ್ಯಕ್ಷ ಕೆ.ಹೆಚ್.ಸೈಫುದ್ದೀನ್ ಹಾಗೂ ಕುಶಾಲನಗರ ತಾಲ್ಲೂಕು ಅಧ್ಯಕ್ಷ ವಿಪಿಎಸ್ ಶಿಯಾಬ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಸಂಚಾರಿ ಮಲತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಚಾಲನೆ

ಮಡಿಕೇರಿ ಆ.16–ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ಕೊಡಗು ಜಿಲ್ಲೆಯಲ್ಲಿ ಕಾರ್ಯಾರಂಭಿಸಲಿರುವ ಸಂಚಾರಿ ಮಲತ್ಯಾಜ್ಯ ಸಂಸ್ಕರಣಾ ಘಟಕ (ಮೊಬೈಲ್ ಸೆಪ್ಟೇಜ್ ಟ್ರೀಟ್‌ಮೆಂಟ್ ಯುನಿಟ್) ಆರಂಭಗೊಂಡಿದೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಇಲಾಖೆ, ಸ್ವಚ್ಛ ಭಾರತ್ ಕೋಶ್ ಟ್ರಸ್ಟ್, ಸ್ವಚ್ಛ ಭಾರತ್ ಮಿಷನ್(ಗ್ರಾ) ಮತ್ತು ಜಿಲ್ಲಾ ಪಂಚಾ ಯತ್ ಸಹಯೋಗದೊಂದಿಗೆ ಕಾರ್ಯಾರಂಭಿಸಲಿರುವ 3 ಮೊಬೈಲ್ ಸೆಪ್ಟೇಜ್ ಟ್ರೀಟ್‌ಮೆಂಟ್ ಯುನಿಟ್ ವಾಹನಗಳಿಗೆ ಶುಕ್ರವಾರ ಜಿಲ್ಲಾ ಉಸ್ತುವಾರಿ ಸಚಿವರು ಹಸಿರು ನಿಶಾನೆ ತೋರಿದರು.

ಮಲತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಒಂದು ಬಾರಿ ಮಲತ್ಯಾಜ್ಯ ಸಂಸ್ಕರಣೆಗೊಂಡು ಘನ ಮತ್ತು ದ್ರವ ತ್ಯಾಜ್ಯಗಳು ಸಂಪೂರ್ಣವಾಗಿ ಪ್ರತ್ಯೇಕಗೊಂಡು ಸಂಸ್ಕರಣೆಯಾಗಲು ಕನಿಷ್ಟ 3 ತಿಂಗಳ ಸಮಯಾವಕಾಶ ಬೇಕಾಗುತ್ತದೆ. ಆದರೆ ಸಂಚಾರಿ ಮಲತ್ಯಾಜ್ಯ ಸಂಸ್ಕರಣಾ ವಾಹನ ಈ ಕಾರ್ಯವನ್ನು ಕೆಲವೇ ಗಂಟೆಗಳಲ್ಲಿ ಮಾಡುತ್ತದೆ. ಇದು ಪ್ರತ್ಯೇಕಿಸುವ ಮಲತ್ಯಾಜ್ಯದಲ್ಲಿನ ನೀರನ್ನು ಶೇ.60–70 ರಷ್ಟು ಶುದ್ಧೀಕರಿಸುತ್ತದೆ. ಈ ನೀರು ಕುಡಿಯಲು ಯೋಗ್ಯವಲ್ಲ, ಆದರೆ ತೋಟಗಳಿಗೆ ಮತ್ತು ಗಿಡಗಳಿಗೆ ಬಳಸಬಹುದಾಗಿದೆ. ಇಲ್ಲವಾದರೆ ನೇರವಾಗಿ ಚರಂಡಿಗೆ ಹರಿಯ ಬಿಡಬಹುದಾಗಿದೆ. ಸಂಸ್ಕರಣೆಯ ನಂತರ ಉಳಿಯುವ ಮಲಹೂಳು (ಮಲತ್ಯಾಜ್ಯ) ಶೇ.80ರಷ್ಟು ಸಂಸ್ಕರಣೆಗೊಂಡಿರುತ್ತದೆ. (ಡಿಕಂಪೋಸ್) ಇದನ್ನು ಮಲತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ರವಾನಿಸಿ ಗೊಬ್ಬರ ತಯಾರಿಕೆಯಲ್ಲಿ ಬಳಸಬಹುದಾಗಿರುತ್ತದೆ.

ಅನುದಾನ ವೆಚ್ಚ: ಜಿಲ್ಲೆಯಲ್ಲಿ ಈಗಾಗಲೇ ಮೂರು ವಾಹನಗಳು ಕಾರ್ಯಾರಂ ಭಿಸಲಿದ್ದು, ಪ್ರತಿ ವಾಹನಕ್ಕೆ ರೂ.30 ಲಕ್ಷ ವೆಚ್ಚ ಮಾಡ ಲಾಗಿದ್ದು, ಒಟ್ಟು 90 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಈ ಅನುದಾನವನ್ನು ಸಂಪೂರ್ಣವಾಗಿ ಸ್ವಚ್ಛ ಭಾರತ್ ಕೋಶ್ ಟ್ರಸ್ಟ್‌ನಿಂದ ಭರಿಸಲಾಗಿದೆ.

ಎಲ್ಲೆಲ್ಲಿ ಕಾರ್ಯಾಚರಣೆ: ಜಿಲ್ಲೆಯ ಕುಟ್ಟ, ನಾಪೋಕ್ಲು ಮತ್ತು ಶನಿವಾರ ಸಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಈ ಸಂಚಾರಿ ಮಲ ತ್ಯಾಜ್ಯ ಸಂಸ್ಕರಣಾ ವಾಹನ ಕಾರ್ಯ ನಿರ್ವ ಹಿಸಲಿದೆ. ಮುಂದಿನ ದಿನಗಲ್ಲಿ ಗ್ರಾ.ಪಂ ಮಾತ್ರವಲ್ಲದೆ ತಾಲೂಕು ವ್ಯಾಪ್ತಿಯಲ್ಲಿಯೂ ಇದು ಸೇವೆಗೆ ಲಭ್ಯ ವಾಗಲಿದೆ.

ವಿಶೇಷತೆ: ಈ ವಾಹನದ ಸಾಮರ್ಥ್ಯ 6 ಕಿಲೋ ಲೀಟರ್ ಪರ್ ಡೇ ಆಗಿದ್ದು, ಮಲತ್ಯಾಜ್ಯ ಸಂಸ್ಕರಣೆ, ನಿರ್ವಹಣೆ ಮತ್ತು ವಿಲೇವಾರಿ ಮಾಡಲು ಎಫ್‌ಎಸ್‌ಟಿ.ಪಿಗೆ ತರುವ ಅವಶ್ಯಕತೆ ಇಲ್ಲ. ಸಂಚಾರಿ ಮಲತ್ಯಾಜ್ಯ ಸಂಸ್ಕರಣಾ ವಾಹನದಲ್ಲಿಯೇ ಈ ಪ್ರಕ್ರಿಯೆ ನಡೆಯುತ್ತದೆ. ಇದಕ್ಕೆ ಬೇಕಾದ ಸಂಪೂರ್ಣ ಪರಿಕರಗಳ ವ್ಯವಸ್ಥೆ ವಾಹನದಲ್ಲಿಯೇ ಇರುತ್ತದೆ.

ಪ್ರಿಯತಮೆ ಮಾತನಾಡಿಸುತ್ತಿಲ್ಲವೆಂದು ಎದೆಗೆ ಚುಚ್ಚಿಕೊಂಡ ಭಗ್ನಪ್ರೇಮಿ

ಚಾಮರಾಜನಗರ, ಆ.16–ಪ್ರೀತಿಸಿದ ಹುಡುಗಿ ಮಾತನಾಡಿಸುತ್ತಿಲ್ಲ ಎಂದು ಆರೋಪಿಸಿ ಭಗ್ನ ಪ್ರೇಮಿಯೊಬ್ಬ ತಾನೇ ಎದೆಗೆ ಚಾಕುವಿನಿಂದ ಚುಚ್ಚಿಕೊಂಡ ಪ್ರಸಂಗ ನಗರದ ಸರ್ಕಾರಿ ಸಾರಿಗೆ ಸಂಸ್ಥೆ ಬಸ್ ನಿಲ್ದಾಣದಲ್ಲಿ ಶನಿವಾರ ನಡೆದಿದೆ.


ಸಾಣೆಗಾಲದ ಯುವಕ ಪ್ರದೀಪ್ ಎಂಬಾತನೇ ಎದೆಗೆ ಚುಚ್ಚಿಕೊಂಡ ಯುವಕನಾಗಿದ್ದಾನೆ. ಈತ ಎರಡು ವರ್ಷಗಳಿಂದ ಅಪ್ರಾಪ್ತ ಯುವತಿಯನ್ನು ಪ್ರೀತಿಸುತಿದ್ದನೆನ್ನಲಾಗಿದೆ. ಆದರೆ ಯುವತಿಯ ಪೋಷಕರು ಅಪ್ರಾಪ್ತ ಯುವತಿಗೆ ಬುದ್ದಿ ಹೇಳಿ ಪ್ರೀತಿ ಪ್ರೇಮ ಎಂದು ಓಡಾಡದಂತೆ ಎಚ್ಚರಿಕೆ ನೀಡಿ ಪ್ರಥಮ ಪಿಯುಸಿ ಓದಲು ಕಾಲೇಜಿಗೆ ಕಳುಹಿಸುತ್ತಿದ್ದರು ಎಂದು ತಿಳಿದು ಬಂದಿದೆ. ಅದರಂತೆ ಅಪ್ರಾಪ್ತ ಯುವತಿ ಪೋಷಕರ ಮಾತಿಗೆ ಮನ್ನಣೆ ನೀಡಿ ಸಾಣೆಗಾಲದ ಪ್ರದೀಪನೊಂದಿಗೆ 6 ತಿಂಗಳಿಂದ ಮಾತು ಬಿಟ್ಟಿದ್ದಳೆನ್ನಲಾಗಿದೆ.

ಇದರಿಂದ ಮನನೊಂದಿದ್ದ ಯುವಕ ಪ್ರದೀಪ್ ನಗರದ ಸರ್ಕಾರಿ ಬಸ್ ನಿಲ್ದಾಣದಲ್ಲಿ ಯುವತಿಯರು ಬಸ್ ಹತ್ತುವುದನ್ನ ಗಮನಿಸಿದ್ದಾನೆ. ಈ ವೇಳೆ ಪ್ರದೀಪ ತನ್ನ ಎದೆಗೆ ತಾನೆ ಚಾಕು ಇರಿದುಕೊಂಡಿದ್ದಾನೆ. ನಂತರ ಚಾಕುವನ್ನು ಅಪ್ರಾಪ್ತ ಯುವತಿಗೆ ನೀಡಿ ಅವಳೆ ಚುಚ್ಚಿದ್ದಾಳೆ ಎಂದು ಹೈಡ್ರಾಮ ಸೃಷ್ಟಿಸಲು ಹೋಗಿ ತಗಲಾಕಿಕೊಂಡಿದ್ದಾನೆ. ಎದೆಗೆ ಚುಚ್ಚಿಕೊಂಡು ಕೈಗೆ ಚಾಕು ನೀಡುತ್ತಿದ್ದಂತೆ ಅಪ್ರಾಪ್ತ ಯುವತಿ ಜೋರಾಗಿ ಕಿರುಚಿಕೊಂಡಿದ್ದಾಳೆ. ನೆರೆದಿದ್ದ ಜನ ಆಕೆಯನ್ನು ರಕ್ಷಣೆ ಮಾಡಿ ಪ್ರದೀಪನನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ.

ಪಟ್ಟಣ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀಕಾಂತ್ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳು ಪ್ರದೀಪನ ಪರಿಸ್ಥಿತಿ ಗಮನಿಸಿ ನಂತರ ಠಾಣೆಗೆ ಅಪ್ರಾಪ್ತ ಯುವತಿಯರರಿಬ್ಬರನ್ನು ಕರೆಸಿ ಪ್ರೇಮ ಪ್ರಸಂಗದ ಬಗ್ಗೆ ಹಾಗೆ ಇಂದು ನಡೆದ ಘಟನೆ ಬಗ್ಗೆ ಮಾಹಿತಿ ಪಡೆದು ಪ್ರಕರಣ ದಾಖಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಗಣೇಶ ಪ್ರತಿಷ್ಠಾಪನೆಗೆ ಏಕಗವಾಕ್ಷಿ ಸಮಿತಿ ಅನುಮತಿ ಕಡ್ಡಾಯ : ಜಿಲ್ಲಾಧಿಕಾರಿ

ಚಾಮರಾಜನಗರ, ಆ.16–ಗೌರಿ ಗಣೇಶ ಹಬ್ಬದ ಸಂದರ್ಭದಲ್ಲಿ ಗಣೇಶ ಪ್ರತಿಷ್ಠಾಪನೆ, ಕಾರ್ಯಕ್ರಮಗಳ ಆಯೋಜನೆಗೆ ಪರವಾನಗಿ ನೀಡಲು ತಾಲೂಕು ಮಟ್ಟದಲ್ಲಿ ಏಕಗವಾಕ್ಷಿ ಸಮಿತಿಯನ್ನು ರಚಿಸಲಾಗಿದ್ದು ಈ ಸಮಿತಿಯಿಂದ ಕಡ್ಡಾಯವಾಗಿ ಅನುಮತಿ ಪಡೆಯುವಂತೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ತಿಳಿಸಿದ್ದಾರೆ.



ಗಣೇಶ ಮೂರ್ತಿಯನ್ನು ಪ್ರತಿಷ್ಠಾಪನೆ ಆಯೋಜಿಸುವವರಿಗೆ ಪರವಾನಿಗೆ ನೀಡುವುದು ವಿವಿಧ ಇಲಾಖೆಗಳ ಮುಖ್ಯ ಜವಾಬ್ದಾರಿಯಾಗಿದೆ. ಈ ಕಾರ್ಯವನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ತಾಲೂಕು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕ್ರಮ ವಹಿಸಿ ಗಣೇಶ ಪ್ರತಿಷ್ಠಾಪನೆ ಮಾಡುವ ಸ್ಥಳ, ಪೆಂಡಾಲ್, ವಿದ್ಯುತ್ ಸಂಪರ್ಕ ಮುಂತಾದ ಕಾರ್ಯ ಕ್ರಮ ನಡೆಸುವ ಪರವಾನಗಿಗಳನ್ನು ನೀಡಲು ಕಂದಾಯ, ಲೋಕೋಪ ಯೋಗಿ, ಇಂಧನ, ಅಗ್ನಿಶಾಮಕ ಮತ್ತು ಪೋಲಿಸ್ ಇಲಾಖೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಸಂಯೋಜಿತವಾಗಿ ಕಾರ್ಯನಿರ್ವಹಿಸಿ ವಿಗ್ರಹ ಸ್ಥಾಪನೆಗೆ ಅಗತ್ಯವಿರುವ ಪರವಾನಗಿಯನ್ನು ಏಕಗ ವಾಕ್ಷಿ ಅಡಿಯಲ್ಲಿ ನೀಡಲು ತಾಲ್ಲೂಕು ಮಟ್ಟದಲ್ಲಿ ವಿವಿಧ ಅಧಿಕಾರಿಗಳನ್ನೊಳ ಗೊಂಡ ಏಕಗವಾಕ್ಷಿ ಸಮಿತಿಯನ್ನು ರಚಿಸಲಾಗಿದೆ ಎಂದರು.

ತಹಶೀಲ್ದಾರ್ ಸಮಿತಿಯ ಅಧ್ಯಕ್ಷರಾಗಿದ್ದು, ಸಂಬಂಧಪಟ್ಟ ನಗರಸಭೆ ಪೌರಾಯುಕ್ತರು, ಪುರಸಭೆ, ಪಟ್ಟಣ ಪಂಚಾಯಿತಿ, ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ತಾಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು, ಪೊಲೀಸ್ ವೃತ್ತ ನಿರೀಕ್ಷಕರು, ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಚೆಸ್ಕಾಂನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ತಾಲೂಕು ಅಗ್ನಿಶಾಮಕ ಠಾಣಾಧಿಕಾರಿಗಳು ಸಮಿತಿಯ ಸದಸ್ಯರಾಗಿದ್ದಾರೆ. ಗಣಪತಿ ಪ್ರತಿಷ್ಠಾಪನೆ, ಆಯೋಜಕರು ಆಯಾ ತಾಲ್ಲೂಕು ವ್ಯಾಪ್ತಿಯ ತಾಲೂಕು ಕಚೇರಿ ಅಥವಾ ಪೊಲೀಸ್ ಠಾಣೆಯಲ್ಲಿ ನಿಗದಿತ ನಮೂನೆಯನ್ನು ಪಡೆದು ಸದರಿ ಸಮಿತಿಯಿಂದ ಅನುಮತಿ ಪಡೆಯಬೇಕು.

ಹೆಚ್ಚಿನ ಮಾಹಿತಿಗಾಗಿ ಚಾಮರಾಜನಗರ ತಾಲೂಕು ದೂ.ಸಂ 08226–200254 ಗುಂಡ್ಲುಪೇಟೆ ತಾಲೂಕು ದೂ.ಸಂ.08229–222225 ಯಳಂದೂರು ತಾಲೂಕು ದೂ.ಸಂ.08226–240029, ಕೊಳ್ಳೇಗಾಲ ತಾಲೂಕು ದೂ.ಸಂ 08224–252329, ಹನೂರು ತಾಲೂಕು ದೂ.ಸಂ.08224–268032, ಸಂಪರ್ಕಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಂ.ಸಿ.ಬಸಪ್ಪ ಇಂದಿನ ಯುವ ರಾಜಕಾರಣಿಗಳಿಗೆ ಮಾದರಿ

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಮತ



ಮಾಜಿ ಶಾಸಕ ಎಂ.ಸಿ.ಬಸಪ್ಪನವರ ಜನ್ಮ ಶತಮಾನೋತ್ಸವ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ಚಾಮರಾಜನಗರ, ಆ.16–ನೇರ ನಡೆ, ನುಡಿ, ನಿಷ್ಠುರವಾದಿಯಾಗಿ ರಾಜಕಾರಣ ಮಾಡಿದ ಮಾಜಿ ಶಾಸಕ ದಿ.ಎಂ.ಸಿ. ಬಸಪ್ಪ ಧೀಮಂತ ವ್ಯಕ್ತಿತ್ವವುಳ್ಳವರಾಗಿ ಇಂದಿನ ಯುವ ರಾಜಕಾರಣಿಗಳಿಗೆ ಮಾದರಿಯಾಗಿದ್ದಾರೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ನಗರದ ಡಾ.ರಾಜ್‌ಕುಮಾರ್ ಜಿಲ್ಲಾ ಕಲಾಮಂದಿರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಹಾಗೂ ಕದಳಿ ಮಹಿಳಾ ವೇದಿಕೆಯಿಂದ ನಡೆದ ಎಂ.ಸಿ.ಬಸಪ್ಪನವರ ಜನ್ಮ ಶತಮಾನೋತ್ಸವ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ, ಕೃತಿ ಬಿಡುಗಡೆಗೊಳಿಸಿ ಮಾತನಾಡಿ, ರಾಜ್ಯದ ವಿವಿಧೆಡೆ ಇಂದಿಗೂ ಎಂ.ಸಿ. ಬಸಪ್ಪ ಅವರ ಅಭಿಮಾನಿಗಳು ಬಹಳಷ್ಟು ಮಂದಿ ಇದ್ದಾರೆ. ಅವರ ಹೆಸರಿನ ಬಲದಲ್ಲಿಯೇ ಹಲವು ಸೇವಾ ಕಾರ್ಯಗಳನ್ನು ಮಾಡುತ್ತಿದ್ದಾರೆ. ಇಂಥ ಮೇರು ವ್ಯಕ್ತಿತ್ವವುಳ್ಳ ಎಂ.ಸಿ. ಬಸಪ್ಪ ಅವರ ನೂರನೇ ಜನ್ಮ ಶತಮಾನೋತ್ಸವನ್ನು ಆಚರಣೆ ಮಾಡುತ್ತಿದ್ದೇವೆ ಎಂದರೆ ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ ಎಂದರು.

ಒಮ್ಮೆ ಚಿಕ್ಕಹೊಳೆ ಜಲಾಶಯ ನಿರ್ಮಾಣ ಸಂದರ್ಭದಲ್ಲಿ ಗುತ್ತಿಗೆದಾರರಿಗೆ ಹಣ ಬಿಡುಗಡೆಯಾಗದೆ ತೊಂದರೆಯಾಗಿತ್ತು. ಆಗ ಶಾಸಕರಾಗಿದ್ದ ಬಸಪ್ಪ ಅವರು ಗುತ್ತಿಗೆದಾರರ ಬಾಕಿ ಹಣ ಬಿಡುಗಡೆಯಾಗುವಂತೆ ಮಾಡಿದ್ದರು. ಆ ಗುತ್ತಿಗೆದಾರ ಅವರ ಬಳಿಗೆ ಬಂದು ಹೊಸ ಕಾರು ಖರೀದಿ ಮಾಡಿ ಕೀ ಅನ್ನು ಅವರಿಗೆ ಕೊಡಲು ಮುಂದಾಗಿದ್ದಾನೆ. ಕಾರಿನ ಕೀ ಕೊಡುತ್ತಿದ್ದಂತೆ ಇದು ನನಗೆ ಏನಕ್ಕೆ ಎಂದು ಕೀಯನ್ನೇ ಕೋಪದಿಂದ ಗುತ್ತಿಗೆದಾರನ ಮುಖದ ಮೇಲೆ ಎಸೆದಿದ್ದರು. ಇಂಥ ನಿಷ್ಠಾವಂತ ಪ್ರಾಮಾಣಿಕ ರಾಜಕಾರಣಿ ಎಂ.ಸಿ. ಬಸಪ್ಪ ಅವರು ಯುವಪೀಳಿಗೆಗೆ ಮಾದರಿಯಾಗಬೇಕು. ಅವರ ಬಗ್ಗೆ ತಿಳಿದುಕೊಳ್ಳುವ ಅಧ್ಯಯನವಾಗಬೇಕು ಎಂದು ತಿಳಿಸಿದರು.

ಮಾಜಿ ಸಚಿವ ಹಾಗೂ ಸ್ಕೌಟ್ ಅಂಡ್ ಗೈಡ್ಸ್ ರಾಜ್ಯ ಆಯುಕ್ತ ಪಿ.ಜಿ.ಆರ್ ಸಿಂಧ್ಯಾ ಮಾತನಾಡಿ, ಎಂ.ಸಿ.ಬಸಪ್ಪ ಅವರ ರಾಜಕಾರಣ ಮತ್ತು ಅವರ ವ್ಯಕ್ತಿತ್ವದ ಕುರಿತು ಗುಣಗಾನ ಮಾಡಿದರು.

ಶರಣ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ.ಸಿ. ಸೋಮಶೇಖರ್ ಮಾತನಾಡಿ, ಬಸಪ್ಪ ಅವರು ರಾಜಕಾರಣ ಕ್ಷೇತ್ರವನ್ನು ಸೇವಾ ಕ್ಷೇತ್ರವನ್ನಾಗಿ ಮಾಡಿಕೊಂಡಿದ್ದು, ಸೋಲು– ಗೆಲುವನ್ನು ಲೆಕ್ಕಿಸದೆ ಸಮಾಜಕ್ಕೆ ಸಮರ್ಪಿಸಿಕೊಂಡಿದ್ದರು ಎಂದರು.

ಕಾರ್ಯಕ್ರಮದಲ್ಲಿ ಸಾಹಿತಿ ಕೆ ವೆಂಕಟರಾಜು, ಆಧ್ಯಾತ್ಮಿಕ ಚಿಂತಕ ಶಂಕರ ದೇವನೂರು, ಗಂಗಾಬಿಕೆ ಎಂ.ಸಿ.ಬಸಪ್ಪ ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ, ಶರಣ ಸಾಹಿತ್ಯ ಪರಿಷತ್‌ನ ಜಿಲ್ಲಾಧ್ಯಕ್ಷ ದುಗ್ಗಟ್ಟಿ ಮಲ್ಲಿಕಾರ್ಜುನಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಕೆ. ರವಿಕುಮಾರ್, ತಾಲೂಕು ಅಧ್ಯಕ್ಷ ಬಿ.ಎಸ್. ವಿನಯ್, ಎಂ.ಸಿ.ಬಸಪ್ಪ ಮಕ್ಕಳು ಹಾಗೂ ಕುಟುಂಬಸ್ಥರು, ಅಭಿಮಾನಿಗಳು ಇತರರಿದ್ದರು.

ಬೆಂಡರವಾಡಿಯಲ್ಲಿ ಇಂದು ಪರಮೇಶ್ವರ ಸಂಸ್ಕೃತಿ ಪುರಸ್ಕಾರ ಪ್ರಶಸ್ತಿ ಪ್ರದಾನ

ಗುಂಡ್ಲುಪೇಟೆ, ಆ.16 (ಸೋಮ್.ಜಿ)–ಜಿ.ಪರಮೇಶ್ವರ ಸಂಸ್ಕೃತಿ ಪುರಸ್ಕಾರ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಆ.17 ರಂದು ತಾಲೂಕಿನ ಬೆಂಡರ ವಾಡಿ ಗ್ರಾಮದಲ್ಲಿ ನಡೆಯಲಿದೆಯೆಂದು ಆಯೋಜಕ ಪ್ರೊ.ಮಹದೇವ್ ಭರಣಿ ತಿಳಿಸಿದ್ದಾರೆ.

ಡಾ.ಜಿ.ಪರಮೇಶ್ವರ್ ಅಭಿಮಾನಿ ಬಳಗ ಹಾಗೂ ಬೆಂಡರವಾಡಿ ಗ್ರಾಮಸ್ಥರು ಮತ್ತು ಬಾಳೆ ಎಲೆ ಮಾದಯ್ಯ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ವಿವಿಧ ಕಾರ್ಯಕ್ರಮಗಳು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಬೆಳಗ್ಗೆ 11 ಗಂಟೆಗೆ ಬೆಂಡರವಾಡಿ ಗ್ರಾಮದಲ್ಲಿ ನಿರ್ಮಾಣವಾಗಿರುವ ಶಿಕ್ಷಣ ಭೀಷ್ಮ ಎಚ್.ಎಂ.ಗಂಗಾಧರಯ್ಯ ಪ್ರತಿಮೆ ಅನಾವರಣ, ಮಹಿಳಾ ಗೃಹ ಕೈಗಾರಿಕಾ ಘಟಕ ನೂತನ ಕಟ್ಟಡ ಉದ್ಘಾಟನೆ; 1001 ಹೊಂಗೆ ಸಸಿಗಳನ್ನು ನೆಡುವುದರ ಮೂಲಕ ಸಾಲುಮರದ ರಸ್ತೆ ನಾಮಕರಣ ಕಾರ್ಯಕ್ರಮ; ಗ್ರಾಮದಲ್ಲಿನ ಶೂಲದ ಮಾರಮ್ಮ ದೇವಾ ಲಯ ಉದ್ಘಾಟನೆ; ಬಾಳೆಎಲೆ ಮಾದಯ್ಯ ಸೇವಾ ಟ್ರಸ್ಟ್ ಧ್ವನಿಸುರುಳಿ ಬಿಡುಗಡೆ; ಬಾಳೆ ಎಲೆ ಸಹಕಾರ ಸಂಘ ಉದ್ಘಾಟನೆ ಮಾಡಲಾಗುವುದು ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ, ಉದ್ಯಮ, ಸಾಧಕರಿಗೆ ಅಭಿನಂದನೆ ಹಾಗೂ ಶಿಕ್ಷಣ ಸಂಸ್ಕೃತಿ ಬೀಡು ಬೆಂಡರವಾಡಿ ಊರು ಜ್ಞಾನದ ಜೋಳಿಗೆ ಪುಸ್ತಕ ಬಿಡುಗಡೆ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ. ದಿವ್ಯ ಸಾನಿಧ್ಯವನ್ನು ಹನೂರಿನ ಜೇತವನದ ಮನೋರಖ್ಖಿತ ಬಂತೇಜಿ ವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಪುರಸಭಾ ಸದಸ್ಯ ಎಚ್.ಆರ್.ರಾಜ್‌ಗೋಪಾಲ್, ಕಾಳಿಂಗ ಸ್ವಾಮಿ ಸಿದ್ದಾರ್ಥ, ರಾಘವಪುರ ಗ್ರಾ.ಪಂ ಅಧ್ಯಕ್ಷ ಆರ್.ಡಿ.ಉಲ್ಲಾಸ್, ಬಾಲು, ರಾಮೇಗೌಡ ಬ್ರಹ್ಮಾನಂದ್, ಅಬ್ದುಲ್ ಮಾಲಿಕ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ನಾಳೆ ಮಹದೇಶ್ವರ ಬೆಟ್ಟದಲ್ಲಿ ಉಚಿತ ಸಾಮೂಹಿಕ ವಿವಾಹ ಮಹೋತ್ಸವ

ಚಾಮರಾಜನಗರ: ಜಿಲ್ಲೆಯ ಹನೂರು ತಾಲೂಕಿನ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ಉಚಿತ ಸಾಮೂಹಿಕ ವಿವಾಹ ಮಹೋತ್ಸವ ಕಾರ್ಯಕ್ರಮವನ್ನು ಆ.18ರ ಬೆಳಿಗ್ಗೆ 9.20 ಗಂಟೆಗೆ ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನದ ರಂಗಮಂದಿರ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.



ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸುವರು. ಶ್ರೀ ಸಾಲೂರು ಬೃಹನ್ಮಠದ ಪೀಠಾಧಿಪತಿ ಶ್ರೀ ಡಾ.ಶಾಂತಮಲ್ಲಿಕಾರ್ಜುನ ಸ್ವಾಮಿಗಳ ದಿವ್ಯ ಸಮ್ಮುಖದಲ್ಲಿ ಉಚಿತ ಸಾಮೂಹಿಕ ವಿವಾಹ ಮಹೋತ್ಸವ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸುವರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉಪಸ್ಥಿತಿ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ವಧುವಿಗೆ ಮಾಂಗಲ್ಯ ವಿತರಿಸುವರು. ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ವಧುವರರಿಗೆ ವಸ್ತ್ರ ವಿತರಣೆ ಮಾಡುವರು. ಸಮಾಜ ಕಲ್ಯಾಣ ಇಲಾಖೆಯ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು. ಶಾಸಕರಾದ ಎಂ.ಆರ್. ಮಂಜುನಾಥ್ ಅಧ್ಯಕ್ಷತೆ ವಹಿಸುವರು. ಸಂಸದ ಸುನೀಲ್ ಬೋಸ್ ನೆನಪಿನ ಕಾಣಿಕೆ ವಿತರಿಸುವರು. ಶಾಸಕರಾದ ಸಿ. ಪುಟ್ಟರಂಗ ಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್ ಪ್ರಸಾದ್ ಪ್ರಮಾಣ ಪತ್ರ ವಿತರಣೆ ಮಾಡುವರು.

ಶಾಸಕರಾದ ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕೆ.ವಿವೇಕಾನಂದ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾ ಧ್ಯಕ್ಷೆ ಡಾ. ಪುಷ್ಪ ಅಮರನಾಥ್, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ.ಮರಿ ಸ್ವಾಮಿ, ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ ಅಧ್ಯಕ್ಷ ಎಂ. ನಂಜುಂಡಸ್ವಾಮಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಹೆಚ್.ವಿ. ಚಂದ್ರು, ಮಹದೇಶ್ವರ ಬೆಟ್ಟದ ಗ್ರಾಪಂ ಅಧ್ಯಕ್ಷ ಅರ್ಚನ, ನಾಮ ನಿರ್ದೇಶಿತ ಸದಸ್ಯರಾದ ಗಂಗನ ತಿಮ್ಮಯ್ಯ, ಭಾಗ್ಯಮ್ಮ, ಬಿ. ಮಹದೇವಪ್ಪ, ಮರಿಸ್ವಾಮಿ, ಆರ್.ಎಸ್. ಕುಮಾರ ವಿಜಯ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ಸಿಸಿರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ರಾಮಸಮುದ್ರ ದೂಡ್ಡ ಬೀದಿ ಬಡಾವಣೆಯಲ್ಲಿ 50 ಲಕ್ಷ ರೂ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು.

ಚಾಮರಾಜನಗರ: ರಾಮಸಮುದ್ರ ಪರಿಶಿಷ್ಟ ಜಾತಿ ಬಡಾವಣೆಯ ದೂಡ್ಡ ಬೀದಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ 50 ಲಕ್ಷ ಬುದ್ದನಗರ, 50ಲಕ್ಷ ಸೋಮವಾರ ಪೇಟೆ 50ಲಕ್ಷ ಕರಿನಂಜನಪುರ 50ಲಕ್ಷ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗ ಶೆಟ್ಟಿ ಭೂಮಿಪೂಜೆ ನೆರವೇರಿಸಿದರು.

ಸಮಾಜ ಕಲ್ಯಾಣ ಇಲಾಖೆ ಯೋಜನಾಡಿಯಲ್ಲಿ ಪಟ್ಟಣಪ್ರದೇಶದಲ್ಲಿ ಈಗಾಗಲೇ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಮೂಲಕ ಸಾರ್ವಜನಿಕರಿಗೆ ಅನೂಕೂಲ ಮಾಡಿಕೊಡಲಾಗಿದೆ. ತಮ್ಮ ಕೇತ್ರವ್ಯಾಪ್ತಿಯಲ್ಲಿ ಜನತೆಯ ಆಶಯಕ್ಕೆ ಬದ್ದರಾಗಿ ರಸ್ತೆ ಚರಂಡಿ, ಸಮುದಾಯ ಭವನ ಸರಕಾರ ಮಂಜೂರು ಮಾಡುವ ಅನುದಾನ ಹಾಗೂ ಸೌಲಭ್ಯಗಳನ್ನು ಜನರಿಗೆ ಪ್ರಾಮಾಣಿಕವಾಗಿ ತಲುಪಿಸುವ ಕೆಲಸ ಮಾಡಲಾಗುತ್ತಿದೆ. ಕಾಮಗಾರಿ ನಿರ್ವಹಣೆ ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಗೆ ಒತ್ತು ನೀಡಬೇಕು ತಿಳಿಸಿದರು.

ನಗರಸಭಾ ಸದಸ್ಯರಾದ ಮನೋಜ್ ಪಾಟೇಲ್, ಆರ್‌ಎಂ ರಾಜಪ್ಪ ಸ್ವಾಮಿ, ರಾಮ ಸಮುದ್ರ ಯ.ಪಾಪ್ಪಣ್ಣ, ಆಂಜನಯ್ಯ, ಕೆ. ನಾಗರಾಜು, ಶಿವರಾಜು, ಚಂದ್ರು ಪ್ರಸನ್ನ, ಶ್ರೀಕಂಠಮೂರ್ತಿ, ರಾಜಪ್ಪ, ಎಚ್.ಎಚ್. ನಾಗರಾಜು, ಇಂಜೀನಿಯರ್ ಭೀಮ್ ಸಾಗರ್, ಯಜಮಾನರು ಮುಖಂಡರು ಬಡಾವಣೆಯ ನಿವಾಸಿಗಳು ಇದ್ದರು.

ನಿಮಗೆ ಹೈ ಬಿಪಿ, ಶುಗರ್ ಇದೆಯಾ

ಹಾಗಿದ್ದರೆ... ಪುಸ್ತಕ ಓದಿ...!!



ವಿಶ್ವದಲ್ಲಿ ಕಾಲದಿಂದ ಕಾಲಕ್ಕೆ ಹೊಸ ಹೊಸ ಸಂಶೋಧನೆಗಳು ನಡೆಯುತ್ತಿರುತ್ತವೆ. ಅಂತಹ ಒಂದು ಸಂಶೋಧನೆ ಇತ್ತೀಚೆಗೆ ಭಾರಿ ಚರ್ಚೆಗೆ ಒಳಗಾಗುತ್ತಿದೆ. ಅದು, ಪುಸ್ತಕಗಳನ್ನು ಓದುವುದರಿಂದ ಬಿಪಿ, ಶುಗರ್ ಬರಲ್ಲ.

ಪುಸ್ತಕಗಳನ್ನು ಓದುವುದರಿಂದ ಜ್ಞಾನ ವೃದ್ಧಿಯಾಗುತ್ತದೆ. ಕಲ್ಪನಾ ಶಕ್ತಿ ಹೆಚ್ಚುತ್ತದೆ. ಪದ ಸಂಪತ್ತು ಬೆಳೆಯುತ್ತದೆ. ಏಕಾಗ್ರತೆ ಸುಧಾರಿಸುತ್ತದೆ. ಒತ್ತಡವನ್ನು ಕಡಿಮೆ ಮಾಡಿ ಮಾನಸಿಕ ಆರೋಗ್ಯವನ್ನು ಉತ್ತಮಗೊಳಿಸಲು ಸಹಾಯ ಮಾಡುತ್ತದೆ. ಮಾನಸಿಕ ಒತ್ತಡ ಕಡಿಮೆಯಾದಾಗ ಆರೋಗ್ಯ ಸುಧಾರಿಸುತ್ತದೆ.

ಪುಸ್ತಕಗಳನ್ನು ಓದುವುದರಿಂದ ಮಾನಸಿಕ ಒತ್ತಡ ಕಡಿಮೆಯಾಗುತ್ತದೆ. ಇದು ಪರೋಕ್ಷವಾಗಿ ಬಿಪಿಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಏಕೆಂದರೆ ಮನುಷ್ಯ ಅನುಭವಿಸುವ ಒತ್ತಡವು ಬಿಪಿ ಹೆಚ್ಚಿಸುತ್ತದೆ. ಬಿಪಿ ಹೆಚ್ಚಾದಾಗ, ರಕ್ತದಲ್ಲಿನ ಶುಗರ್ ಮಟ್ಟ ಏರುತ್ತದೆ. ಏಕಾಂಗಿಯಾಗಿ ಪುಸ್ತಕಗಳನ್ನು ಓದುವುದರಿಂದ ಪುಸ್ತಕಗಳಲ್ಲಿನ ಸನ್ನಿವೇಶಗಳ ಹಾಸ್ಯ, ವಿನೋದ, ಪ್ರಹಸನ, ಪಾತ್ರಧಾರಿಗಳ ನಡತೆಗಳು, ಓದುಗರ ಮನಸ್ಸಿನ ಮೇಲೆ ನೇರವಾಗಿ ಪರಿಣಾಮ ಬೀರುವುದರಿಂದ ಮೆದುಳು ಚುರುಕುಗೊಳ್ಳುತ್ತದೆ. ಹೃದಯ ಅರಳುತ್ತದೆ, ಆಗ ಮನಸ್ಸಿಗೆ ನೆಮ್ಮದಿ ಸಿಗುತ್ತದೆ.

ಪುಸ್ತಕಗಳನ್ನು ಓದುವುದರಿಂದ ಜ್ಞಾನ ವೃದ್ಧಿಸುವುದು. ಭಾಷಾ ಕೌಶಲ ಸುಧಾರಿಸುವುದು. ಸೃಜನಶೀಲತೆ ಹೆಚ್ಚುವುದು. ಒತ್ತಡ ಕಡಿಮೆಯಾಗುವುದು. ಪ್ರತಿಯೊಂದು ಪುಸ್ತಕವು ಹೊಸ, ಹೊಸ, ವಿಷಯಗಳನ್ನು ಕಲಿಸುತ್ತದೆ. ಇದರಿಂದ ಜ್ಞಾನ ಹೆಚ್ಚುತ್ತದೆ. ವಿವಿಧ ಪುಸ್ತಕಗಳನ್ನು ಓದುವುದರಿಂದ ಶಬ್ದಕೋಶ ಮತ್ತು ವ್ಯಾಕರಣ ಸುಧಾರಿಸಿ, ಭಾಷಾ ಕೌಶಲ ಹೆಚ್ಚುತ್ತದೆ. ಪುಸ್ತಕಗಳನ್ನು ಓದುವುದರಿಂದ ಹೊಸ ಹೊಸ ಆಲೋಚನೆಗಳು ಮತ್ತು ಸೃಜನಶೀಲತೆ ಮತ್ತು ಕಲ್ಪನಾ ಶಕ್ತಿ ವೃದ್ಧಿಯಾಗುತ್ತದೆ. ಪುಸ್ತಕಗಳನ್ನು ಓದುವುದರಿಂದ ಒತ್ತಡ ಕಡಿಮೆಯಾಗುತ್ತದೆ. ಮತ್ತು ಮನಸ್ಸಿಗೆ ಶಾಂತಿ ಸಿಗುತ್ತದೆ. ಒತ್ತಡ ಕಡಿಮೆಯಾಗಿ ಮನಸ್ಸಿಗೆ ಶಾಂತಿ ಸಿಗುವುದರಿಂದ ಮೆದುಳು ಚುರುಕುಗೊಂಡು ಸಂತೋಷ, ನೆಮ್ಮದಿ, ನಲಿವು, ಉಂಟಾಗುತ್ತದೆ ಸಂತೋಷ ಉಂಟಾಗುವುದರಿಂದ ಮಾನಸಿಕ ಆರೋಗ್ಯ ಸುಧಾರಿಸಿ ಬಿಪಿ, ಶುಗರ್ ನಾರ್ಮಲ್ ಸ್ಥಿತಿಗೆ ಬಂದು ದೈಹಿಕ ಸಾಮರ್ಥ್ಯ ಹೆಚ್ಚಾಗಿ ದೈಹಿಕ ಆರೋಗ್ಯ ಉಂಟಾಗುತ್ತದೆ.

ಪುಸ್ತಕಗಳನ್ನ ಓದುವುದರಿಂದ ಏಕಾಗ್ರತೆ ಮತ್ತು ಸ್ಮರಣ ಶಕ್ತಿ ಹೆಚ್ಚುತ್ತದೆ. ಇದರಿಂದ ನೆನಪುಗಳು ದೈಹಿಕ ಆರೋಗ್ಯವನ್ನು ಸುಧಾರಿಸುವಂತೆ ಮಾಡುತ್ತವೆ. ಜೊತೆಗೆ ಬರವಣಿಗೆಯ ಸಾಮರ್ಥ್ಯವು ಸುಧಾರಿಸುತ್ತದೆ. ಹೊಸ ವಿಷಯಗಳನ್ನು ಕಲಿಯುವುದರಿಂದ ಆತ್ಮವಿಶ್ವಾಸ ಹೊಮ್ಮುತ್ತದೆ. 'ಸಾಸಿವೆಯಷ್ಟು ಆತ್ಮವಿಶ್ವಾಸವಿದ್ದರೆ ಸಾಗರದಷ್ಟು ಸಾಧನೆ ಮಾಡಬಹುದು' ಮಾತಿನಂತೆ ಮನುಷ್ಯನಲ್ಲಿ ಆತ್ಮವಿಶ್ವಾಸ ಹೆಚ್ಚಾದಾಗ ಮಾನಸಿಕ ಸ್ಥಿತಿಯು ಶಕ್ತಿಯುತವಾಗಿ, ನನಗೆ ಯಾವುದೇ ಕಾಯಿಲೆ ಇಲ್ಲ, ನಾನು ಆರೋಗ್ಯವಾಗಿದ್ದೇನೆ ಎಂಬ ಆತ್ಮವಿಶ್ವಾಸ ಬೆಳೆಸಿಕೊಂಡಾಗ, ಮೆದುಳು ಚುರುಕಾಗಿ ಹೃದಯದಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಾಗಿ, ರೋಗನಿರೋಧಕ ಹಾರ್ಮೋನ್‌ಗಳು ಉತ್ಪತ್ತಿಯಾಗಿ ದೇಹವನ್ನು ಸುಸ್ಥಿರಗೊಳಿಸಿ, ಬಿಪಿ, ಶುಗರ್, ಕ್ಯಾನ್ಸರ್‌ನಂತಹ ರೋಗಗಳು ದೂರವಾಗಲು ಕಾರಣವಾಗುತ್ತದೆ ಎಂಬ ವಿಷಯಗಳು ಅಧ್ಯಯನಗಳಿಂದ ತಿಳಿದುಬಂದಿದೆ.

ಪುಸ್ತಕಗಳನ್ನು ಓದುವುದರಿಂದ ಪುಸ್ತಕದಲ್ಲಿ ಬರುವ ಪಾತ್ರಗಳೊಂದಿಗೆ ತಾದಾತ್ಮ್ಯ ಹೊಂದಿ ಭಾವನೆಗಳನ್ನು ಅರ್ಥಮಾಡಿಕೊಂಡಾಗ ದೈಹಿಕ ಮತ್ತು ಮಾನಸಿಕ ಆರೋಗ್ಯ ಸುಧಾರಿಸುತ್ತದೆ. ಪುಸ್ತಕಗಳು ಜ್ಞಾನ ಮತ್ತು ಸ್ಫೂರ್ತಿಯ ಕಿಟಕಿಗಳಾಗಿ ಕಾರ್ಯನಿರ್ವಹಿಸುವುದರಿಂದ ಅಮೂಲ್ಯವಾದ ಒಳನೋಟಗಳನ್ನು ಒದಗಿಸುತ್ತವೆ, ಸೃಜನಶೀಲತೆಯನ್ನು ಬೆಳೆಸುತ್ತವೆ. ಮತ್ತು ದುಃಖ, ಅನ್ಯಾಯ, ಮೋಸ, ವಂಚನೆ, ಅವಮಾನ, ಅಪಮಾನ, ಅನುಭವಿಸಿದ ದೇಹಕ್ಕೆ ಸಾಂತ್ವನ ನೀಡುತ್ತವೆ. ಹೊಸ ಹೊಸ ಆಲೋಚನೆಗಳಿಗೆ ನಮ್ಮನ್ನು ಒಡ್ಡಿಕೊಳ್ಳಲು ಹಾಗೂ ಜೀವನದ ಸವಾಲುಗಳನ್ನು ಎದುರಿಸಲು ನಮಗೆ ಸಹಾಯ ಮಾಡಿ ನಮ್ಮ ಜೀವನಮಟ್ಟವನ್ನು ಶ್ರೀಮಂತಗೊಳಿಸುತ್ತವೆ. ಅಲ್ಲದೆ ಅಪಾರ ಜ್ಞಾನ ಭಂಡಾರವನ್ನು ಒದಗಿಸುತ್ತವೆ. ವಿವಿಧ ವಿಷಯಗಳು ಮತ್ತು ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ. ಓದುವ ಮತ್ತು ಬರೆಯುವ ಕೌಶಲಗಳು ಸುಧಾರಿಸಿ ವಿಶ್ಲೇಷಣಾತ್ಮಕ ಚಿಂತನೆಗಳು ಒದಗಿಸುವುದರಿಂದ ಮನುಷ್ಯನ ಋಣಾತ್ಮಕ ಆಲೋಚನೆಗಳು ದೂರವಾಗಿ ಧನಾತ್ಮಕ ಆಲೋಚನೆಗಳು ಒಡಮೂಡಿ ದೈಹಿಕ ಮತ್ತು ಮಾನಸಿಕ ಶಕ್ತಿ ರೂಪಗೊಂಡು ಬಿಪಿ, ಶುಗರ್‌ನಂತಹ ಕಾಯಿಲೆಗಳು ದೂರವಾಗಲು ಹಾಗೂ ಮನುಷ್ಯ ಆರೋಗ್ಯವಾಗಿ ಜೀವಿಸಲು ಸಹಾಯವಾಗುತ್ತದೆ.

ಪುಸ್ತಕಗಳನ್ನು ಓದುವುದರಿಂದ ಮನುಷ್ಯನು, ಹೊಸ ವಿಚಾರಗಳು, ಸಂಸ್ಕೃತಿಗಳು ಮತ್ತು ದೃಷ್ಟಿಕೋನಗಳಿಗೆ ತೆರೆದುಕೊಳ್ಳುತ್ತಾನೆ. ವಿಶ್ವದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಬೆಳೆಸಿಕೊಳ್ಳುತ್ತಾನೆ. ಸಾಹಿತ್ಯದ ಪುಸ್ತಕಗಳನ್ನು ಓದುವುದರಿಂದ ಇತಿಹಾಸ, ಕಲೆ, ವಿಜ್ಞಾನ, ನೃತ್ಯಕಲೆ, ಸಂಗೀತ, ಮನಶಾಸ್ತ್ರ, ಸಾಹಿತ್ಯ ಮುಂತಾದ ಮಾನವ ಅನುಭವಗಳ ಬಗ್ಗೆ ಕಲಿಯುತ್ತಾನೆ. ಇದು ಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹಾಯ ಮಾಡುತ್ತವೆ. ಇಂದಿನ ವೇಗದ ಮತ್ತು ಸ್ಪರ್ಧಾ ಜಗತ್ತಿನಲ್ಲಿ ಅತ್ಯಗತ್ಯವಾದ ಮತ್ತು ತಾರ್ಕಿಕವಾಗಿ ಹಾಗೂ ವಿಮರ್ಶಾತ್ಮಕವಾಗಿ ಯೋಚಿಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಅಲ್ಲದೇ ನಿಜ ಜೀವನದ ಪ್ರಯೋಜನಕಾರಿಯಾದ ಕೌಶಲಗಳಾದ ನಿರೂಪಣೆ, ವಿಮರ್ಶನಾಚಿಂತನೆ, ಪ್ರಗತಿಪರ ಆಲೋಚನೆ, ವೈಚಾರಿಕಪರ ವಿಶ್ಲೇಷಣೆ, ಧನಾತ್ಮಕವಾದ ತಾರ್ಕಿಕ ಚಿಂತನೆಗಳನ್ನು ತಮ್ಮಲ್ಲಿ ಅಳವಡಿಸಿಕೊಳ್ಳಲು ಸಹಾಯ ಮಾಡುತ್ತವೆ.

ಒತ್ತಡಗಳನ್ನು ಕಡಿಮೆ ಮಾಡುವುದು, ಏಕಾಗ್ರತೆಯನ್ನು ಒದಗಿಸುವುದು, ಭಾವನಾತ್ಮಕ ಯೋಗಕ್ಷೇಮವನ್ನು ಹೆಚ್ಚಿಸುವುದು, ಮೆದುಳನ್ನು ಚುರುಕುಗೊಳಿಸುವುದು, ಸಹಾನುಭೂತಿಯನ್ನು ಹೆಚ್ಚಿಸುವುದು, ಅರಿವಿನ ಸಾಮರ್ಥ್ಯವನ್ನು ಬಲಪಡಿಸುವುದು ಮುಂತಾದ ಮಾನಸಿಕ ಪ್ರಯೋಜನಗಳನ್ನು ಪುಸ್ತಕಗಳು ನೀಡುವುದರಿಂದ ಮನುಷ್ಯ ಸಂತೋಷ, ನಲಿವಿನಿಂದ ಬದುಕುತ್ತಾನೆ.

ರಾಮಾಯಣ, ಮಹಾಭಾರತ, ಕುರಾನ್, ಬೈಬಲ್, ಭಗವದ್ಗೀತೆ, ಆಗಮಗಳು, ತ್ರಿಪಿಟಕಗಳು, ವಚನಗಳು, ಉಪನಿಷತ್ತು ತ್ರಿಪದಿಗಳು, ಕೀರ್ತನೆಗಳು ಮುಂತಾದ ಮಹಾಗ್ರಂಥಗಳನ್ನು ಓದುವುದರಿಂದ ಮಾನಸಿಕ ಒತ್ತಡ ಕಡಿಮೆಯಾಗುತ್ತದೆ ಎಂದು ನಂಬಲಾಗಿದೆ. ಇಂತಹ ಮಹಾಕಾವ್ಯಗಳಲ್ಲಿ ಬರುವ ಪಾತ್ರಗಳ ಜೀವನದ ವಿವಿಧ ಮಜಲುಗಳು, ಸಂಬಂಧಗಳು, ನೈತಿಕತೆ ಮತ್ತು ಧರ್ಮದ ಬಗ್ಗೆ ಆಳವಾದ ಒಳನೋಟಗಳು, ಹಾಗೂ ಇವುಗಳನ್ನು ಓದುವ ವ್ಯಕ್ತಿಗಳ ಭಾವನಾತ್ಮಕ ಬುದ್ಧಿವಂತಿಕೆ, ಸಂಘರ್ಷ, ನಿರ್ವಹಣೆ, ಸಹಾನುಭೂತಿ ಮತ್ತು ಮಾನಸಿಕ ಸ್ಥೈರ್ಯವನ್ನು, ಬೆಳೆಸಿಕೊಳ್ಳುವುದರಿಂದ ದೈಹಿಕ ರೋಗಗಳು ದೂರವಾಗಿ ಆರೋಗ್ಯಕರ ಜೀವನ ರೂಪುಗೊಳ್ಳುತ್ತದೆ.


ಪುಸ್ತಕಗಳಲ್ಲಿ ಬರುವ ಪಾತ್ರಗಳು, ಅನುಭವಗಳು ಮತ್ತು ಅವುಗಳಿಂದ ಸಿಗುವ ಪಾಠಗಳು ಆಧುನಿಕ ಜೀವನದ ಸವಾಲುಗಳನ್ನು ಎದುರಿಸಲು ಸಹಾಯ ಮಾಡುತ್ತವೆ ಎಂದು ನಂಬಲಾಗಿದೆ.

ಡಾ.ಡೋನಾಲ್ಡ್ ನ್ಯಾಶ್ ಎಂಬ ಮನೋವಿಜ್ಞಾನಿಯು, ಆತಂಕ, ಖಿನ್ನತೆ, ಆಘಾತ ಮತ್ತು ನರ ದೌರ್ಬಲ್ಯ, ಮುಂತಾದ ಸಮಸ್ಯೆಗಳಂತಹ ಮಾನಸಿಕ ಕಾಯಿಲೆಗಳಿಂದ ಬಳಲುತ್ತಿರುವ ಮಕ್ಕಳು, ಹದಿಹರೆಯದವರು, ವಯಸ್ಕರು ಹಾಗೂ ಹಿರಿಯ ನಾಗರಿಕರು ಗ್ರಂಥಗಳನ್ನು ಓದುವುದರಿಂದ ಅದರಲ್ಲಿ ಬರುವ ಪಾತ್ರಗಳು, ಪರಿಸರ, ಪ್ರಾಣಿ, ಪಕ್ಷಿಗಳು, ಅತಿಮಾನುಷ ವ್ಯಕ್ತಿಗಳ ಶಕ್ತಿ ಪ್ರದರ್ಶನಗಳು, ಮನಸ್ಸಿನ ಮೇಲೆ ಧನಾತ್ಮಕ ಪರಿಣಾಮ ಬೀರುವುದರಿಂದ ಮನಸ್ಸು ಆಹ್ಲಾದಗೊಂಡು ಮಾನಸಿಕ ಶಕ್ತಿ ಹೆಚ್ಚುತ್ತದೆ. ಇದರಿಂದ ಅವನಲ್ಲಿಯ ಬಿಪಿ, ಶುಗರ್‌ನಂತಹ ರೋಗಗಳು ದೂರವಾಗಿ ಆರೋಗ್ಯ ಪೂರಕ ಜೀವನ ಮಟ್ಟ ಸೃಷ್ಟಿಯಾಗುತ್ತದೆ ಎಂದು ಹೇಳಿರುವುದು ಪುಸ್ತಕಗಳನ್ನು ಓದುವುದರ ಮಹತ್ವ ತಿಳಿಯುತ್ತದೆ.

ಡಾ.ಡಾನ್ ಕೊಲ್ಡರ್ ಎಂಬ ಮನೋವಿಜ್ಞಾನಿಯು, ಆತಂಕ, ಆಘಾತ, ಖಿನ್ನತೆ ಮತ್ತು ಸಂಬಂಧದ ಸಂಘರ್ಷ ಮುಂತಾದ ಮಾನಸಿಕ ಕಾಯಿಲೆಗೆ ಒಳಗಾದ ವ್ಯಕ್ತಿಗಳಿಗೆ ಪುಸ್ತಕಗಳನ್ನ ಓದುವ ಚಿಕಿತ್ಸೆಯನ್ನು ನೀಡುವುದರ ಮೂಲಕ ಅವರ ಮಾನಸಿಕ ಕಾಯಿಲೆಗಳನ್ನು ದೂರ ಮಾಡಿದರಂತೆ. ಮಾನಸಿಕ ಕಾಯಿಲೆ ದೂರವಾದಾಗ ತಾನೇ ತಾನಾಗಿ ಬಿಪಿ, ಶುಗರ್‌ಗಳಂತಹ ದೈಹಿಕ ಕಾಯಿಲೆಗಳು ದೂರವಾಗುತ್ತವೆ.

ಡಾ.ಡಾನ್ ಡಬ್ಲ್ಯೂ ಹೂಪರ್ ಎಂಬ ಮನೋವಿಜ್ಞಾನಿಯು, ಬರೆದಿರುವ 'ಪವರ್ ಥಿಂಕಿಂಗ್' ಗ್ರಂಥದಲ್ಲಿ ಮಾನಸಿಕ ರೋಗಿಗಳಿಗೆ ಪುಸ್ತಕ ಓದುವ ಚಿಕಿತ್ಸೆ ನೀಡಿದರೆ ಅವರಿಗೆ ಯೋಚನಾ ಶಕ್ತಿ ಬರುತ್ತದೆ. ಯೋಚನಾ ಶಕ್ತಿಯು, ಮಾನಸಿಕ ಶಕ್ತಿ ಮತ್ತು ದೈಹಿಕ ಶಕ್ತಿಯನ್ನು ಅಭಿವೃದ್ಧಿಪಡಿಸುತ್ತದೆ ಎಂದು ಹೇಳಿರುವ ಮಾತು ಪುಸ್ತಕ ಓದುವವರಿಗೆ ಮಾರ್ಗದರ್ಶಿಯಾಗಿದೆ ಎಂದು ಹೇಳಬಹುದು.

ಇವತ್ತಿನ ಸಂದರ್ಭದಲ್ಲಿ ದೇಶದ ನಾಲ್ಕು ಜನರಲ್ಲಿ ಒಬ್ಬರಿಗೆ ಶುಗರ್ ಮತ್ತು ಬಿಪಿ ಕಾಯಿಲೆ ಇದೆ ಎಂದು ನಂಬಲಾಗಿದೆ. ಬಿಪಿ ಮತ್ತು ಶುಗರ್‌ಗಳು ಒತ್ತಡಗಳಿಂದ ಬರುತ್ತವೆ ಹಾಗೂ ಇವುಗಳು ಮಾನಸಿಕ ಕಾಯಿಲೆಗಳು ಎಂದು ಗುರುತಿಸಲಾಗಿದೆ. ಬಹುಶಃ ಹಿಂದಿನ ಆಹಾರ ಪದ್ಧತಿಯಿಂದ ಒಂದು ಅಂದಾಜಿನ ಪ್ರಕಾರ 3600 ದೈಹಿಕ ಕಾಯಿಲೆಗಳು 7200 ಮಾನಸಿಕ ಕಾಯಿಲೆಗಳು ಚಾಲ್ತಿಯಲ್ಲಿವೆಯಂತೆ. ಅದರಲ್ಲಿ ಬಿಪಿ, ಶುಗರ್‌ಗಳು ಮುಖ್ಯ ಸ್ಥಾನದಲ್ಲಿವೆಯಂತೆ. ಅವುಗಳನ್ನು ದೂರ ಮಾಡಲು ಆಹಾರ ಪದ್ಧತಿ, ವ್ಯಾಯಾಮ, ಉಪವಾಸ, ಔಷಧ ಸೇವನೆಗಳು ಮುಂತಾದ ಚಿಕಿತ್ಸೆಗಳಿರುವಂತೆ ಪುಸ್ತಕ ಓದುವ ಚಿಕಿತ್ಸೆ ಒಂದು ಈ ಸಂದರ್ಭದಲ್ಲಿ ಚಾಲ್ತಿಗೆ ಬಂದಿದೆ. ಎಷ್ಟೋ ಜನ ಪುಸ್ತಕ ಓದುವುದರ ಮೂಲಕ ಬಿಪಿ, ಶುಗರ್ ರಿವರ್ಸ್ ಆಗಿದೆ ಎಂದು ಹೇಳುತ್ತಿದ್ದಾರೆ. ಪುಸ್ತಕ ಓದುವಾಗ ಅದರಲ್ಲಿರುವ ಸನ್ನಿವೇಶಗಳು ಮನಸ್ಸಿನ ಮೇಲೆ ಪರಿಣಾಮ ಬೀರುವುದು. ಹಾಸ್ಯ ಸನ್ನಿವೇಶಗಳು ಬಂದಾಗ ನಗುವುದು, ಸಂತೋಷಪಡುವುದು ಮುಂತಾದ ಚಟುವಟಿಕೆಗಳನ್ನು ಮಾಡುವುದರಿಂದ, ಸಂತೋಷದ ಸನ್ನಿವೇಶಗಳನ್ನು ಓದಿದಾಗ ಆತ್ಮವಿಶ್ವಾಸ ಬೆಳೆಸಿಕೊಳ್ಳುವುದು. ನನಗೆ ಯಾವುದೇ ಕಾಯಿಲೆ ಇಲ್ಲ, ನಾನು ಆರೋಗ್ಯವಾಗಿದ್ದೇನೆ ಎಂಬ ಮನಸ್ಸು ಬಂದಾಗ ದೇಹದಲ್ಲಿ ರೋಗನಿರೋಧಕ ಹಾರ್ಮೋನ್‌ಗಳು ಉತ್ಪತ್ತಿಯಾಗಿ ದೇಹವನ್ನು ಕ್ರಿಯಾಶೀಲಗೊಳಿಸುವುದರಿಂದ ಬಿಪಿ, ಶುಗರ್ ದೂರವಾಗಲು ಕಾರಣವಾಗುತ್ತದೆ



> ಪುಸ್ತಕಗಳನ್ನು ಓದುವುದರಿಂದ ಮನುಷ್ಯನು, ಹೊಸ ವಿಚಾರಗಳು ಸಂಸ್ಕೃತಿಗಳು ಮತ್ತು ದೃಷ್ಟಿಕೋನಗಳಿಗೆ ತೆರೆದುಕೊಳ್ಳುತ್ತಾನೆ. ವಿಶ್ವದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಬೆಳೆಸಿಕೊಳ್ಳುತ್ತಾನೆ. ಸಾಹಿತ್ಯದ ಪುಸ್ತಕಗಳನ್ನು ಓದುವುದರಿಂದ ಇತಿಹಾಸ, ಕಲೆ, ವಿಜ್ಞಾನ, ನೃತ್ಯಕಲೆ, ಸಂಗೀತ, ಮನಶಾಸ್ತ್ರ, ಸಾಹಿತ್ಯ ಮುಂತಾದ ಮಾನವ ಅನುಭವಗಳ ಬಗ್ಗೆ ಕಲಿಯುತ್ತಾನೆ. ಇದು ಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹಾಯ ಮಾಡುತ್ತವೆ. ಇಂದಿನ ವೇಗದ ಮತ್ತು ಸ್ಪರ್ಧಾ ಜಗತ್ತಿನಲ್ಲಿ ಅತ್ಯಗತ್ಯವಾದ ಮತ್ತು ತಾರ್ಕಿಕವಾಗಿ ಹಾಗೂ ವಿಮರ್ಶಾತ್ಮಕವಾಗಿ ಯೋಚಿಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಅಲ್ಲದೇ ನಿಜ ಜೀವನದ ಪ್ರಯೋಜನಕಾರಿಯಾದ ಕೌಶಲಗಳಾದ ನಿರೂಪಣೆ, ವಿಮರ್ಶನಾಚಿಂತನೆ, ಪ್ರಗತಿಪರ ಆಲೋಚನೆ, ವೈಚಾರಿಕಪರ ವಿಶ್ಲೇಷಣೆ, ಧನಾತ್ಮಕವಾದ ತಾರ್ಕಿಕ ಚಿಂತನೆಗಳನ್ನು ತಮ್ಮಲ್ಲಿ ಅಳವಡಿಸಿಕೊಳ್ಳಲು ಸಹಾಯ ಮಾಡುತ್ತವೆ.




–ಡಾ.ಆರ್.ನಾಗರಾಜು
ಸಾಹಿತಿಗಳು ಹಾಗೂ
ಕನ್ನಡ ಪ್ರಾಧ್ಯಾಪಕರು.
ಮೊ.: 94495 27544

ಮಕ್ಕಳ ಚಿತ್ರಕಥೆ

ನಿನಗೆ ಏನು ವರ ಬೇಕೋ ಕೇಳಿಕೋ...!

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಇಬ್ಬರು ಸ್ನೇಹಿತರಿದ್ದರು. ಒಬ್ಬರು ಇನ್ನೊಬ್ಬರನ್ನು ಮೀರಿಸುವಷ್ಟು ಪರಮ ಲೋಭಿಗಳು.




ಇಬ್ಬರೂ ಕಠಿಣ ತಪಸ್ಸಿಗೆಂದು ಕುಳಿತರು. ಅದೂ ಪೈಪೋಟಿಯಲ್ಲೇ ನಡೆಯಿತು.




ದೇವರಿಗೂ ಸಂತೋಷವಾಯಿತು. ಮೊದಲ ಸ್ನೇಹಿತನ ಮುಂದೆ ಪ್ರತ್ಯಕ್ಷನಾದ.



'ನಿನ್ನ ತಪಸ್ಸಿಗೆ ಮೆಚ್ಚಿದ್ದೇನೆ...ನಿನಗೆ ಏನು ವರ ಬೇಕೋ ಕೇಳಿಕೋ...! ಆದರೆ, ನೀನು ಏನನ್ನು ಕೇಳಿಕೊಳ್ಳುವೆಯೋ...ಅದರ ಎರಡರಷ್ಟನ್ನು ನಿನ್ನ ಆ ಸ್ನೇಹಿತ ಪಡೆಯುತ್ತಾನೆ...!' ಎಂದ.



ಈಗ ಅವನಿಗೆ ಸಮಸ್ಯೆ ಎದುರಾಯಿತು... 'ನಾನು ಏನನ್ನು ಕೇಳಿಕೊಂಡರೂ ಅವನಿಗೆ ಎರಡರಷ್ಟು.!...ಒಂದು ಕೋಟಿ ಕೇಳಿದರೆ ಅವನಿಗೆ ಎರಡು ಕೋಟಿ.! ನಾನು ನೂರು ಕೋಟಿ ಕೇಳಿದರೆ, ಅವನಿಗೆ ಇನ್ನೂರು...! ಅರೆ...! ಅವನು ನನಗಿಂತಲೂ ಹೆಚ್ಚಿಗೆ ಶ್ರೀಮಂತನಾಗಿಬಿಡುತ್ತಾನೆ...! ಎಂಬ ಸಂಕಟಕ್ಕೆ ಗುರಿಯಾದ.



ಯೋಚಿಸಿ...ಯೋಚಿಸಿ ಅವನು ದೇವರನ್ನು ವರ ಕೇಳಿಯೇಬಿಟ್ಟ... ದೇವ, ನನ್ನ ಒಂದು ಕಣ್ಣು ಹೋಗಲಿ...! ಅದಕ್ಕೆ 'ತಥಾಸ್ತು' ಎಂದ ದೇವರು. ಇನ್ನೊಬ್ಬ ಸ್ನೇಹಿತನ ಎರಡು ಕಣ್ಣುಗಳೂ ಹೋಗಿಬಿಟ್ಟವು.

ನೀತಿ :– ದುಷ್ಟರು ಯಾವಾಗಲೂ ಸ್ನೇಹಿತ, ಬಂಧು ಯಾರೇ ಆಗಲಿ ಅವರಿಗೆ ಕೇಡು ಬಯಸುತ್ತಾರೆ. ಅವರ ಸಹವಾಸ ಎಂದಿಗೂ ಅಪಾಯವೇ....!

ವಾರಭವಿಷ್ಯ

17.08.2025 ರಿಂದ 23.08.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಸಿಂಹ, ಚಂದ್ರ–ವೃಷಭ, ಮಿಥುನ, ಕಟಕ, ಸಿಂಹ ಕುಜ–ಕನ್ಯಾ ಬುಧ–ಕಟಕ, ಗುರು–ಮಿಥುನ, ಶುಕ್ರ–ಮಿಥುನ, ಕಟಕ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)

ವಾರದ ಆದಿಗೆ ನೆರೆಹೊರೆಯಲ್ಲಿ ಕಲಹಗಳು. ಪೂರ್ವ ತಯಾರಿ ಇಲ್ಲದ ಕೆಲಸಗಳು ಅರ್ಧಕ್ಕೆ ನಿಲ್ಲುವುದು. ಬಯಸಿದ್ದೆಲ್ಲಾ ಸಿಗುವುದಿಲ್ಲ. ಸಿಕ್ಕಿದ್ದನ್ನು ಬಳಸಿಕೊಳ್ಳಬೇಕು. ವಾರ ಮಧ್ಯೆ ಉಚ್ಚ ಚಂದ್ರನಿಂದ ದ್ರವ್ಯ ಲಾಭ. ಪ್ರಭಾವಿ ಸ್ತ್ರೀಯರೊಬ್ಬರ ಭೇಟಿ ಹಾಗೂ ಸೂಕ್ತ ಮಾರ್ಗದರ್ಶನ ಲಭಿಸುವುದು. ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ. ಪಶು ವ್ಯಾಪಾರದಿಂದ ಧನಲಾಭ.

–ಶ್ರೀ ಗಣಪತಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–4

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ಈ ವಾರ ಬೃಹಸ್ಪತಿಯ ಕೃಪೆಯಿಂದ ವ್ಯಾಪಾರ ವ್ಯವಹಾರಗಳು ಲಾಭದಾಯಕವಾಗಿ ನಡೆಯುವುದು. ನಿಂತು ಹೋಗಿದ್ದ ಕೆಲಸಗಳು ಮರು ಚಾಲನೆ ಹೊಂದುವುದು. ಪತಿ–ಪತ್ನಿಯರಲ್ಲಿ ಉಂಟಾಗಿದ್ದ ವಿರಸ ನಿವಾರಣೆ ಆಗುವುದು. ನೂತನ ಮನೆ ನಿರ್ಮಾಣಕ್ಕೆ ನಾಂದಿಯಾಗುವುದು. ಯೋಗ ಉಪಾಧ್ಯಾಯರಿಗೆ ಬೇಡಿಕೆ ಹೆಚ್ಚಾಗಲಿದೆ. ವಾರಾಂತ್ಯಕ್ಕೆ ಅಸಮರ್ಪಕ ಆರೋಗ್ಯ, ವೈದ್ಯರ ಭೇಟಿ.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ–7

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ವ್ಯಾಪಾರ ವ್ಯವಹಾರಗಳು ನೀವು ನಿರೀಕ್ಷಿಸಿದ ಮಟ್ಟಕ್ಕೆ ನಡೆಯದು. ನೆರೆಹೊರೆಯಲ್ಲಿ ವಿವಾದ, ಮನಸ್ತಾಪಗಳಿಂದ ಮನಃಶಾಂತಿಗೆ ಭಂಗ. ಕಾರ್ಮಿಕರಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯದು. ವಾರದ ಕಡೆಗೆ ಸ್ತ್ರೀಯರೊಬ್ಬರ ಸಹಾಯದಿಂದ ಮನೆಯ ಸಮಸ್ಯೆ ಪರಿಹಾರವಾಗುವುದು. ಸಮಯೋಚಿತ ಮಾತಿನಿಂದ ನಿಮ್ಮ ಕಾರ್ಯಸಾಧನೆ. ಜಲಾಶಯಗಳ ಹತ್ತಿರ ಜಾಗ್ರತರಾಗಿರಿ.

–ಶ್ರೀ ಕೃಷ್ಣಾಷ್ಟಕ ಪಠಿಸಿ. ಶುಭ ಸಂಖ್ಯೆ–4

ಕಟಕ (ಹೊ,ಹು,ಹೆ,ಡ,ಡಿ,ಡು)

ಈ ವಾರದಲ್ಲಿ ಬಹು ಸಮಯ ನಿಮ್ಮ ರಾಶ್ಯಾಧಿಪತಿ ಚಂದ್ರ ಶುಭ ಭಾವದಲ್ಲಿ ಸಂಚರಿಸುವ ಪರಿಣಾಮ ಹಲವು ಮೂಲಗಳಿಂದ ಧನ ಸಂಪಾದನೆ ಹಾಗೂ ಗೃಹೀಯ ಸುಖಗಳನ್ನು ಅನುಭವಿಸುವಿರಿ. ಉದ್ಯೋಗಾಕಾಂಕ್ಷಿಗಳಿಗೆ ಶುಭ ಸಮಾಚಾರ ಬರುವುದು. ಡೈರಿ ಉತ್ಪನ್ನ ಮಾರಾಟಗಳು ಭರಾಟೆಯಿಂದ ನಡೆಯುವುದು. ನೆರೆಹೊರೆಯಲ್ಲಿ ಬಾಂಧವ್ಯ ವೃದ್ಧಿಸುವುದು. ವಿದ್ಯುತ್ ಯಂತ್ರಗಳಿಂದ ತೊಂದರೆಯಾದೀತು.

ಶ್ರೀ ದುರ್ಗಾದೇವಿ ದರ್ಶನ. ಶುಭ ಸಂಖ್ಯೆ–6

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ನೂತನ ಜವಾಬ್ದಾರಿ ಸ್ವೀಕರಿಸಲು ಸಿದ್ಧರಾಗಿರಿ. ಗುರು ಪ್ರಭಾವದಿಂದ ಮನೆಯಲ್ಲಿ ಶುಭ ಕಾರ್ಯಗಳು ನಡೆದು, ಸಿಹಿ ಸುದ್ದಿಯೊಂದು ಬರುವುದು. ಇಂಜಿನಿಯರ್‌ಗಳಿಗೆ ಬೇಡಿಕೆ ಹೆಚ್ಚುವುದು. ಶಿಲ್ಪಾ ಕಲಾವಿದರಿಗೆ ಸರ್ಕಾರದಿಂದ ಗೌರವ. ಕರಿ ಉದ್ದು, ಕರಿ ಎಳ್ಳು ವ್ಯಾಪಾರದಲ್ಲಿ ತೇಜಿ ಕಂಡು ಬರುವುದು. ಕೃಷಿಗೆ ಸಂಬಂಧಪಟ್ಟ ಯಂತ್ರ ವ್ಯಾಪಾರಿಗಳಿಗೂ ದುಪ್ಪಟ್ಟು ವ್ಯಾಪಾರವಾಗುವುದು.

– ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ–1

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

ಈ ವಾರದಲ್ಲಿ ನೀವಂದುಕೊಂಡಿದ್ದೆ ಒಂದು, ಆಗುತ್ತಿರುವುದೇ ಮತ್ತೊಂದು. ತುಂಬಾ ಮುತುವರ್ಜಿ ವಹಿಸಿದ ಕಾರ್ಯಗಳು ಮಂದಗತಿಯಲ್ಲಿ ಸಾಗುವುದರಿಂದ ಮನಸ್ಸಿಗೆ ಬೇಸರ. ಪಾಲುದಾರಿಕೆ ವ್ಯವಹಾರಗಳಿಗೆ ಎಳ್ಳು ನೀರು ಬಿಡುವುದೇ ಲೇಸು. ತಾಮ್ರ ರಜತ ವ್ಯಾಪಾರಗಳು ತೇಜಿಯಿಂದ ನಡೆಯುವುದು. ಇತರರು ನೀಡುವ ಸಲಹೆಗಳನ್ನು ವಿಮರ್ಶೆ ಮಾಡಿ ಸ್ವೀಕರಿಸಿ. ವಾರಾಂತ್ಯಕ್ಕೆ ಮನೆ ದೇವರ ದರ್ಶನ.

–ಶ್ರೀ ವಿಷ್ಣು ಪೂಜೆ. ಶುಭ ಸಂಖ್ಯೆ–4

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ನೀವು ಕೈಗೊಳ್ಳುವ ಪ್ರತಿಯೊಂದು ಕೆಲಸದಲ್ಲೂ ಧೈರ್ಯದಿಂದ ಮುನ್ನಡೆಯುತ್ತೀರಿ. ಮನೆಯಲ್ಲಿ ಮುಂದೆ ನಡೆಯುವ ಶುಭ ಕಾರ್ಯಗಳಿಗೆ ನಾಂದಿ, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಲು ಗುರು ಪ್ರೇರಣೆ ಇದೆ. ಪುಸ್ತಕ ಪ್ರಕಾಶಕರಿಗೆ ಉತ್ತಮ ಆದಾಯವಾಗುವುದು. ಮಹತ್ವದ ಕೆಲಸಗಳಲ್ಲಿ ನಿಮ್ಮ ತೀರ್ಮಾನವೇ ಅಂತಿಮವಿರಲಿ. ಶೀತ ಜನಿತ ಕಾಯಿಲೆ ಕಾಡಬಹುದು.

–ಶ್ರೀ ಸಪ್ತಮಾತೃಕಾ ದರ್ಶನ. ಶುಭ ಸಂಖ್ಯೆ–8

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯ,ಯಿ,ಯು)

ವಾರದಾರಂಭಕ್ಕೆ ಚಂದ್ರಗ್ರಹ ದೃಷ್ಟಿಯ ಪರಿಣಾಮ ಶುಭ ಫಲಗಳನ್ನು ಅನುಭವಿಸುವಿರಿ. ನೂತನ ವಸ್ತ್ರಾಭರಣ ಖರೀದಿ. ನೆರೆಹೊರೆಯಲ್ಲಿ ಸೌಹಾರ್ದತೆಯಿಂದ ಇರಲು ಪ್ರಯತ್ನಿಸಿ. ಸ್ತ್ರೀಯರೊಬ್ಬರ ಸಹಾಯಹಸ್ತ ದೊರೆಯುವುದು. ಕೃಷಿ ಉಪಕರಣ ಮಾರಾಟಗಾರರಿಗೆ ಅಧಿಕ ವ್ಯಾಪಾರ ಹಾಗೂ ಧನಲಾಭ. ವಾರಾಂತ್ಯಕ್ಕೆ ದಾನ–ಧರ್ಮ, ಬುದ್ಧಿ, ಮಠ ಮಾನ್ಯಗಳಿಗೆ ಭೇಟಿಯಿಂದ ಧನ್ಯತಾಭಾವ.

–ಶ್ರೀ ನರಸಿಂಹಸ್ವಾಮಿ ಸೇವೆ. ಶುಭ ಸಂಖ್ಯೆ–2

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ನಿಮಗೆ ಶನಿದೇವ ವಿರುದ್ಧವಿದ್ದರೂ ಗುರುಬಲದಿಂದ ವೈಯಕ್ತಿಕ ಸಾಮಾಜಿಕ ಕಾರ್ಯಗಳು ಸುಲಲಿತವಾಗಿ ಸಾಗುವುದು. ವ್ಯಾಪಾರ, ವ್ಯವಹಾರಗಳಿಂದ ಅಧಿಕ ಧನ ಸಂಪಾದನೆಯಾಗುವುದು. ಮನೆಯಲ್ಲಿ ಮಂಗಳವಾದ್ಯ ಮೊಳಗೀತು. ಉದ್ಯೋಗ ಅರಸುವವರಿಗೆ ಶುಭ ವಾರ್ತೆ ಬರುವುದು. ಕೌಟುಂಬಿಕ ಕಲಹಗಳನ್ನು ಮನೆ ಮಟ್ಟದಲ್ಲೇ ಬಗೆಹರಿಸಿಕೊಂಡರೆ ಒಳ್ಳೆಯದು.

ಶ್ರೀ ದತ್ತಾತ್ರೇಯ ಉಪಾಸನೆ. ಶುಭ ಸಂಖ್ಯೆ–3

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)

ಲೇವಾದೇವಿ ವ್ಯವಹಾರದಲ್ಲಿ ಆದಾಯ ಹೆಚ್ಚಳ. ಗೃಹ ನಿವೇಶನ ಖರೀದಿಸುವಾಗ ಕಾಗದ ಪತ್ರಗಳನ್ನು ಕೂಲಂಕುಷವಾಗಿ ಪರಿಶೀಲಿಸಿಕೊಳ್ಳಬೇಕು. ಆತುರದ ಮನೋವೃತ್ತಿಯಿಂದ ಅನವಶ್ಯಕ ತಪ್ಪುಗಳು ಆಗಬಹುದು. ರಾಹು–ಕೇತುಗಳು ಶುಭರಿಲ್ಲ. ಪ್ರತಿಯೊಂದು ಕೆಲಸಗಳೂ ಅಪೂರ್ಣವಾಗಲಿದೆ. ಗುಡಿ ಕೈಗಾರಿಕೆಯವರಿಗೆ ಬೇಡಿಕೆ ಹೆಚ್ಚುವುದು ಹಾಗೂ ಧನಾದಾಯ ಹೆಚ್ಚುವುದು.

ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ–2

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಈ ವಾರದಲ್ಲಿ ನಿಮ್ಮ ಮನೋವಾಂಛಿತ ಕೆಲಸ ಕಾರ್ಯಗಳು ಪೂರ್ಣಗೊಳ್ಳಲು ಗ್ರಹಾನುಕೂಲವಿದೆ. ಧೈರ್ಯ–ಸಾಹಸಗಳಿಂದ ಕೆಲಸಗಳನ್ನು ಸಾಧಿಸಿಕೊಳ್ಳುವಿರಿ. ಆದರೆ ಅಪರಿಚಿತ ವ್ಯಕ್ತಿಗಳೊಂದಿಗೆ ನಿಮ್ಮ ಬ್ಯಾಂಕ್ ವಿವರಗಳನ್ನು ಹಂಚಿಕೊಂಡರೆ ನಷ್ಟವನ್ನು ಅನುಭವಿಸುವಿರಿ. ಜನ್ಮಸ್ಥ ರಾಹು ಇರುವ ಕಾರಣ ಆಕಸ್ಮಿಕ ಅಪಘಾತಗಳು ಸಂಭವಿಸಬಹುದು.

ಶ್ರೀ ರಾಘವೇಂದ್ರಸ್ವಾಮಿ ಉಪಾಸನೆ, ಶುಭ ಸಂಖ್ಯೆ–4

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ವಾರದಾರಂಭಕ್ಕೆ ನಿಮ್ಮ ಹಿತೈಷಿಗಳ ಸಹಾಯದಿಂದ ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ ದೊರಕುವುದು. ಗೃಹ ಸಂಬಂಧಿ ವಿಚಾರಗಳಲ್ಲಿ ಉಂಟಾಗಿದ್ದ ಸಮಸ್ಯೆಗಳಿಂದ ಮುಕ್ತಿ ದೊರೆಯಲಿದೆ. ಅತೀ ಸಾಹಸ ತೋರಲು ಹೋಗಿ ನಷ್ಟವನ್ನು ಅನುಭವಿಸುವಿರಿ. ಗೃಹ ಕೈಗಾರಿಕೆಯವರಿಗೆ ಉತ್ತಮ ಧನಲಾಭ. ಸ್ತ್ರೀಯರು ಕಳ್ಳಕಾಕರಿಂದ ತಮ್ಮ ಮಾಂಗಲ್ಯಸರ ರಕ್ಷಿಸಿಕೊಳ್ಳುವುದು ಒಳ್ಳೆಯದು.

ಶ್ರೀ ಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–2

ಪರಿಶಿಷ್ಟ ಜಾತಿಯ ಬಲಗೈ ಸಮುದಾಯದ ಪ್ರಾಬಲ್ಯ ಕುಗ್ಗಿಸುವ

ನ್ಯಾ.ನಾಗಮೋಹನ್‌ದಾಸ್‌ರ ವರದಿ ಪರಿಷ್ಕರಣೆಗೆ ಆಗ್ರಹಿಸಿ ಪ್ರತಿಭಟನೆ

ತಿ.ನರಸೀಪುರ, ಆ.16– ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಬಲಗೈ ಸಮುದಾಯದ ಪ್ರಾಬಲ್ಯವನ್ನು ಕುಗ್ಗಿಸಿರುವ ನ್ಯಾ.ನಾಗಮೋಹನ್ ದಾಸ್ ಒಳ ಮೀಸಲಾತಿ ವರದಿಯನ್ನು ಪರಿಷ್ಕರಿಸುವಂತೆ ಆಗ್ರಹಿಸಿ ಪಟ್ಟಣದಲ್ಲಿ ಶನಿವಾರ ಸಮುದಾಯದ ಮುಖಂಡರು ಹಾಗೂ ವಿವಿಧ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಸಿಎಂ ಸಿದ್ದರಾಮಯ್ಯ ಹಾಗೂ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರ ತವರು ಕ್ಷೇತ್ರದಲ್ಲಿ ನ್ಯಾ.ನಾಗಮೋಹನ್ ದಾಸ್ ಒಳ ಮೀಸಲಾತಿ ವರದಿಗೆ ಪ.ಜಾತಿಯ ಬಲಗೈ ಜನರ ಆಕ್ರೋಶ ಭುಗಿಲೆದ್ದಿದ್ದು, ಪಟ್ಟಣದ ಲೋಕೋಪಯೋಗಿ ಅತಿಥಿ ಗೃಹದ ಮುಂಭಾಗ ಜಮಾವಣೆಗೊಂಡಿದ್ದ ಪ್ರತಿಭಟನಾಕಾರರು ಅವೈಜ್ಞಾನಿಕ ವರದಿಯ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯನ್ನು ಪ್ರಾರಂಭಿಸಿದರು.

ಜೋಡಿ ರಸ್ತೆಯಲ್ಲಿ ಸಾಗಿದ ಪ್ರತಿಭಟನಾ ಮೆರವಣಿಗೆ ಖಾಸಗಿ ಬಸ್ ನಿಲ್ದಾಣದ ವೃತ್ತದಲ್ಲಿ ಕೆಲಕಾಸು ಮಾನವ ಸರಪಳಿಯನ್ನು ರಚಿಸಿ, ಸಾರ್ವಜನಿಕರ ಗಮನ ಸೆಳೆದರು. ವಿದ್ಯೋದಯ ಕಾಲೇಜು ವೃತ್ತದ ಮಾರ್ಗವಾಗಿ ತಾಲೂಕು ಕಚೇರಿ ಆವರಣಕ್ಕೆ ತೆರಳಿ ಮುಂಭಾಗ ಗಂಟೆಗಳ ಕಾಲ ಪ್ರತಿಭಟನಾ ಧರಣಿಯನ್ನು ನಡೆಸಿ, ಬಲಗೈ ಸಂಬಂಧಿತ ಉಪಜಾತಿಗಳನ್ನು ಬೇರ್ಪಡಿಸಿ ಸಮುದಾಯದ ಬಲವನ್ನು ಕ್ಷೀಣಿಸುವಂತೆ ಮಾಡಿರುವ ಆಯೋಗದ ಒಳ ಮೀಸಲಾತಿ ವರದಿಯ ವಿರುದ್ಧ ಆಕ್ರೋಶವನ್ನ ವ್ಯಕ್ತಪಡಿಸಿದರು.

ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕೋಟೆಬೆಟ್ಟ ಮಹದೇವಯ್ಯ ಮಾತನಾಡಿ, ಪರಿಶಿಷ್ಟ ಜಾತಿ ಬಲಗೈ ಸಮುದಾಯಕ್ಕೆ ಸೇರಿದ ಪಲ್ಲಯ, ಪರವನ್ ಜಾತಿಯನ್ನು ಎಡಗೈ ಪಂಗಡಕ್ಕೆ ಸೇರಿಸಿರುವುದಲ್ಲದೇ ಬಲಗೈ ಸಮುದಾಯಕ್ಕೆ ಸೇರಿದ ಇನ್ನೂ ಹಲವು ಜಾತಿಗಳನ್ನು ಅತ್ಯಂತ ಹಿಂದುಳಿದ ಜಾತಿಗಳ ಗುಂಪಿಗೆ ಸೇರಿಸಿ ಬಲಗೈ ಸಮುದಾಯದ ಜನ ಸಂಖ್ಯೆಯನ್ನು ಉದ್ದೇಶಪೂರ್ವಕವಾಗಿ ಕಡಿಮೆ ಮಾಡಿದ್ದಲ್ಲದೇ, ಜಾತಿಯೇ ಅಲ್ಲದ ಆದಿಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಸಮೂಹಕ್ಕೆ ಶೇಕಡ 1ರಷ್ಟು ಮೀಸಲಾತಿ ನಿಗದಿಪಡಿಸಿರುವುದನ್ನು ರದ್ದುಪಡಿಸಿ ಸದರಿ ಮೀಸಲಾತಿಯನ್ನು ಸಂಬಂಧಿಸಿದ ಜಾತಿಗಳಿಗೆ ಹಂಚಿಕೆ ಮಾಡಲು ಸಚಿವ ಸಂಪುಟದ ಉಪ ಸಮಿತಿ ರಚಿಸಿ ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ತಹಸೀಲ್ದಾರ್(ಗ್ರೇಡ್ 2) ರಾಜಾಕಾಂತ್ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದ ಮುಖಂಡರು.

ರಾಜ್ಯದಲ್ಲಿ ದಲಿತರು ಹಾಗೂ ಹಿಂದುಳಿದ ವರ್ಗಗಳ ಪರವಾದ ಸರ್ಕಾರ ಅಧಿಕಾರದಲ್ಲಿರುವಾಗ ಪರಿಶಿಷ್ಟ ಜಾತಿ ಮೀಸಲಾತಿ ವರ್ಗೀಕರಣದ ಸೂಕ್ಷ್ಮತೆಯನ್ನು ಅರಿತು ವರದಿ ನೀಡುವಲ್ಲಿ ನ್ಯಾ.ನಾಗಮೋಹನ್ ದಾಸ್ ಅನುತ್ತೀರ್ಣರಾಗಿದ್ದಾರೆ. ಸಿಎಂ ಸಿದ್ದರಾಮಯ್ಯ ಹಾಗೂ ಸಮಾಜ ಕಲ್ಯಾಣ ಸಚಿವ ಮಹದೇವಪ್ಪ ಅವರ ವರ್ಚಸ್ಸನ್ನ ಕಡಿಮೆಗೊಳಿಸಲು ಬಲಗೈ ಸಮುದಾಯದ ಸಂಬಂಧ ಉಪಜಾತಿಗಳನ್ನು ಬೇರೆ ಜಾತಿಗಳೊಡನೆ ಸೇರ್ಪಡೆಗೊಳಿಸಿ ಮೀಸಲಾತಿ ಪ್ರಮಾಣವನ್ನು ಕಡಿತಗೊಳಿಸಿದ್ದಾರೆ. ಸಾಮಾಜಿಕ ನ್ಯಾಯದಂತೆ ಪರಿಶಿಷ್ಟ ಜಾತಿಯ ಎಲ್ಲಾ ಸಮುದಾಯಗಳಿಗೆ ಮೀಸಲಾತಿ ಸೌಲಭ್ಯ ದೊರಕುವಂತೆ ಸಚಿವ ಸಂಪುಟ ಸಭೆಯಲ್ಲಿ ರಾಜ್ಯ ಸರ್ಕಾರ ಚರ್ಚಿಸಿ ಕ್ರಮ ಕೈಗೊಳ್ಳಬೇಕು.

–ಕುಕ್ಕೂರು ಗಣೇಶ್, ತಾ.ಪಂ ಮಾಜಿ ಸದಸ್ಯ, ಭೂ ನ್ಯಾಯ ಮಂಡಳಿಯ ಸದಸ್ಯ

ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಪರಿಶಿಷ್ಟ ಜಾತಿಯ ಒಳ ಮೀಸಲು ಸಂಬಂಧ ನ್ಯಾ. ನಾಗಮೋಹನ್ ದಾಸ್ ಆಯೋಗ ಸಲ್ಲಿಸಿರುವ ವರದಿ ಅವೈಜ್ಞಾನಿಕವಾಗಿದ್ದು, ಭವಿಷ್ಯದಲ್ಲಿ ಬಲಗೈ ಹೊಲಯ ಸಮುದಾಯದ ಬಲವನ್ನು ಕುಗ್ಗಿಸುವಂತಿದೆ. ವರದಿ ಜಾರಿಗೆ ಮುನ್ನ ಪರಿಷ್ಕರಣೆಯಾಗಬೇಕು. ನಮ್ಮ ಪ್ರತಿಭಟನೆಯನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ, ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಅನ್ಯಾಯವಾಗುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕು. ತಪ್ಪಿದಲ್ಲಿ ಹೋರಾಟವನ್ನು ತೀವ್ರಗೊಳಿಸಿ ಬಂದ್ ಪ್ರತಿಭಟನೆಯನ್ನು ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜನಜಾಗೃತಿ ಸಮಿತಿಯ ಜಿಲ್ಲಾಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ ಮಾತನಾಡಿದರು. ಜಿ.ಪಂ ಮಾಜಿ ಅಧ್ಯಕ್ಷ ಎಸ್.ಎನ್ ಸಿದ್ಧಾರ್ಥ ಹಾಗೂ ದಸಂಸ ತಾಲೂಕು ಸಂಚಾಲಕ ಕುಕ್ಕೂರು ರಾಜು ಮಾತನಾಡಿ, ಅವೈಜ್ಞಾನಿಕ ಒಳಮೀಸಲು ವರದಿ ವಿರುದ್ಧ ಹರಿಹಾಯ್ದರು. ಬಳಿಕ ಮುಖ್ಯಮಂತ್ರಿಗಳಿಗೆ ಸಲ್ಲಿಸಲು ಉದ್ದೇಶಿಸಿದ್ದ ಮನವಿ ಪತ್ರವನ್ನು ಗ್ರೇಡ್ 2 ತಹಸೀಲ್ದಾರ್ ರಾಜಕಾಂತ್ ಅವರಿಗೆ ಸಲ್ಲಿಸಲಾಯಿತು. ಪೊಲೀಸ್ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.

ಪ್ರತಿಭಟನೆಯಲ್ಲಿ ಯಾಚೇನಹಳ್ಳಿ ಸೋಮಶೇಖರ್, ಸೋಸ್ಲೆ ಪರಶಿವಮೂರ್ತಿ, ತುಂಬಲ ಮಂಜುನಾಥ್, ಅಂದಾನಿ, ರಾಮಲಿಂಗಯ್ಯ, ಡಿ.ಆರ್.ಮೂರ್ತಿ ಸಿ.ಪ್ರಕಾಶ್, ಕುಕ್ಕೂರು ಪ್ರಸನ್ನ, ಯಡಹಳ್ಳಿ ಶಿವಮೂರ್ತಿ, ಎನ್.ಮಹೇಶ್ ಉಕ್ಕಲಗೆರೆ ರಾಜು, ವಾಟಾಳ್ ನಾಗರಾಜು, ಆಲಗೂಡು ನಾಗರಾಜಮೂರ್ತಿ, ಮಂಜು, ಶಾಂತಕುಮಾರ, ಬನ್ನಹಳ್ಳಿಹುಂಡಿ ಉಮೇಶ್, ತ್ರಿವೇಣಿ ನಗರ ಮುದ್ದೇವಮ್ಮ, ಎಂ.ಮಿಥುನ್, ಚಂದ್ರಮ್ಮ, ಚಿದರಹಳ್ಳಿ ಮಹೇಶ್, ರಾಜೇಶ್, ಎಸ್.ಸಿ. ಗಣೇಶಸ್ವಾಮಿ, ಪ್ರಭು, ಮಹೇಶ, ಕಲಿಯೂರು ಶಿವಣ್ಣ, ಸಿದ್ದರಾಜು, ಎಂ. ರಂಗರಾಮು, ಸುಜ್ಜಲೂರು ಶಿವಯ್ಯ, ಯಾಚೇನಹಳ್ಳಿ ರಾಘವೇಂದ್ರ, ಪುಟ್ಟರಾಜು, ಮಹದೇವ, ಎಂ.ಡಿ.ರಾಮು, ಹ್ಯಾಕನೂರು ಶಿವಕುಮಾರ್, ತುರುಗನೂರು ಲಕ್ಷ್ಮಣ, ರಂಗಸಮುದ್ರ ರಂಗಸ್ವಾಮಿ, ಪರಿಣಾಮಿಪುರ ಪರಮೇಶ್, ಸೋಸಲೆ ರಾಜಣ್ಣ, ರಾಮಣ್ಣ ಹಾಗೂ ಇತರರು ಇದ್ದರು.

ಹೆಚ್.ಡಿ.ಕೋಟೆಯಲ್ಲಿ ನೀರು ಪರೀಕ್ಷೆಗೆ ಪ್ರಯೋಗಾಲಯ

ಹೆಚ್.ಡಿ.ಕೋಟೆ: ಗ್ರಾಮಗಳಲ್ಲಿ ಜನತೆಗೆ ಪರಿಶುದ್ಧವಾದ ಕುಡಿಯುವ ನೀರನ್ನು ಒದಗಿಸಲು ನೀರಿನ ಪರೀಕ್ಷಾ ಪ್ರಯೋಗಾಲಯವನ್ನು ಪಟ್ಟಣದಲ್ಲಿ ತೆರೆಯಲಾಗಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಜಿಲ್ಲಾ ಪಂಚಾಯಿತಿ ಕಚೇರಿ ಆವರಣದಲ್ಲಿ ಗ್ರಾಮೀಣ ಕುಡಿಯುವ ನೀರಿನ ಮತ್ತು ನೈರ್ಮಲ್ಯ ಇಲಾಖೆ ಕುಡಿಯುವ ನೀರಿನ ಗುಣಮಟ್ಟ ಪರೀಕ್ಷಾ ಪ್ರಯೋಗಾಲಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ತಾಲೂಕಿನಲ್ಲಿ ಇರುವ ವಸತಿ ಶಾಲೆಗಳಲ್ಲಿ ಕುಡಿಯುವ ನೀರಿನ ಹಲವಾರು ಸಮಸ್ಯೆ ತಲೆದೋರಿತ್ತು. ಹಾಗೆ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರು ಯೋಗ್ಯ ಇಲ್ಲದ ಕಾರಣ ಈ ನೀರನ್ನು ಪರೀಕ್ಷೆ ಮಾಡುವುದಕ್ಕೆ ಮೈಸೂರು ಕೇಂದ್ರ ಸ್ಥಾನಕ್ಕೆ ಕಳಿಸಬೇಕಾಗಿತ್ತು, ಆದ್ದರಿಂದ ಸುಮಾರು 70 ಲಕ್ಷ ರೂ. ವೆಚ್ಚದಲ್ಲಿ ಈ ಪ್ರಯೋಗಾಲಯ ತೆರೆಯಲಾಗಿದ್ದು, ಕೋಟೆ, ಸರಗೂರು, ಹುಣಸೂರು, ಈ ಮೂರು ತಾಲೂಕಿನವರು ಇದನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.



ಕುಡಿಯುವ ನೀರಿನ ಗುಣಮಟ್ಟ ಪರೀಕ್ಷಾ ಪ್ರಯೋಗಾಲಯದ ಉದ್ಘಾಟಿಸಿದ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ವಿವರಣೆ ನೀಡುತ್ತಿರುವ ಅಧಿಕಾರಿಗಳು.

ಸಹಾಯಕ ಕಾರ್ಯಪಾಲಕ ಅಭಿಯಂತರ ಗೋವಿಂದ ನಾಯಕ ಮಾತನಾಡಿ, ತಾಲೂಕಿನಲ್ಲಿ ಇರುವ ಕೊಳವೆಬಾವಿ, ಅಂಗನವಾಡಿ, ವಸತಿ ಶಾಲೆಗಳು, ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಕೊಳವೆಬಾವಿಗಳು ಹಾಗೂ ಕುಡಿಯುವ ನೀರನ್ನು ಪ್ರತಿ ವರ್ಷ ಎರಡು ಸಲ ಮಳೆಗಾಲ ಮುಂಚೆ, ಮಳೆಗಾಲದ ನಂತರ, ಪರೀಕ್ಷಿಸಲಾಗುವುದು. ಪರೀಕ್ಷಿಸಿ ನಂತರ ಕುಡಿಯಲು ಯೋಗ್ಯವೋ ಎಂಬುದರ ಬಗ್ಗೆ ತಿಳಿಸಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ರಾಸಾಯನಿಕ ತಜ್ಞೆ ಎಂ.ಎನ್.ಹರ್ಷಿತ ಅವರು ಮಾತನಾಡಿ, ಈಗ ಇಲ್ಲೇ ಪರೀಕ್ಷಾ ಕೇಂದ್ರ ಆಗಿರುವ ಹಿನ್ನೆಲೆಯಲ್ಲಿ ನೀರನ್ನು ಯಾವ ಮಾದರಿಯಲ್ಲಿ ಪರೀಕ್ಷಿಸುವುದು ಎಂಬುದನ್ನು ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ತಿಳಿಸಿದರು.

ಇದೇ ಸಂದರ್ಭದಲ್ಲಿ ಪುರಸಭಾ ಅಧ್ಯಕ್ಷ ಶಿವಮ್ಮ, ರಾಸಾಯನಿಕ ತಜ್ಞೆ ಎಂ.ಎನ್. ಹರ್ಷಿತ, ಪುರಸಭಾ ಮುಖ್ಯ ಅಧಿಕಾರಿ ಸುರೇಶ್, ಇಓ ಧರಣೇಶ್, ಇಂಜಿನಿಯರ್‌ಗಳಾದ ಮೋಹನ್, ಮೋಹನಶ್ರೀ, ಪುರಸಭಾ ಉಪಾಧ್ಯಕ್ಷ ಆಸಿಫ್ ಇಕ್ಬಾಲ್, ಸಾಯಿ ಸಮಿತಿ ಅಧ್ಯಕ್ಷ ಮಧುಕುಮಾರ್, ಸದಸ್ಯರಾದ ನರಸಿಂಹಮೂರ್ತಿ, ಪ್ರೇಮ್ ಸಾಗರ್, ಮುಖಂಡರುಗಳಾದ ರಾಜನಾಯಕ, ಅನಿಲ್, ಸೋಮ, ರಾಜು, ಹಜರುದ್ದೀನ್, ಕುಮಾರ್, ರವಿ, ಶಿವಪ್ಪ ಶೆಟ್ಟಿ ನೀರಿನ ಮಾದರಿ ಸಂಗ್ರಹಕಾರದ ವೆಂಕಟೇಶ್, ಗಣೇಶ್, ಸುನೀಲ್ ಹಾಜರಿದ್ದರು.

ಸ್ವಾತಂತ್ರ್ಯೋತ್ಸವ ಆಚರಣೆ



79ನೇ ಸ್ವಾತಂತ್ರ್ಯೋತ್ಸವದ ದಿನಾಚರಣೆ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹುಟ್ಟು ಹಬ್ಬದ ಪ್ರಯುಕ್ತ ವರುಣ ಕ್ಷೇತ್ರದ ತುಂನೇರಳೆ ಗ್ರಾಪಂನ ಮರಡಿಹುಂಡಿ ಗ್ರಾಮದಲ್ಲಿ ಗ್ರಾಪಂ ಸದಸ್ಯ ಬುಲೆಟ್ ಮಹದೇವು, ಅಂಗನವಾಡಿ ಕೇಂದ್ರದ ಮಕ್ಕಳಿಗೆ ಸಮವಸ್ತ್ರ, ಚೇರ್, ಟೇಬಲ್ ಕೊಡುಗೆಯಾಗಿ ನೀಡಿದರು. ಶಾಲೆಯ ಮಕ್ಕಳಿಗೆ ನೋಟ್‌ಬುಕ್, ಸಿಹಿ ವಿತರಣೆ ಮಾಡಿದರು.



ಸಾಲಿಗ್ರಾಮ ತಾಲೂಕು ಚುಂಚನಕಟ್ಟೆ ಸರ್ಕಾರಿ ಹಿರಿಯ ಮಾದರಿ ಪ್ರಾಥಮಿಕ ಶಾಲೆಯಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಜಗದೀಶ್, ಕುಪ್ಪೆ ಗ್ರಾಪಂ ಅಧ್ಯಕ್ಷರಾದ ಶಾರದಮ್ಮ, ಗ್ರಾಪಂ ಸದಸ್ಯರಾದ ಗೋವಿಂದೇಗೌಡ, ಹಾಗೂ ಹಿರಿಯ ಪತ್ರಕರ್ತರಾದ ಚುಂಚನಕಟ್ಟೆ ಮಧು ಅವರನ್ನು ಸನ್ಮಾನಿಸಿದರು.

ಪುರಸಭೆಯಲ್ಲಿ ಸ್ವಾತಂತ್ರ್ಯೋತ್ಸವ ಆಚರಣೆ



ಪುರಸಭೆ ಆವರಣದಲ್ಲಿ ಸ್ವಾತಂತ್ರ್ಯೋತ್ಸವ ದಿನವನ್ನು ಆಚರಿಸಲಾಯಿತು.

ತಿ.ನರಸೀಪುರ, ಆ.16–ದೇಶಪ್ರೇಮಿಗಳ ಹಾಗೂ ಹಿರಿಯರ ಹೋರಾಟ, ತ್ಯಾಗ ಬಲಿದಾನಗಳಿಂದಾಗಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದೆ. ಇದರ ಮಹತ್ವವನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು ಎಂದು ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ಹೇಳಿದರು

ಪಟ್ಟಣ ಪುರಸಭೆ ಆವರಣದಲ್ಲಿ ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆ ವೇಳೆ ಪುರಸಭೆ ಅಧ್ಯಕ್ಷೆ ವಸಂತ ಶ್ರೀಕಂಠ ಅವರು ಧ್ವಜಾರೋಹಣ ನೆರವೇರಿಸಿದರು.

ಈ ವೇಳೆ ಮಾತನಾಡಿದ ಪ್ರಕಾಶ್, ಭಾರತ ಸಂಪನ್ಮೂಲಭರಿತ ರಾಷ್ಟ್ರವಾಗಿದ್ದ ಕಾರಣ ಬ್ರಿಟಿಷರು, ಡಚ್ಚರು, ಫ್ರೆಂಚರು ನಮ್ಮನ್ನು ಆಳಿದ್ದಾರೆ. ಆದರೆ, ಹಲವಾರು ಸ್ವಾತಂತ್ರ್ಯ ಹೋರಾಟಗಾರರ ಹೋರಾಟದ ಫಲವಾಗಿ ನಮಗೆ ಸ್ವಾತಂತ್ರ್ಯ ಸಿಕ್ಕಿದೆ. ರಾಷ್ಟ್ರದ ಪ್ರಗತಿಗೆ ಹಲವಾರು ಮಹನೀಯರು ಕೊಡುಗೆ ನೀಡಿದ್ದಾರೆ ಎಂದರು.

ಪುರಸಭೆ ಸದಸ್ಯ ಮಂಜುನಾಥ್ ಮಾತನಾಡಿ, ಮಹಾತ್ಮ ಗಾಂಧೀಜಿ ಅವರ ಸ್ವಾತಂತ್ರ್ಯ ಹೋರಾಟದ ಪ್ರೇರಣೆಯಿಂದ ದೇಶಾದ್ಯಂತ ಹಲವಾರು ಮಂದಿ ಅಸಹಕಾರ ಚಳುವಳಿ, ದೇಶ ಬಿಟ್ಟು ತೊಲಗಿ ಚಳುವಳಿಗಳಲ್ಲಿ ಹೋರಾಟ ಮಾಡಿದ್ದಾರೆ. ಭಾರತೀಯ ಸ್ವಾತಂತ್ರ್ಯ ಚಳವಳಿಗೆ ಮಹಾತ್ಮ ಗಾಂಧಿಯವರ ಕೊಡುಗೆಯನ್ನು ಪದಗಳಲ್ಲಿ ಅಳೆಯಲು ಸಾಧ್ಯವಿಲ್ಲ. ಅವರ ಹೋರಾಟ ಚಳುವಳಿ, ನೀತಿಗಳು ಅಹಿಂಸಾತ್ಮಕವಾಗಿದ್ದವು.

ಸದಸ್ಯೆ ರೂಪ ಪರಮೇಶ್ ಮಾತನಾಡಿದರು. ಸದಸ್ಯರುಗಳಾದ ಎಸ್.ಕೆ.ಕಿರಣ್, ಸೈಯದ್ ಅಹಮದ್, ಸಿಸ್ಟಮ್ ಸಿದ್ದು, ತೇಜಸ್ವಿನಿ, ನಾಗರತ್ನ, ನಾಮ ನಿರ್ದೇಶನ ಸದಸ್ಯರುಗಳಾದ ಗುರುಸ್ವಾಮಿ, ಸಬಿಲ್, ನಾಗರಾಜು, ಪುರಸಭಾ ಪ್ರಭಾರ ಮುಖ್ಯ ಅಧಿಕಾರಿ ತ್ರಿವೇಣಿ, ಆರ್.ಐ.ಅಶೋಕ್, ಸಮುದಾಯ ಸಂಘಟಕ ಮಹದೇವನಾಯಕ, ವ್ಯವಸ್ಥಾಪಕ ಮಹೇಂದ್ರ, ಮುಖಂಡರುಗಳಾದ ಶ್ರೀಕಂಠ ಬಿ.ಮರಯ್ಯ, ಮಾದೇಶ್ ಸೇರಿದಂತೆ ಮತ್ತಿತರರಿದ್ದರು.

ನಾಯಿ ವಾಕಿಂಗ್ ಮಾಡಿಸುವ ವಿಚಾರಕ್ಕೆ ಜಗಳ

ಮಚ್ಚಿನಿಂದ ಹಲ್ಲೆ, ಇಬ್ಬರಿಗೆ ತೀವ್ರ ಗಾಯ

ಹುಣಸೂರು, ಆ.16– ನಾಯಿಯನ್ನು ವಾಕಿಂಗ್ ಮಾಡಿಸುವ ವಿಚಾರಕ್ಕೆ ಉಂಟಾದ ಜಗಳ ವಿಕೋಪಕ್ಕೆ ತಿರುಗಿ ನಾಯಿಯ ಮಾಲೀಕ ಮಚ್ಚಿನಿಂದ ಹಲ್ಲೆ ನಡೆಸಿ ಇಬ್ಬರನ್ನು ಗಾಯಗೊಳಿಸಿರುವ ಘಟನೆ ತಾಲೂಕಿನ ಬಿಜಗನಹಳ್ಳಿಯಲ್ಲಿ ಸಂಭವಿಸಿದೆ.

ಮಚ್ಚಿನೇಟಿನಿಂದ ತೀವ್ರವಾಗಿ ಗಾಯಗೊಂಡಿರುವ ಗ್ರಾಮದ ವಾಸಿ ಮಹದೇವು ಅವರ ಪುತ್ರ ಅನಿಲ್(28) ಅವರನ್ನು ಮೈಸೂರಿನ ಆಸ್ಪತ್ರೆಗೂ ಹಲ್ಲೆ ಮತ್ತು ನಾಯಿ ಕಡಿತದಿಂದ ಗಾಯಗೊಂಡಿರುವ ಈತನ ಸಹೋದರ ತರುಣ್‌ನನ್ನು ಹುಣಸೂರಿನ ಸಾರ್ವಜನಿಕ ಆಸ್ಪತ್ರೆಗೂ ಸೇರಿಸಲಾಗಿದೆ.

ಅದೇ ಗ್ರಾಮದ ಶಿವಲಿಂಗ ಅವರ ಮಗ ಯೋಗೇಶ್ ಎಂಬಾತನೇ ಮಚ್ಚಿನಿಂದ ಹಲ್ಲೆ ನಡೆಸಿ ನಾಯಿಯಿಂದ ಕಚ್ಚಿಸಿದ ಆರೋಪಿಯಾಗಿದ್ದು, ಈಗ ಪೊಲೀಸರ ಅತಿಥಿಯಾಗಿದ್ದಾನೆ.



ನಿನ್ನೆ ಸಂಜೆ ಯೋಗೇಶ್ ತಮ್ಮ ನಾಯಿಯನ್ನು ಹಿಡಿದುಕೊಂಡು ವಾಕಿಂಗ್ ಮಾಡಿಸುತ್ತಿದ್ದಾಗ ಪಕ್ಕದಲ್ಲಿ ಬಂದ ಅನೀಲ್ ಮೇಲೆ ನಾಯಿ ಎಗರಿತು ಎನ್ನಲಾಗಿದೆ. ಇದರಿಂದ ಗಾಬರಿಯಾದ ಅನಿಲ್ ನಾಯಿಯನ್ನು ಸರಿಯಾಗಿ ಹಿಡಿದುಕೊ ಕಚ್ಚಿ ಬಿಟ್ಟಿತು ಎಂದು ಹೇಳಿದನಂತೆ. ನೀನು ಯಾಕೆ ನಾಯಿಯ ಪಕ್ಕದಲ್ಲಿ ಬಂದೆ ಎಂದು ಯೋಗೇಶ್ ಹೇಳಿದಾಗ ಇಬ್ಬರ ನಡುವೆ ಮಾತಿಗೆ ಮಾತು ಬೆಳೆದು ಪಕ್ಕದಲ್ಲೇ ಇದ್ದ ಮನೆಯ ಒಳಗೆ ಹೋಗಿ ಯೋಗೇಶ್ ಮಚ್ಚನ್ನು ತಂದು ತಲೆಗೆ ಹಲ್ಲೆ ನಡೆಸಿದ. ಇದನ್ನು ಬಿಡಿಸಲು ಬಂದ ಅನಿಲ್ ತಮ್ಮನ ಮೇಲೂ ಹಲ್ಲೆ ನಡೆಸಿ ನಾಯಿಯನ್ನು ಬಿಟ್ಟು ಕಚ್ಚಿಸಿದನಂತೆ. ಇದನ್ನು ಕಂಡ ಅಕ್ಕಪಕ್ಕದವರು ಬಂದು ಬಿಡಿಸಿ ಹಲ್ಲೆಗೆ ಒಳಗಾಗಿದ್ದ ಅನೀಲ್ ಮತ್ತು ಅವರ ತಮ್ಮನನ್ನು ಹುಣಸೂರು ಸಾರ್ವಜನಿಕ ಆಸ್ಪತ್ರೆಗೆ ಸೇರಿಸಿದ್ದಾರೆ.

ಮಚ್ಚಿನಿಂದ ತೀವ್ರತರದ ಹಲ್ಲೆಗೆ ಒಳಗಾಗಿದ್ದ ಅನಿಲ್‌ಗೆ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಕಳುಹಿಸಲಾಗಿದೆ ಈತನ ತಮ್ಮ ತರುಣ್ ಹುಣಸೂರು ಆಸ್ಪತ್ರೆಯಲ್ಲೆ ಚಿಕಿತ್ಸೆ ಪಡೆಯುತ್ತಿದ್ದಾನೆ ಈ ಸಂಬಂಧ ಹುಣಸೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಆರೋಪಿಯನ್ನು ಬಂಧಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ದೇಶಾಭಿಮಾನ ಬೆಳೆಸಿಕೊಳ್ಳಲು ಕರೆ



ಮಲ್ಕುಂಡಿ: ಬ್ರಿಟಿಷರ ದಾಸ್ಯದಿಂದ ಮುಕ್ತಿ ಪಡೆಯಲು ದೇಶಕ್ಕಾಗಿ ತಮ್ಮ ಪ್ರಾಣವನ್ನೇ ಬಲಿದಾನ ಮಾಡಿದ ಮಹಾತ್ಮರನ್ನು ಸ್ಮರಿಸುವ ಮೂಲಕ ದೇಶಾಭಿಮಾನ ಬೆಳೆಸಿಕೊಳ್ಳಿ ಎಂದು ಗ್ರಾಪಂ ಅಧ್ಯಕ್ಷ ಬಿ.ಶಂಕರ್ ಹೇಳಿದರು.

ಸಮೀಪದ ದುಗ್ಗಹಳ್ಳಿ ಗ್ರಾಪಂ ಆವರಣದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು ಸ್ವಾತಂತ್ರ್ಯ ಸೇನಾನಿಗಳ ಭಾವಚಿತ್ರಕ್ಕೆ ಪುಷ್ಪಾರ್ಚಣೆ ಮಾಡಿದರೆ ಸಲ್ಲದು. ಅವರ ತತ್ವ ಹಾಗೂ ಸಿದ್ದಾಂತಗಳನ್ನು ಅಳವಡಿಸಿಕೊಂಡು ಗುರು ಹಿರಿಯರ ಮಾರ್ಗದರ್ಶನದಲ್ಲಿ ನಡೆದರೆ ಉತ್ತಮ ಎಂದು ತಿಳಿಸಿದರು.

ಎಂ.ಕೊಂಗಳ್ಳಿ ಸ.ಕಿ.ಶಾಲೆ: ಸಮೀಪದ ಎಂ ಕೊಂಗಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ದುಗ್ಗಹಳ್ಳಿ ಗ್ರಾಪಂ ಅಧ್ಯಕ್ಷ ಬಿ ಶಂಕರ್ ಅವರು ಧ್ವಜಾರೋಹಣ ನೆರವೇರಿಸಿ ಮಾತನಾಡಿ, ನಮ್ಮ ದೇಶದ ಮಹನೀಯರು ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ಬಲಿದಾನ ಮಾಡಿ ದೇಶದ ಅಭಿಮಾನ ಉಳಿಸಿದ್ದಾರೆ. ಇಂದು ಅವರ ಸ್ಮರಣೆ ಮೂಲಕ ಅವರ ತತ್ವ ಆದರ್ಶಗಳನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಈ ವೇಳೆ ಗ್ರಾಪಂ ಸದಸ್ಯರುಗಳಾದ ಗುರುಪ್ರಸಾದ್, ವೃಷಭೇಂದ್ರ, ಕೂಸಮ್ಮ, ಸುಧಾಮಣಿ, ಚಿನ್ನಸ್ವಾಮಿನಾಯಕ, ಶಿವಣ್ಣ, ಬಸವರಾಜ್, ಮಂಜುನಾಥ್, ಪಿಡಿಓ ಹೇಮಾವತಿ, ಕಾರ್ಯದರ್ಶಿ ಬಸವಣ್ಣ ಎಸ್‌ಡಿಎಂಸಿ ಅಧ್ಯಕ್ಷ ನಾಗೇಶ್, ಮುಖ್ಯ ಶಿಕ್ಷಕ ಕೃಷ್ಣಮೂರ್ತಿ ಸೇರಿದಂತೆ ಪ್ರಮುಖರು ಹಾಜರಿದ್ದರು.

ಮತ ಕಳವು: ಮೇಣದ ಬತ್ತಿ ಹಿಡಿದು ಕಾಂಗ್ರೆಸ್ ಪ್ರತಿಭಟನೆ.

ನಂಜನಗೂಡು: ಮತ ಕಳ್ಳತನ ನಡೆಸಿ ಅಧಿಕಾರಕ್ಕೆ ಬಂದಿರುವ ಪ್ರಧಾನಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ರಾಜೀನಾಮೆ ನೀಡುವಂತೆ ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು ಮೇಣದಬತ್ತಿ ಹಿಡಿದು ಗುರುವಾರ ರಾತ್ರಿ ಪ್ರತಿಭಟನೆ ನಡೆಸಿದರು.

ನಗರದ ಹುಲ್ಲಹಳ್ಳಿ ವೃತ್ತದ ಬಳಿ ಜಮಾವಣೆಗೊಂಡ ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಮತ್ತು ಚುನಾವಣಾ ಆಯೋಗದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ದೇಶದ ಜನರ ಬಹುಮತ ಪಡೆದು ಅಧಿಕಾರವನ್ನು ಹಿಡಿದಿಲ್ಲ, ಬದಲಾಗಿ ದೇಶಾದ್ಯಂತ ವಿವಿಧ ರಾಜ್ಯಗಳಲ್ಲಿ ಮತ ಕಳ್ಳತನದಿಂದ ಅಧಿಕಾರಕ್ಕೆ ಬಂದಿದೆ. ಈ ಬಗ್ಗೆ ಕಾಂಗ್ರೆಸ್ ವರಿಷ್ಠರಾದ ರಾಹುಲ್ ಗಾಂಧಿ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆರವರು ಮತ ಕಳ್ಳತನ ಮಾಡಿರುವ ಬಗ್ಗೆ ದಾಖಲಾತಿ ಸಮೇತ ರುಜುವಾತುಪಡಿಸಿದ್ದಾರೆ. ಇದಕ್ಕೆ ಚುನಾವಣಾ ಆಯೋಗವು ಸಹಕಾರ ನೀಡಿದೆ. ಆದ್ದರಿಂದ ಮತ ಕಳ್ಳತನದಿಂದ ಅಡ್ಡದಾರಿ ಹಿಡಿದು ಅಧಿಕಾರಕ್ಕೆ ಬಂದಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ರಾಜೀನಾಮೆ ನೀಡಿ ದೇಶದ ಜನತೆಗೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಪಕ್ಷ ದೇಶ ವ್ಯಾಪಿ ಪ್ರತಿಭಟನೆ ಆಂದೋಲನ ನಡೆಸಿ ಜನಜಾಗೃತಿ ಮೂಡಿಸಲಾಗುತ್ತಿದೆ ಎಂದರು.



ಹುಲ್ಲಹಳ್ಳಿ ವೃತ್ತದ ಬಳಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ. ಶಂಕರ್ ಮಾತನಾಡಿ, ದೇಶದ ಎಲ್ಲಾ ರಾಜ್ಯಗಳಲ್ಲೂ ಮತ ಕಳ್ಳತನ ಮಾಡುತ್ತಿರುವ ಬಗ್ಗೆ ನಮ್ಮ ವರಿಷ್ಠರು ಅಂಕಿ ಅಂಶ ಸಮೇತ ಸಾಭೀತುಪಡಿಸಿದ್ದಾರೆ. ಆದ್ದರಿಂದ ಮತ ಕಳ್ಳತನದ ಬಗ್ಗೆ ಜನರಿಗೆ ಅರಿವು ಮೂಡಿಸುವ ಸಲುವಾಗಿ ಎಐಸಿಸಿ ಮತ್ತು ಕೆಪಿಸಿಸಿ ವರಿಷ್ಠರ ಸೂಚನೆ ಮೇರೆಗೆ ಮೇಣದಬತ್ತಿ ಹಿಡಿದು ಪ್ರತಿಭಟನೆ ನಡೆಸಲಾಗುತ್ತಿದೆ ಎಂದರು.

ಪ್ರತಿಭಟನೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಮಹೇಶ್, ಎಸ್ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಣ್ಣ, ಮುಖಂಡರಾದ ಕುಳ್ಳಯ್ಯ, ನಾಗರಾಜಯ್ಯ, ದೊರೆಸ್ವಾಮಿನಾಯಕ, ಎನ್.ಎಂ.ಮಂಜುನಾಥ್, ಶ್ರೀನಿವಾಸಮೂರ್ತಿ, ಗೋವಿಂದರಾಜು, ಅಬ್ದುಲ್ ಖಾದರ್, ಅಕ್ರಮ ಸಕ್ರಮ ಸಮಿತಿ ಸದಸ್ಯ ಹಾಡ್ಯ ಜಯರಾಮು, ಪುರಸಭಾ ಮಾಜಿ ಅಧ್ಯಕ್ಷ ಚೆಲುವರಾಜು, ವಿಶ್ವಕರ್ಮ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್, ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ಬೆಟ್ಟದಪುರದಲ್ಲಿ ಸ್ವಾತಂತ್ರ್ಯ ದಿನಾಚರಣೆ



ಬೆಟ್ಟದಪುರದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅದ್ದೂರಿಯಿಂದ ಆಚರಿಸಲಾಯಿತು. ಬೆಟ್ಟದಪುರದ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ನಡೆದ ಸ್ವಾತಂತ್ರ್ಯೋತ್ಸವದ ಸಂಭ್ರಮದಲ್ಲಿ ಸಂಘದ ಅಧ್ಯಕ್ಷ ದೀಪು ಧ್ವಜಾರೋಹಣ ನೆರವೇರಿಸಿದರು. ನಂತರ ಎಲ್ಲರಿಗೂ ಸಿಹಿ ಮತ್ತು ಉಪಾಹಾರ ನೀಡಲಾಯಿತು.

ಪೌರಾಯುಕ್ತ, ನಗರಸಭಾ ಅಧ್ಯಕ್ಷರ ಸಂಧಾನ: ಮುಷ್ಕರ ಕೈಬಿಟ್ಟ ಪೌರ ಸೇವಾ ನೌಕರರು

ಹುಣಸೂರು, ಆ.16– ನಗರಸಭೆಯ ಸದಸ್ಯರೊಬ್ಬರು ಕಚೇರಿಯ ಕಿರಿಯ ಅಭಿಯಂತರರ ಮೇಲೆ ಹಲ್ಲೆ ನಡೆಸಿ ಜಾತಿ ನಿಂದನೆ ಮಾಡಿದ್ದಾರೆ ಎಂದು ಆರೋಪಿಸಿ ಎರಡು ದಿನಗಳಿಂದ ಪೌರಸೇವಾ ನೌಕರರು ನಡೆಸುತ್ತಿದ್ದ ಮುಷ್ಕರ ಪೌರಾಯುಕ್ತರು ಮತ್ತು ನಗರಸಭಾ ಅಧ್ಯಕ್ಷರ ಸಂಧಾನದಿಂದ ಸುಖಾಂತ್ಯಗೊಂಡು ಮುಷ್ಕರ ಬಿಟ್ಟರು.

ತಮ್ಮ ಮೇಲೆ ಹಲ್ಲೆ ನಡೆಸಿ ನಿಂದನೆ ಮಾಡಿದ್ದರಿಂದ ಕುಪಿತಗೊಂಡ ನೌಕರರು ಎರಡು ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದರು. ವಿಷಯ ತಿಳಿದು ಪ್ರತಿಭಟನಾ ಸ್ಥಳಕ್ಕೆ ಪೌರಾಯುಕ್ತರಾದ ಮಾನಸ ಮತ್ತು ಅಧ್ಯಕ್ಷರಾದ ಗಣೇಶ್ ಕುಮಾರಸ್ವಾಮಿ ಮತ್ತು ಕೆಲವು ಸದಸ್ಯರು ಆಗಮಿಸಿ ನೌಕರರನ್ನು ಮನವೊಲಿಸಿ ದೌರ್ಜನ್ಯವೆಸಗಿರುವ ಸದಸ್ಯ ವಿವೇಕಾನಂದ ಅವರನ್ನು ಸ್ಥಳಕ್ಕೆ ಕರೆಸಿ, ಸಂಘದ ಸದಸ್ಯರು ಮತ್ತು ಅಧಿಕಾರಿಗಳ ಸಮ್ಮುಖದಲ್ಲಿ ಅಧಿಕಾರಿ ಬಳಿ ಕ್ಷಮೆ ಯಾಚಿಸಿದರು. ನಂತರ ಸಂಘದ ಸದಸ್ಯರೊಂದಿಗೆ ಮಾತುಕತೆ ನಡೆಸಿ ಸಂಧಾನ ಮಾಡಲಾಯಿತು. ನಂತರ ನೌಕರ ಸಿಬ್ಬಂದಿಗಳು ಮುಷ್ಕರ ಕೈಬಿಟ್ಟು ಎಲ್ಲರು ಕರ್ತವ್ಯಕ್ಕೆ ಹಾಜರಾದರು.

ದೇಶಾಭಿಮಾನ ಬೆಳೆಸಿಕೊಳ್ಳಲು ವಾಟಾಳು ಶ್ರೀಗಳು ಕರೆ

ತಿ.ನರಸೀಪುರ, ಆ.16– ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಒಂದು ಉಜ್ವಲವಾದ ಅಧ್ಯಾಯವಾಗಿದ್ದು, ಇಂದಿನ ಯುವ ಜನತೆ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಅರಿವು ಮೂಡಿಸಿಕೊಂಡು ದೇಶಾಭಿಮಾನ ಬೆಳೆಸಿಕೊಳ್ಳಬೇಕೆಂದು ವಾಟಾಳು ಸೂರ್ಯ ಸಿಂಹಾಸನ ಮಠದ ಶ್ರೀ ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಟಿ.ನರಸೀಪುರ ಪುರಸಭೆ ವ್ಯಾಪ್ತಿಯ ಆಲಗೂಡು ಗ್ರಾಮದ ಬಳಿಯ ಎನ್ ಕೆಎಫ್ ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ 79ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ದೇಶದ ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ಒಗ್ಗಟ್ಟಿನಿಂದ ಹೋರಾಟ ನಡೆಸಿದರ ಫಲವಾಗಿ ನಮಗೆ ಸ್ವಾತಂತ್ರ್ಯ ದೊರಕಿತು.



ಎನ್‌ಕೆಎಫ್ ಪಬ್ಲಿಕ್ ಸ್ಕೂಲ್‌ನಲ್ಲಿ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಶಾಲಾಧ್ಯಕ್ಷ ಎನ್.ಕೆ.ಫರೀದ್ ಮಾತನಾಡಿದರು.

ಸ್ವಾತಂತ್ರ್ಯ ಪಡೆದು ಎಂಟು ದಶಕಗಳೇ ಸಮೀಪಿಸುತ್ತಿದ್ದರೂ ಇಂದು ಭಾರತವು ಅಪರಾಧ, ಭ್ರಷ್ಟಾಚಾರ, ಹಿಂಸೆ, ಬಡತನ, ಅನಕ್ಷರತೆ, ನಿರುದ್ಯೋಗ, ಮೂಢನಂಬಿಕೆಯಂತಹ ಸಮಸ್ಯೆಗಳೊಂದಿಗೆ ಹೋರಾಡುತ್ತಿರುವುದು ವಿಪರ್ಯಾಸವಾಗಿದೆ, ಯುವ ಜನತೆ ಒಗ್ಗಟ್ಟಿನಿಂದ ಹೋರಾಡುವುದರ ಮೂಲಕ ಈ ಸಮಸ್ಯೆಗಳನ್ನು ಕೊನೆಗೊಳಿಸಿ ಭಾರತವನ್ನು ಉತ್ತಮ ಅಭಿವೃದ್ಧಿಯತ್ತ ಕೊಂಡೊಯ್ಯಬೇಕೆಂದು ಕಿವಿಮಾತು ಹೇಳಿದರು.

ಶಾಲೆಯ ಸಂಸ್ಥಾಪಕ ಎನ್.ಕೆ.ಫರೀದ್ ಮಾತನಾಡಿ, ಭಾರತ ದೇಶವು ಬ್ರಿಟಿಷರ ದಾಸ್ಯದ ಸಂಕೋಲೆಗಳಿಂದ ಮುಕ್ತಗೊಂಡು ಸ್ವಾತಂತ್ರ್ಯ ಗಳಿಸಿದ ದಿನವಾದ ಆಗಸ್ಟ್ 15 ಅನ್ನು ಪ್ರತಿವರ್ಷವೂ ನಾವು ಸ್ವಾತಂತ್ರ್ಯ ದಿನವಾಗಿ ಆಚರಿಸುತ್ತೇವೆ.

1947ರ ಆಗಸ್ಟ್ 14ರ ಮಧ್ಯರಾತ್ರಿಯಂದು ಬ್ರಿಟೀಷರು ಭಾರತಕ್ಕೆ ಸ್ವಾತಂತ್ರ್ಯವನ್ನು ಹಸ್ತಾಂತರಿಸಿ ಹೊರಟರು. ಇದು ಭಾರತದ ರಾಷ್ಟ್ರೀಯ ಹಬ್ಬ. ಈ ವೇಳೆ ದೇಶದ ಪುಟ್ಟ ಹಳ್ಳಿಯಿಂದ ಹಿಡಿದು ರಾಷ್ಟ್ರರಾಜಧಾನಿ ದಿಲ್ಲಿವರೆಗೂ ಸಂಭ್ರಮ, ಸಡಗರ ಮನೆ ಮಾಡಿರುತ್ತದೆ. ಇದು ದೇಶದ ಪ್ರತಿಯೊಬ್ಬ ನಾಗರಿಕನ ಸ್ವಾತಂತ್ರ್ಯದ ಸಂಕೇತ. ಇಡೀ ದೇಶ ಕತ್ತಲಿನಿಂದ ಬೆಳಕಿನೆಡೆಗೆ ಸಾಗುವ ಹೊಸ ಸೂರ್ಯೋದಯವನ್ನು ಕಂಡ ದಿನ ಇದಾಗಿದೆ ಎಂದರು.

ಶಾಲಾ ಮಕ್ಕಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಪುರಸಭೆ ಸದಸ್ಯ ಅಹಮದ್ ಸೈಯದ್, ಮೊಹಮ್ಮದ್ ಆಯುಬ್, ಜಹರಾ ಸುಲ್ತಾನ್, ಇನಾಯತ್, ಶಾಲೆಯ ಕಾರ್ಯದರ್ಶಿ ಜಹರ ಸುಲ್ತಾನ, ಮುಖ್ಯ ಶಿಕ್ಷಕಿ ಹೇಮಾ, ಶಿಕ್ಷಕಿಯರಾದ ಗೀತಾ, ನೂರ್ ಹಾಜಿರಾ, ರೇಖಾ, ಶಿಲ್ಪಶ್ರೀ, ರೇಖಾ, ರಶ್ಮಿ, ಶಿಲ್ಪಾ, ಅನಿತಾ, ಶೈಲಾ, ಪಲ್ಲವಿ, ಅರ್ಜುಮನ್ ಭಾನು, ರಕ್ಷಿತ, ನಾಗವೇಣಿ, ಪ್ರಿಯಾಂಕ, ಪದ್ಮಪ್ರಿಯ, ರಝಿಯಾ ಹಾಜರಿದ್ದರು.

ಪ್ರಮೋದ್ ಕುಮಾರ್ ನಿಧನ

ನಂಜನಗೂಡು: ವರುಣ ವಿಧಾನಸಭಾ ಕ್ಷೇತ್ರದ ನಂಜನಗೂಡು ತಾಲೂಕಿನ ಚುಂಚನಹಳ್ಳಿ ಗ್ರಾಮದ ಸಿ.ಎಂ.ಪ್ರಮೋದ್ ಕುಮಾರ್ (33) ಅನಾರೋಗ್ಯದಿಂದ ನಿಧನರಾದರು.



ತಾಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷರಾದ ಸಿ.ಎಂ.ಮಹದೇವಯ್ಯ ಅವರ ಪುತ್ರ ಸಿಎಂ ಪ್ರಮೋದ್ ಕುಮಾರ್‌ರವರು ಗುತ್ತಿಗೆದಾರರಾಗಿದ್ದರು. ಮೃತರು ತಂದೆ ಸಿ.ಎಂ ಮಹದೇವಯ್ಯ, ತಾಯಿ ಮಹದೇವಮ್ಮ, ಪತ್ನಿ ಮೇಘ, ಓರ್ವ ಪುತ್ರಿ, ಇಬ್ಬರು ಸಹೋದರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಮಾಜಿ ಶಾಸಕ ಬಿ. ಹರ್ಷವರ್ಧನ್, ಮಾಜಿ ತಾ.ಪಂ ಅಧ್ಯಕ್ಷ ನಾಗೇಶ್ ರಾಜ್, ಮಾಜಿ ಜಿಪಂ ಸದಸ್ಯ ಸದಾನಂದ ಸೇರಿದಂತೆ ಹಲವು ಗಣ್ಯರು ದರ್ಶನ ಪಡೆದರು. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಚುಂಚನಹಳ್ಳಿಯಲ್ಲಿ ನೆರವೇರಿತು.

ಕುವೆಂಪು ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್ ಉದ್ಘಾಟನೆ

● ಸಾಧಕರಿಗೆ ಪ್ರಶಸ್ತಿ, ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ● ಕುವೆಂಪು ಅವರಿಗೆ ಮರಣೋತ್ತರ 'ಭಾರತ ರತ್ನ' ಪ್ರಶಸ್ತಿಗೆ ಜಿಟಿಡಿ ಆಗ್ರಹ

ಮೈಸೂರು, ಆ.16(ಎಂಟಿವೈ)– ಸಾಹಿತ್ಯ ಕ್ಷೇತ್ರದಲ್ಲಿ ರಾಷ್ಟ್ರಕವಿ ಕುವೆಂಪು ಮಾಡಿರುವ ಸಾಧನೆ ಅಸಾಮಾನ್ಯವಾಗಿದ್ದು, ಈ ಹಿನ್ನೆಲೆಯಲ್ಲಿ ಅವರಿಗೆ ಮರಣೋತ್ತರ 'ಭಾರತ ರತ್ನ' ಪ್ರಶಸ್ತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡುವುದಾಗಿ ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದ್ದಾರೆ.

ಮೈಸೂರಿನ ಕುವೆಂಪುನಗರದಲ್ಲಿರುವ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಆಯೋಜಿಸಿದ್ದ ಕುವೆಂಪು ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್ ಉದ್ಘಾಟನೆ, ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ಪ್ರದಾನ, ಕ್ರೀಡಾ ವಿಜೇತರಿಗೆ ಬಹುಮಾನ ವಿತರಣೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕುವೆಂಪು ಬದುಕು, ಬರಹ ಹಾಗೂ ಅವರ ಸಾಧನೆ ಯುವ ಪೀಳಿಗೆಗೆ ಆದರ್ಶವಾಗಿದೆ. ನಾವೆಲ್ಲರೂ ಕುವೆಂಪು ಅವರ ಕೀರ್ತಿ ವಿಶ್ವಮಟ್ಟಕ್ಕೆ ತಲುಪಿಸಲು ಪಣ ತೊಡಬೇಕು. ಸಾಹಿತ್ಯ ಕ್ಷೇತ್ರದಲ್ಲಿ ಕುವೆಂಪು ಅವರು ಮಾಡಿರುವ ಸಾಧನೆ ಅಪಾರ. ಈ ಹಿನ್ನೆಲೆಯಲ್ಲಿ ಕುವೆಂಪು ಅವರಿಗೆ ಮರಣೋತ್ತರವಾಗಿ ಭಾರತ ರತ್ನ ಪುರಸ್ಕಾರ ಸಲ್ಲಲೇಬೇಕಾಗಿದೆ. ಇದಕ್ಕಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸುವುದಾಗಿ ತಿಳಿಸಿದರು.



ಮೈಸೂರಿನ ಕುವೆಂಪುನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣಮಂಟಪದಲ್ಲಿ ಶುಕ್ರವಾರ ಆಯೋಜಿಸಿದ್ದ ಕುವೆಂಪು ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಕುವೆಂಪು ಸಾಂಸ್ಕೃತಿಕ ಪ್ರಶಸ್ತಿಯನ್ನು ನಿವೃತ್ತ ನ್ಯಾಯಮೂರ್ತಿ ಎನ್.ಗೋಪಾಲಗೌಡ, ನಿವೃತ್ತ ಐಎಎಸ್ ಅಧಿಕಾರಿ ಟಿ.ತಿಮ್ಮೇಗೌಡ, ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ, ನಿವೃತ್ತ ಅಧೀನ ಕಾರ್ಯದರ್ಶಿ ಎಂ.ಕೆ.ವೆಂಕಟರಾಮು ಅವರಿಗೆ ಪ್ರದಾನ ಮಾಡಲಾಯಿತು.

ನಿವೃತ್ತ ನ್ಯಾಯಮೂರ್ತಿ ಎನ್.ಗೋಪಾಲ ಗೌಡ ಮಾತನಾಡಿ, ಕುವೆಂಪು ವಿಶ್ವಮಾನವ ಸಂದೇಶ ಸಾರಿದ್ದಾರೆ. ಅವರ ಕಾವ್ಯ ಶೈಲಿ ಸಾಹಿತ್ಯ ಕ್ಷೇತ್ರಕ್ಕೆ ಹೊಸ ಮೆರುಗು ನೀಡಿದೆ. ಇಂದು ಸಾಮಾಜಿಕ ಚಟುವಟಿಕೆಯಲ್ಲಿ ಪಾಲ್ಗೊಳ್ಳಲು ಕುವೆಂಪು ಹೆಸರಿನಲ್ಲಿ ಸಂಘ ದಾಖಲಿಸಿಕೊಂಡಿರುವುದು ವಿಶೇಷ. ಅಲ್ಲದೆ, ಸಾಧಕರ ಸೇವೆ ಗುರುತಿಸಿ ಸನ್ಮಾನಿಸಿರುವುದು ಹೆಮ್ಮೆಯೆಂದು ಹರ್ಷ ವ್ಯಕ್ತಪಡಿಸಿದರು.

ಪ್ರಶಸ್ತಿ ಪ್ರದಾನ: ಇದೇ ವೇಳೆ ಕುವೆಂಪು ಸಾಂಸ್ಕೃತಿಕ ಪ್ರಶಸ್ತಿಯನ್ನು ನಿವೃತ್ತ ನ್ಯಾಯಮೂರ್ತಿ ಎನ್.ಗೋಪಾಲಗೌಡ, ನಿವೃತ್ತ ಐಎಎಸ್ ಅಧಿಕಾರಿ ಟಿ.ತಿಮ್ಮೇಗೌಡ, ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ವಿಶ್ರಾಂತ ಕುಲಪತಿ ಡಾ. ಕೆ. ಚಿದಾನಂದಗೌಡ, ನಿವೃತ್ತ ಅಧೀನ ಕಾರ್ಯದರ್ಶಿ ಎಂ.ಕೆ.ವೆಂಕಟರಾಮು ಅವರಿಗೆ ಪ್ರದಾನ ಮಾಡಲಾಯಿತು. ಸಮಾಜ ಸೇವಾ ಪ್ರಶಸ್ತಿಯನ್ನು ಉದ್ಯಮಿ ಗೋವಿಂದೇಗೌಡ, ವಿಶ್ವಮಾನವ ಟ್ರಸ್ಟ್ ಅಧ್ಯಕ್ಷ ಪ್ರೊ.ಬಿ.ಕೆ. ಚಂದ್ರಶೇಖರಗೌಡ, ಸಮಾಜ ಸೇವಕ ಮೆಲ್ಲಹಳ್ಳಿ ಬೋರೇಗೌಡ, ಶಾಖಾ ಮಠದ ಭಕ್ತ ಎನ್.ಜಿ.ನಾರಾಯಣ ಅವರಿಗೆ ನೀಡಲಾಯಿತು. ಬಾಲಗಂಗಾಧರನಾಥ ಸ್ವಾಮೀಜಿ ವೈದ್ಯರತ್ನ ಪ್ರಶಸ್ತಿಯನ್ನು ಹೃದ್ರೋಗ ತಜ್ಞ ಡಾ.ಅರುಣ್ ಶ್ರೀನಿವಾಸ್, ಸುಯೋಗ್ ಆಸ್ಪತ್ರೆಯ ಸಂಸ್ಥಾಪಕ ಡಾ.ಎಸ್.ಪಿ. ಯೋಗಣ್ಣ, ಪ್ರಸೂತಿ ತಜ್ಞೆ ಡಾ.ಸರಳಾ ಚಂದ್ರಶೇಖರ್, ನರರೋಗ ತಜ್ಞ ಡಾ. ಶುಶ್ರುತ್ ಗೌಡ ಅವರಿಗೆ ಪ್ರದಾನ ಮಾಡಲಾಯಿತು. ಎಸ್‌ಎಸ್‌ಎಲ್‌ಸಿ, ಪಿಯುಸಿ ಪದವಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಪೌರಕಾರ್ಮಿಕರನ್ನು ಇದೇ ವೇಳೆ ಸನ್ಮಾನಿಸಲಾಯಿತು. ಕೆಂಪೇಗೌಡ ನೆನಪಿನಾರ್ಥವಾಗಿ ಕ್ರೀಡಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ, ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದ ಮಹಾರಾಜ್, ಶಾಸಕ ಟಿ.ಎಸ್. ಶ್ರೀವತ್ಸ, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ಉಮಾಶಂಕರ್, ಕೊಪ್ಪಲು ರಾಜಣ್ಣ, ಜಗದೀಶ್, ಸಿ.ಜಿ.ಗಂಗಾಧರ್, ಡಾ. ಯೋಗಣ್ಣ, ಕುವೆಂಪು ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಹೆಚ್.ಕೆ. ರಾಮು, ಉಪಾಧ್ಯಕ್ಷರಾದ ಕೆ.ಎಂ.ಚಂದೇಗೌಡ, ಸಂಚಾಲಕ ವಿಜಯೇಂದ್ರ ಬೂಕನಕೆರೆ ಹಾಗೂ ಟ್ರಸ್ಟ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕೂಲಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕೂಲಿ (ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ವಾರ್ –2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9986022634)
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕೂಲಿ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ವಾರ್ –2 (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ವಾರ್–2 (ಹಿಂ)	5 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಸು ಫ್ರಂ ಸೋ (ಕ): ಬೆ.10ಕ್ಕೆ, ಮ.3.55ಕ್ಕೆ, ವಾರ್–2 (ಹಿಂ): ಮ.12.40ಕ್ಕೆ, ಕೂಲಿ (ಕ): ಸಂ.6.35ಕ್ಕೆ, ಕೂಲಿ (ತ): ರಾ.9.40ಕ್ಕೆ
ಸ್ಕ್ರೀನ್ 2	ಕೂಲಿ (ತ): ಬೆ.6.45ಕ್ಕೆ, ಬೆ.10ಕ್ಕೆ, ಸಂ.4.35ಕ್ಕೆ, ರಾ.7.50ಕ್ಕೆ, ವಾರ್–2 (ಹಿಂ): ಮ.1.15ಕ್ಕೆ.
ಸ್ಕ್ರೀನ್ 3	ವಾರ್–2 (ಹಿಂ): ಬೆ.10.05ಕ್ಕೆ, ಸು ಫ್ರಂ ಸೋ (ಕ): ಮ.1.20ಕ್ಕೆ, ರಾ.7.10ಕ್ಕೆ, ಕೂಲಿ (ಕ): ಸಂ.4ಕ್ಕೆ, ಕೂಲಿ (ತ): ರಾ.9.50ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಬೆ.10.15ಕ್ಕೆ, ಸಂ.4ಕ್ಕೆ, ಕೂಲಿ (ಕ): ಮ.12.45ಕ್ಕೆ, ವಾರ್–2 (ಹಿಂ): ಸಂ.6.35ಕ್ಕೆ, ರಾ.9.55ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಅರಮನೆ ಸೌಂದರ್ಯ, ನಿರ್ವಹಣೆ ಬಗ್ಗೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಮೆಚ್ಚುಗೆ

ಕುಟುಂಬ ಸಮೇತರಾಗಿ ಅರಮನೆ ಸೌಂದರ್ಯ ಸವಿದ ನ್ಯಾಯಮೂರ್ತಿಗಳು




ಮೈಸೂರು ಅರಮನೆಗೆ ಕುಟುಂಬ ಸಮೇತರಾಗಿ ಜಸ್ಟೀಸ್ ಉಜ್ಜಲ್ ಭೂಯಾನ್ ಶನಿವಾರ ಭೇಟಿ ನೀಡಿದ್ದರು. ಅವರನ್ನು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಮಣ್ಯ ಸ್ವಾಗತಿಸಿ, ಸನ್ಮಾನಿಸಿದರು.

ಮೈಸೂರು, ಆ.16(ಜಿಎ)–ಮೈಸೂರಿನ ಅಂಬಾವಿಲಾಸ ಅರಮನೆ ಸೌಂದರ್ಯ ಮತ್ತು ನಿರ್ವಹಣೆ ಬಗ್ಗೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಉಜ್ಜಲ್ ಭೂಯಾನ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಇಂದು (ಆ.16) ಮೈಸೂರು ಅರಮನೆಗೆ ಕುಟುಂಬ ಸಮೇತರಾಗಿ ನ್ಯಾ. ಉಜ್ಜಲ್ ಭೂಯಾನ್ ಭೇಟಿ ನೀಡಿದ್ದರು. ಅವರನ್ನು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಮಣ್ಯ ಸ್ವಾಗತಿಸಿ, ಸನ್ಮಾನಿಸಿದರು. ನಂತರ ಮೈಸೂರು ಅರ ಮನೆಯ ಒಳಾಂಗಣದಲ್ಲಿರುವ ವರ್ಣ ಚಿತ್ರಗಳು, ಕುರ್ಚಿ ರೂಂ., ಪಬ್ಲಿಕ್ ದರ್ಬಾರ್ ಹಾಲ್, ಖಾಸಗಿ ದರ್ಬಾರ್ ಹಾಲ್, ಬೆಳ್ಳಿ ಬಾಗಿಲು, ಮುಂತಾದವುಗಳನ್ನು ವೀಕ್ಷಿಸಿ, ಅರಮನೆಯ ಅಭಿಪ್ರಾಯ ಸಂಗ್ರಹ ಪುಸ್ತಕದಲ್ಲಿ 'ಭಾರತದ ಅಮೂಲ್ಯ ಅರಮನೆಗಳಲ್ಲಿ ಒಂದಾದ ಮೈಸೂರು ಅರಮನೆ ಅತ್ಯಂತ ಮಾಹಿತಿಪೂರ್ಣವಾಗಿದ್ದು, ಅರಮನೆ ಉಪ ನಿರ್ದೇಶಕರು ಮತ್ತು ಸಿಬ್ಬಂದಿಗಳ ಕರ್ತವ್ಯ ನಿರ್ವಹಣೆ ಹಾಗೂ ಅರಮನೆಯ ಉದ್ಯಾನವನಗಳ ನಿರ್ವಹಣೆಯ ಬಗ್ಗೆ ಹರ್ಷ ವ್ಯಕ್ತಪಡಿಸಿದ್ದು, ಅರಮನೆಯನ್ನು ಮತ್ತೊಮ್ಮೆ ನೋಡಲು ಉತ್ಸುಕನಾಗಿದ್ದೇನೆ' ಎಂದು ಬರೆದಿದ್ದಾರೆ.

ಮಹಾಲಕ್ಷ್ಮಿ ಪುನರ್ ಪ್ರತಿಷ್ಠಾಪನೆ



ಮೈಸೂರಿನ ಶ್ರೀ ಕೊಲ್ಲಾಪುರದಮ್ಮ ಮಹಾಲಕ್ಷ್ಮಿ ದೇವತಾ ಪುನರ್ ಪ್ರತಿಷ್ಠಾಪನೆ ಮತ್ತು ಜೀರ್ಣೋದ್ಧಾರ ಸಮಾರಂಭದಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ ಅವರನ್ನು ಸನ್ಮಾನಿಸಲಾಯಿತು. ಪ್ರಸನ್ನ, ಸ್ವಾಮಿ, ದಾಸ್‌ಪ್ರಕಾಶ್, ಹನುಮಂತ್, ಸುರೇಂದ್ರ, ಅರ್ಚಕರಾದ ಶ್ರೀನಿವಾಸ್, ಗಜೇಂದ್ರ, ರಂಗಸ್ವಾಮಿ, ಪ್ರಕಾಶ್, ಸುರೇಶ್, ಮೊಹಲ್ಲಾ ಮುಖಂಡರು, ನಗರಪಾಲಿಕೆ ಮಾಜಿ ಸದಸ್ಯರಾದ ಗುರು ವಿನಾಯಕ್, ಬೊ. ಉಮೇಶ್, ಮಲ್ಲಿಕ್, ರಾ.ಪರಮೇಶಗೌಡ ಹಾಗೂ ಮುಖಂಡರು ಉಪಸ್ಥಿತರಿದ್ದರು.

ಮಕ್ಕಳಿಗೆ ಸಂಸ್ಕೃತಿಯೊಂದಿಗೆ ಹಿಂದು ಧರ್ಮ ಗ್ರಂಥಗಳ ಸಾರವನ್ನು ಮನವರಿಕೆ ಮಾಡಬೇಕು

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸಲಹೆ



ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಶನಿವಾರ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ ಶ್ರೀ ಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮವನ್ನು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಉದ್ಘಾಟಿಸಿದರು.

ಮೈಸೂರು, ಆ.16(ಎಂಟಿವೈ)– ಎಲ್ಲರೂ ತಮ್ಮ ಮಕ್ಕಳಿಗೆ ಸಂಸ್ಕೃತಿಯೊಂದಿಗೆ ಹಿಂದು ಧರ್ಮ ಗ್ರಂಥಗಳ ಸಾರವನ್ನು ಮನವರಿಕೆ ಮಾಡಿಕೊಡಲು ಮುಂದಾಗಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಆಯೋಜಿಸಿದ್ದ ಶ್ರೀ ಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶ್ರೀ ಕೃಷ್ಣ ಮನುಕುಲದ ಮಾದರಿಯಾಗಿದ್ದು, ಸಮಾಜವನ್ನು ಮುನ್ನಡೆಸುವ ಸಾರಥಿಯಾಗಿದ್ದಾರೆ. ಕೃಷ್ಣ ಯಾವಾಗಲೂ ನ್ಯಾಯದ ಪರವಾಗಿದ್ದು, 'ಧರ್ಮೋ ರಕ್ಷತಿ ರಕ್ಷಿತಃ'. ಧರ್ಮವನ್ನು ಕಾಪಾಡಬೇಕು ಎಂದು ಬೋಧಿಸಿದವನು. ಕೃಷ್ಣ ಜನ್ಮಾಷ್ಟಮಿ ಭಾರತದಲ್ಲಿ ಎಲ್ಲರಿಗೂ ಪ್ರಮುಖವಾದ ಶ್ರೇಷ್ಠ ಹಬ್ಬವಾಗಿದ್ದು, ಎಲ್ಲರೂ ಕೃಷ್ಣ ಜನ್ಮಾಷ್ಟಮಿ ಸೇರಿದಂತೆ ವಿವಿಧ ಹಬ್ಬಗಳ ಆಚರಣೆ ಮಾಡುವ ಮೂಲಕ ಮುಂದಿನ ಪೀಳಿಗೆಗೆ ಒಳ್ಳೆಯ ಸಂಸ್ಕೃತಿ, ಜೀವನ ಪಾಠವನ್ನು ಕಲಿಸುವ ಪ್ರಯತ್ನ ಮಾಡಬೇಕು. ಕೃಷ್ಣ ನಿಜವಾಗಿ ಇದ್ದನು ಎಂಬುದಕ್ಕೆ ಹಲವು ಪುರಾವೆಗಳಿವೆ ಎಂದರು.

ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ಮಾತನಾಡಿ, ಕೃಷ್ಣ ಮಹಾಭಾರತದಲ್ಲಿ ತಿಳಿಸಿರುವಂತೆ ಜೀವನದಲ್ಲಿ ಯಾರೊಬ್ಬರೂ ಆತಂಕಕ್ಕೆ ಒಳಗಾಗದೇ, ಹತಾಶರಾಗದೇ, ಸೋತಿದ್ದೇವೆ ಎಂದು ಶರಣಾಗತರಾಗಬಾರದು, ದೃಢವಾಗಿ ನಿಲ್ಲಬೇಕು. ಎಲ್ಲಿ ಅಧರ್ಮ ನಡೆಯುತ್ತದೆಯೋ ಅಲ್ಲಿ ಕೃಷ್ಣ ಮತ್ತೆ ಹುಟ್ಟಿರುತ್ತಾನೆ. ಅಂದರೆ ಕೃಷ್ಣ ಬಿತ್ತಿದಂತಹ ಆದರ್ಶಗಳು, ಮಾರ್ಗಗಳ ಮೂಲಕ ಪ್ರತಿಯೊಬ್ಬರ ಜೀವನದಲ್ಲಿ ಮೊಳಕೆಯಾಗಿ ಸಸಿಯಂತೆ ಮೂಡುತ್ತವೆ ಎಂದು ತಿಳಿಸಿದರು.

ಜಗತ್ತಿಗೆ ಒಂದು ಸಂದೇಶ ನೀಡಿದ ಆದರ್ಶ ಮಹಾಪುರುಷ ಕೃಷ್ಣ ಮಹಾಭಾರತವಿಲ್ಲದೇ, ಭಾರತವಿಲ್ಲ. ಕೃಷ್ಣನಿಲ್ಲದೇ, ಮಹಾಭಾರತವಿಲ್ಲ. ಮಹಾಭಾರತ ನಮ್ಮ ಭಾರತೀಯರ ಅಣು ಅಣುವಲ್ಲೂ ಬೆರೆತಿದೆ. ಕೃಷ್ಣ ಸಮಾಜದಲ್ಲಿ ಧರ್ಮಾತೀತವಾಗಿ, ಜಾತ್ಯಾತೀತವಾಗಿ ಬದುಕಿದ ಆದರ್ಶಪ್ರಾಯ ವ್ಯಕ್ತಿ. ಇಂತಹ ದೈವಿಕ ಶಕ್ತಿಯುಳ್ಳ ಕೃಷ್ಣ ಹುಟ್ಟಿದ ಭೂಮಿಯಲ್ಲಿ ನಾವು ಬದುಕುತ್ತಿರುವುದು ನಮ್ಮೆಲ್ಲರ ಸೌಭಾಗ್ಯ ಎಂದು ಅಭಿಪ್ರಾಯಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ ಮುಖ್ಯಸ್ಥ ಪ್ರೊ. ಶೆಲ್ವಪಿಳ್ಳೆ ಅಯ್ಯಂಗಾರ್ ಮಾತನಾಡಿ, ಶ್ರೀಕೃಷ್ಣನನ್ನು ಪೂರ್ಣಾವತಾರ ಎಂದು ಪರಂಪರೆ ಒಕ್ಕಣಿಸಿದೆ. ಮನುಷ್ಯ ಭಾವದ ಎಲ್ಲಾ ಭಾವಗಳ ಮೂರ್ತರೂಪವಾಗಿ ಕಾಣಿಸಿಕೊಂಡ. ಆ ಎಲ್ಲ ಭಾವಗಳನ್ನೂ ಮೀರಿ ನಿಂತ. ಹೀಗಾಗಿಯೇ ಅವನು ಪೂರ್ಣಾವತಾರಿ. ಅವನು ಎಲ್ಲರ ಭಾವಗಳನ್ನೂ ಅರ್ಥಮಾಡಿಕೊಳ್ಳಬಲ್ಲ, ಅವನು ಎಲ್ಲರ ಸಮಸ್ಯೆಗಳಿಗೂ ಪರಿಹಾರವಾಗಿಯೂ ಒದಗಬಲ್ಲ. ಹೀಗಾಗಿಯೇ ಅವನು ಜಗದ್ಗುರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಮಾಜಿ ಉಪ ಮೇಯರ್ ಪುಷ್ಪವಲ್ಲಿ, ಶ್ರೀ ಕೃಷ್ಣ ಜಯಂತ್ಯುತ್ಸವ ಸಮಿತಿಯ ಮುಖಂಡರಾದ ವೆಂಕಟಾಚಲ ಹಾಗೂ ಇತರರು ಉಪಸ್ಥಿತರಿದ್ದರು.

ಶ್ರೀ ಕೃಷ್ಣಾ ಜನ್ಮಾಷ್ಟಮಿ ಪ್ರಯುಕ್ತ ವಿವಿಧ ವೇಷಭೂಷಣ



ರೋಟರಿ ಶಾಲಾ ಆವರಣದಲ್ಲಿ ಶ್ರೀ ಕೃಷ್ಣಾ ಜನ್ಮಾಷ್ಟಮಿ ಪ್ರಯುಕ್ತ ನರ್ಸರಿ ವಿಭಾಗದ ವಿದ್ಯಾರ್ಥಿಗಳಿಗೆ ವಿವಿಧ ವೇಷಭೂಷಣ ಕಾರ್ಯಕ್ರಮ ಹಾಗೂ ಹಿರಿಯ ವಿಭಾಗದ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ರೋಟರಿ ಶಾಲೆಯ ಮುಖ್ಯ ಶಿಕ್ಷಕರು, ಸಹಶಿಕ್ಷಕರು, ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಜನಪರ ಸಾಹಿತ್ಯ ಪರಿಷತ್ತಿನಿಂದ ಸ್ವಾತಂತ್ರ್ಯ ದಿನಾಚರಣೆ; ಸಾಧಕರಿಗೆ ಸನ್ಮಾನ



ಜನಪರ ಸಾಹಿತ್ಯ ಪರಿಷತ್ ವತಿಯಿಂದ ಜಿಲ್ಲಾ ಕಸಾಪ ಭವನದಲ್ಲಿ ಏರ್ಪಡಿಸಿದ್ದ ಸ್ವಾತಂತ್ರ್ಯೋತ್ಸವದಲ್ಲಿ ಸಾಧಕರಾದ ಡಾ.ಗೋವಿಂದೇಗೌಡ, ಡಾ.ನಾಗೇಂದ್ರ, ಸತ್ಯಮೂರ್ತಿ,. ಡಾ.ಅಬ್ದುಲ್ ಖಾದರ್, ಸಾವಿತ್ರಮ್ಮ, ಸಂಧ್ಯಾರಾಮ್ ಅವರನ್ನು ಅಭಿನಂದಿಸಲಾಯಿತು. ಶಾಸಕ ಟಿ.ಎಸ್. ಶ್ರೀವತ್ಸ, ಡಾ.ಎಸ್. ಶಿವರಾಜಪ್ಪ, ಡಾ.ಎಸ್. ದತ್ತೇಶ್ ಕುಮಾರ್, ಮಡ್ಡೀಕೆರೆ ಗೋಪಾಲ್, ಡಾ.ವೈ.ಡಿ. ರಾಜಣ್ಣ, ಎಂ.ಚಂದ್ರಶೇಖರ್, ಅಂಶಿ ಪ್ರಸನ್ನಕುಮಾರ್, ಡಾ.ಮಹೇಶ್ ಚಿಕ್ಕಲ್ಲೂರು, ಕೆ.ಬಿ. ಸೋಮೇಗೌಡ, ಡಾ.ಆರ್. ನಾಗಭೂಷಣ್, ಸಾಲುಂಡಿ ದೊರೆಸ್ವಾಮಿ ಇದ್ದಾರೆ.

ಮೈಸೂರು, ಆ. 16– ಬೆಂಗಳೂರಿನ ಜನಪರ ಸಾಹಿತ್ಯ ಪರಿಷತ್ತು, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ, ಕೊಳ್ಳೇಗಾಲ ಮಾನಸ ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದ ವಿಜಯನಗರದ ಒಂದನೇ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶುಕ್ರವಾರ ಏರ್ಪಡಿಸಿದ್ದ 79ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಸಾಧಕರನ್ನು ಅಭಿನಂದಿಸಲಾಯಿತು.

ಆಯುರ್ವೇದ ತಜ್ಞ ಡಾ.ಅಬ್ದುಲ್ ಖಾದರ್, ಮಂಡ್ಯದಲ್ಲಿ ರೈತರಿಗೆ ಪಾಠಶಾಲೆ ನಡೆಸುವ ಸತ್ಯಮೂರ್ತಿ, ನಾಗಮಂಗಲದ ಸಾವಿತ್ರಮ್ಮ, ಬೆಂಗಳೂರಿನ ಸಂಧ್ಯಾ ರಾವ್, ಮಹಾರಾಣಿ ವಾಣಿಜ್ಯ ಕಾಲೇಜಿನ ಡಾ.ಗೋವಿಂದೇಗೌಡ ಹಾಗೂ ನಂಜನಗೂಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಡಾ. ನಾಗೇಂದ್ರ ಅವರನ್ನು ಇದೇ ವೇಳೆ ಸನ್ಮಾನಿಸಲಾಯಿತು.

ಇದಲ್ಲದೇ ಕೊಳ್ಳೇಗಾಲ ಮಾನಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ.ಎಸ್. ದತ್ತೇಶ್‌ಕುಮಾರ್ ಅವರಿಗೆ ವಿಶೇಷ ಅಭಿನಂದನೆ ಸಲ್ಲಿಸಲಾಯಿತು.

ಕಾರ್ಯಕ್ರಮವನ್ನು ಶಾಸಕ ಟಿ.ಎಸ್. ಶ್ರೀವತ್ಸ ಉದ್ಘಾಟಿಸಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು.

ಜನಪರ ಸಾಹಿತ್ಯ ಪರಿಷತ್ತು ರಾಜ್ಯಾಧ್ಯಕ್ಷ ಎಂ. ಮಹೇಶ ಚಿಕ್ಕಲ್ಲೂರು, ಮೈಸೂರು ವಿವಿ ವಿಶ್ರಾಂತ ಪ್ರಾಧ್ಯಾಪಕ ಡಾ.ಎಸ್. ಶಿವರಾಜಪ್ಪ, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಜಿಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಬಿ. ಸೋಮೇಗೌಡ, ವಿಶ್ರಾಂತ ಪ್ರಾಧ್ಯಾಪಕ ಡಾ.ಆರ್. ನಾಗಭೂಷಣ್ ಮಾತನಾಡಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಇದ್ದರು.

ಪರಿಷತ್ತಿನ ರಾಜ್ಯ ಉಪಾಧ್ಯಕ್ಷ ಸಾಲುಂಡಿ ದೊರೆಸ್ವಾಮಿ ಸ್ವಾಗತಿಸಿದರು, ಲೋಲಾಕ್ಷಿ ನಿರೂಪಿಸಿದರು. ಡಾ.ವಿ. ಯೋಗೀಂದ್ರ ವಂದಿಸಿದರು. ಕೈಲಾಸಮೂರ್ತಿ ಪ್ರಾರ್ಥಿಸಿದರು.

ಮೈಸೂರಲ್ಲಿ ನಿರ್ಮಾಪಕ ಸಂದೇಶ್ ನಾಗರಾಜ್ ಹುಟ್ಟುಹಬ್ಬ ಆಚರಣೆ





ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಹುಟ್ಟುಹಬ್ಬದ ಅಂಗವಾಗಿ ಅಭಿನಂದನಾ ಸಮಿತಿ ಸಂಚಾಲಕ ವಿಕ್ರಾಂತ್ ಪಿ.ದೇವೇಗೌಡರ ನೇತೃತ್ವದಲ್ಲಿ ಚೆಲುವಾಂಬ ಆಸ್ಪತ್ರೆಯಲ್ಲಿ ಬಾಣಂತಿಯರಿಗೆ ಹಣ್ಣು–ಹಂಪಲು ವಿತರಿಸಲಾಯಿತು. ಮತ್ತೊಂದು ಚಿತ್ರದಲ್ಲಿ ಸಂದೇಶ್ ದಿ ಪ್ರಿನ್ಸ್ ಹೋಟೆಲ್ ಬಳಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಸಿಹಿ, ಬಾತ್ ವಿತರಿಸಲಾಯಿತು.

ಮೈಸೂರು, ಆ.16(ಜಿಎ)–ವಿಧಾನಪರಿಷತ್ ಮಾಜಿ ಸದಸ್ಯ ಹಾಗೂ ಖ್ಯಾತ ಚಲನಚಿತ್ರ ನಿರ್ಮಾಪಕರಾದ ಸಂದೇಶ್ ನಾಗರಾಜ್ ಅವರ ಹುಟ್ಟುಹಬ್ಬವನ್ನು ವಿವಿಧ ಸೇವಾ ಕಾರ್ಯಗಳ ಮೂಲಕ ಆಚರಿಸಲಾಯಿತು.

ಹಣ್ಣು–ಹಂಪಲು ವಿತರಣೆ : ಹುಟ್ಟುಹಬ್ಬದ ಅಂಗವಾಗಿ ಇಂದು ಸಂದೇಶ್ ನಾಗರಾಜ್ ಅಭಿನಂದನಾ ಸಮಿತಿ ಸಂಚಾಲಕ ವಿಕ್ರಾಂತ್ ಪಿ.ದೇವೇಗೌಡ ನೇತೃತ್ವದಲ್ಲಿ ಚೆಲುವಾಂಬ ಆಸ್ಪತ್ರೆಯಲ್ಲಿ ಬಾಣಂತಿಯರಿಗೆ ಹಣ್ಣು–ಹಂಪಲು ವಿತರಿಸಲಾಯಿತು.

ಈ ವೇಳೆ ಮೈಸೂರು ಕಾಂಗ್ರೆಸ್ ಗ್ರಾಮಾಂತರ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್ ಕುಮಾರ್ ಮಾತನಾಡಿ, ಸಂದೇಶ್ ನಾಗರಾಜ್ ಅವರು ಚಿತ್ರರಂಗ, ಹೋಟೆಲ್ ಉದ್ಯಮ ಕ್ಷೇತ್ರದಲ್ಲಿ ತಮ್ಮದೇ ಆದ ಸೇವೆ ಸಲ್ಲಿಸಿ, ಸಾವಿರಾರು ಕುಟುಂಬಗಳಿಗೆ ಆಧಾರವಾಗಿದ್ದಾರೆ. ಸಾಮಾನ್ಯ ರೈತ ಕುಟುಂಬದಿಂದ ಬಂದ ಸಂದೇಶ್ ನಾಗರಾಜ್ ವಿವಿಧ ಕ್ಷೇತ್ರದಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಸಮಾಜ ಸೇವೆಯಲ್ಲೂ ತೊಡಗಿಸಿಕೊಂಡಿದ್ದಾರೆ. ವಿದ್ಯಾಭ್ಯಾಸಕ್ಕೆ ಸಾಕಷ್ಟು ಜನರಿಗೆ ಸಹಾಯ ಮಾಡಿದ್ದಾರೆ. ಇವರ ಚಿತ್ರಗಳಿಗೆ ರಾಷ್ಟ್ರೀಯ ಹಾಗೂ ರಾಜ್ಯ ಪ್ರಶಸ್ತಿ ಸಂದಿವೆ. ಹಿರಿಯರು ಆ.31ರಂದು ಸಮಿತಿ ಮಾಡಿಕೊಂಡು ಇತಿಹಾಸದಲ್ಲಿ ಉಳಿಯುವಂತೆ ಕಾರ್ಯಕ್ರಮ ಮಾಡಲಿದ್ದಾರೆ. ಎಲ್ಲರೂ ಸೇರಿ ಯಶಸ್ವಿಗೊಳಿಸೋಣ ಎಂದು ಕರೆ ನೀಡಿದರು.

ಈ ವೇಳೆ ಸಂದೇಶ್ ನಾಗರಾಜ್ ಅಭಿನಂದನಾ ಸಮಿತಿ ಸಂಚಾಲಕ ವಿಕ್ರಾಂತ್ ಪಿ.ದೇವೇಗೌಡ, ಕನ್ನಡ ಪರ ಹೋರಾಟಗಾರ ಎಂ.ರಾಮೇಗೌಡ, ಹೆಚ್.ಎಸ್.ವೆಂಕಟಸುಬ್ಬಯ್ಯ, ಕಾಂಗ್ರೆಸ್ ಹಿಂದುಳಿದ ವರ್ಗಗಳ ಘಟಕದ ನಗರಾಧ್ಯಕ್ಷ ಎನ್. ಆರ್. ನಾಗೇಶ್, ಕೃಷ್ಣಪ್ಪ(ಗಂಟಯ್ಯ), ರಾಹುಲ್, ಎಂ.ಶ್ರೀನಿವಾಸ್ ಕುಮಾರ್, ಲೋಕೇಶ್ ಮಾದಾಪುರ, ನಾಗಣ್ಣ, ಮನೋಜ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಪ್ರಸಾದ ವಿತರಣೆ : ಸಂದೇಶ್ ನಾಗರಾಜ್ ಹುಟ್ಟುಹಬ್ಬದ ಅಂಗವಾಗಿ ಸಂದೇಶ್ ದಿ ಪ್ರಿನ್ಸ್ ಹೋಟೆಲ್ ಮುಂಭಾಗ ಅಭಿಮಾನಿಗಳು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಂದೇಶ್ ನಾಗರಾಜ್ ಅವರ ಪುತ್ರ ಸಂದೇಶ್, ಅರ್ಜುನ ಆನೆ ಮೇಲೆ ಅಂಬಾರಿ ಇರಿಸಿರುವ ಚಾಮುಂಡೇಶ್ವರಿ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿ, ಸಾರ್ವ ಜನಿಕರಿಗೆ ಸಿಹಿ ಹಂಚಿ, ಬಾತ್ ವಿತರಿಸಿದರು. ಈ ವೇಳೆ ಎಲ್‌ಇಡಿ ಪರದೆ ಮೂಲಕ ಸಂದೇಶ್ ನಾಗರಾಜ್ ಅವರು ನಡೆದು ಬಂದ ಹಾದಿಯ ಹಾಗೂ ನಟ, ನಟಿಯರು, ರಾಜಕೀಯ ಮುಖಂಡರು ಶುಭ ಕೋರಿರುವ ತುಣುಕನ್ನು ಪ್ರದರ್ಶಿಸಲಾಯಿತು.

ಅದ್ಧೂರಿ ಕಾರ್ಯಕ್ರಮ

ಸಂದೇಶ್ ನಾಗರಾಜ್ ಅವರ 80ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಅಭಿಮಾನಿಗಳು ಸಮಾಜಮುಖಿ ಕಾರ್ಯಗಳನ್ನು ಮಾಡುವ ಮೂಲಕ ಆಚರಿಸಿದ್ದಾರೆ. ಆ.31ರಂದು ಮೈಸೂರಿನ ವಸ್ತುಪ್ರದರ್ಶನ ಪ್ರಾಧಿಕಾರದ ಮೈದಾನದ ಆವರಣದಲ್ಲಿ ಸಂದೇಶ್ ನಾಗರಾಜ್ ಅಭಿನಂದನಾ ಸಮಿತಿ ವತಿಯಿಂದ ಅದ್ಧೂರಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಅಂದಿನ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ನಟ ಶಿವರಾಜ್‌ಕುಮಾರ್, ಸುದೀಪ್, ಡಾಲಿ ಧನಂಜಯ್, ನಟಿ ಶೃತಿ, ತಾರಾ ಅನುರಾಧ ಸೇರಿದಂತೆ ಚಿತ್ರರಂಗದ ಅನೇಕ ಕಲಾವಿದರು ಭಾಗವಹಿಸಲಿದ್ದಾರೆ. ಹಾಗೇ ಪಕ್ಷಾತೀತವಾಗಿ ರಾಜಕೀಯ ಮುಖಂಡರು ಆಗಮಿಸಲಿದ್ದಾರೆ. ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಸಂಗೀತ ಸಂಜೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಇನ್ನು ಮುಂದೆ ವಿದ್ಯಾರ್ಥಿಗಳು ಪುಸ್ತಕ ನೋಡಿಕೊಂಡೇ ಪರೀಕ್ಷೆ ಬರೆಯಬಹುದು!



ಬೆಂಗಳೂರು: ಪರೀಕ್ಷೆಯಲ್ಲಿ ಯಾವ ಪ್ರಶ್ನೆ ಬರುತ್ತೋ, ಯಾವುದೋ ಬರಲ್ಲ ಎಂದು ನೆನಪಲ್ಲಿ ಇಟ್ಟುಕೊಳ್ಳಲು ಇದುವರೆಗೆ ಮಕ್ಕಳು ಇಡೀ ಪುಸ್ತಕವನ್ನು ಕಂಠಪಾಠ ಮಾಡುತ್ತಿದ್ದರು. ಇಷ್ಟು ದಿನ ಮನೆಯಲ್ಲಿ ಓದಿಕೊಂಡು ಹೋಗಿ ಪರೀಕ್ಷೆ ಬರೆಯುತ್ತಿದ್ದರು. ಆದರೆ ಇನ್ನು ಮುಂದೆ ಪರೀಕ್ಷೆಯಲ್ಲಿ ಉತ್ತರ ಬರೆಯಲು ವಿದ್ಯಾರ್ಥಿಗಳ ಕೈಗೆ ಪುಸ್ತಕವನ್ನೇ ಕೊಡಲಾಗುತ್ತದೆ. ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ(ಸಿಬಿಎಸ್‌ಸಿ) ಯು 9ನೇ ತರಗತಿ ಓದುವ ವಿದ್ಯಾರ್ಥಿಗಳಿಗೆ ತೆರೆದ ಪುಸ್ತಕ ಪರೀಕ್ಷಾ ಪದ್ಧತಿಯನ್ನು ಜಾರಿಗೆ ತರಲು ನಿರ್ಧರಿಸಿದೆ. ಅಂದರೆ ಇನ್ನು ಮುಂದೆ ಪುಸ್ತಕ ನೋಡಿ ಪರೀಕ್ಷೆ ಬರೆಯುವ ಅವಕಾಶವನ್ನು ನೀಡಲಾಗುತ್ತಿದೆ. 2026–27ರಿಂದ ಇದು ಜಾರಿಗೆ ಬರುತ್ತದೆ. ಕಂಠ ಪಾಠಕ್ಕೆ ಗುಡ್ ಬೈ ಹೇಳಿ, ಸಾಮರ್ಥ್ಯ ಕೌಶಲ ಸ್ವಾಗತಿಸಲಾಗುತ್ತಿದೆ.

ಕೇಂದ್ರೀಯ ಮಾಧ್ಯಮ ಶಿಕ್ಷಣ ಮಂಡಳಿ ಪರೀಕ್ಷಾ ಪದ್ಧತಿಯಲ್ಲಿ ಬದಲಾವಣೆ ಮಾಡಲಾಗಿದೆ. ಮುಂದಿನ ಶೈಕ್ಷಣಿಕ ವರ್ಷದಿಂದ ತೆರೆದ ಪುಸ್ತಕ ಪರೀಕ್ಷಾ ಪದ್ಧತಿ ಜಾರಿ ಮಾಡಲಾಗುತ್ತಿದೆ. ಹೀಗಾಗಿ ಇನ್ಮುಂದೆ ವಿದ್ಯಾರ್ಥಿಗಳು ಪಠ್ಯ ಪುಸ್ತಕ ನೋಡಿ ಪರೀಕ್ಷೆ ಬರೆಯಲು ಅವಕಾಶ ಇರುತ್ತದೆ. ಹಳೆಯ ಪರೀಕ್ಷಾ ಪದ್ಧತಿ ಕಂಠ ಪಾಠಕ್ಕೆ ಸಮಯ ಕೊಡುತ್ತೆ ಅನ್ನೋ ವಾದ ಇತ್ತು. ಈಗಿನ ಹೊಸ ಪರೀಕ್ಷಾ ಪದ್ಧತಿ ವಿದ್ಯಾರ್ಥಿ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಇಂತಹ ಕ್ರಮ ಆಯ್ಕೆ ಮಾಡುವ, ಅನುಸರಿಸುವ ಹಕ್ಕು ಆಯಾ ಶಾಲೆಗಳಿಗೆ ಬಿಡಲಾಗುತ್ತದೆ.

ನ್ಯಾಷನಲ್ ಕರಿಕುಲಮ್ ಫ್ರೇಮ್‌ವರ್ಕ್ ಫಾರ್ ಸ್ಕೂಲ್ ಎಜುಕೇಶನ್ ಚೌಕಟ್ಟು (ಎನ್‌ಸಿಎಫ್‌ಎಸ್‌ಸಿ) 2023 ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) 2020ಕ್ಕೆ ಇದು ಅನುಗುಣವಾಗಿ ಈ ಪ್ರಸ್ತಾನವೆ ಇದೆ. 9ನೇ ತರಗತಿ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿನ ಭಾಷೆ, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ಈ ವಿಷಯಗಳನ್ನು ಪುಸ್ತಕ ಮೌಲ್ಯಮಾಪನ ಒಳಗೊಂಡಿದೆ ಎಂದು ಹೇಳಲಾಗಿದೆ.

ತಾರಕ ಪ್ರವಾಹ ಮುನ್ನೆಚ್ಚರಿಕೆ

ಮೈಸೂರು, ಆ.16– ತಾರಕ ಜಲಾಶಯನ ಪ್ರದೇಶದಲ್ಲಿ ಅಧಿಕ ಮಳೆಯಾಗುತ್ತಿರುವುದರಿಂದ ಒಳಹರಿವು ಹೆಚ್ಚಾಗಿ ಜಲಾಶಯವು ಗರಿಷ್ಠ ಮಟ್ಟ ತಲುಪುವ ಹಂತದಲ್ಲಿದೆ. ಆದ್ದರಿಂದ ಜಲಾಶಯದಿಂದ ಯಾವುದೇ ಸಮಯದಲ್ಲಿ ಕ್ರೆಸ್ಟ್ ಗೇಟ್‌ಗಳ ಮೂಲಕ ನದಿಗೆ ನೀರನ್ನು ಹೊರಬಿಡುವ ಸಾಧ್ಯತೆಯಿದ್ದು, ತಾರಕ ನದಿ ದಂಡೆಯ ಗ್ರಾಮ ವಾಸಿಗಳು ಮುನ್ನೆಚ್ಚರಿಕೆಯಿಂದ ಸುರಕ್ಷಿತ ಸ್ಥಳಗಳಿಗೆ ತೆರಳಬೇಕು. ನದಿ ಪಾತ್ರದ ತಗ್ಗು ಪ್ರದೇಶದ ಆಸ್ತಿ–ಪಾಸ್ತಿ, ಜನ ಜಾನುವಾರು ರಕ್ಷಣೆ ದೃಷ್ಟಿಯಿಂದ ಮುನ್ನೆಚ್ಚರಿಕೆ ವಹಿಸುವಂತೆ ಕಾವೇರಿ ನೀರಾವರಿ ನಿಗಮದ ಹೆಚ್.ಡಿ.ಕೋಟೆ ತಾರಕ ನಾಲಾ ಉಪವಿಭಾಗದ ಸಹಾಯಕ ಕಾರ್ಯ ಪಾಲಕ ಇಂಜಿನಿಯರ್ ನಟಶೇಖರಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

MYSORE RACE CLUB LIMITED

P B No. 11, Race Course Road, Mysore – 570 010
Tel. No. 2521675 E-mail: secretary@mysoreraceclub.com

CHIEF FINANCIAL OFFICER

Mysore Race Club Ltd., a premier Institution in the field of horse racing and related activities, invite applications from qualified and experienced professionals for the position of CHIEF FINANCIAL OFFICER.

Key Responsibilities:

- Oversee the Clubs financial strategy, planning and management, Financial Accounting and reporting as per AS/IndAs. Cost Management, Cash flow and fund management.
- Ensure compliance with statutory, taxation and regulatory requirements.
- Supervise budgeting, auditing, MIS and internal control system.
- Advise the Management and Board on Financial matters.

Eligibility& Qualifications:

- Chartered Accountant (CA) or Cost and Management Accountant (CMA) with atleast 10 year's post-qualification experience.
- Proven track record in financial management preferably in hospitality, sports or corporate sectors.

Strong leadership, analytical and communication skills

Remuneration:

- Commensurate with qualifications and experience.

How to Apply:

- Interested candidates may send their detailed resume with supporting documents within 7 days from the date of this advertisement to the Secretary & CEO, Mysore Race Club Ltd. through email to: **secretary@mysoreraceclub.com**

PUBLIC NOTICE

Under instructions from our client, Smt. PRATHIMA J PATHANGE, daughter of Late. P. Jagannatha Rao, aged about 35 years, residing at No. 1979, Hotel Chalukya Complex Dhanvanthri Road Cross, Near Rajkamal Talkies Road, Mysuru,

We are hereby informing the public that, in O.S.No. 131/2014 on the file of the Hon'ble Principal Senior Civil Judge and CJM, at Mysuru the Hon'ble Court has passed an order on 07-06-2018 not to alienate the schedule property till the disposal of the above suit. Now, it is learnt to our client that the Defendants in the above suit in violation of the said order, Miss. Bharathi Rajashekar and M/s. Vyasti Ventures (Vyasti Natures' Nest) are trying to sell sites and plots formed in the schedule property. Any such alienation will not bind our client and intending purchasers are notified herewith about the order of passed by the Hon'ble Court, in the above said case.

SCHEDULE

Property bearing Sy. No. 25, measuring 5 Acres 25 Guntas situated at Kammannapura Village, Jayapura Hobli, Mysuru Taluk, bounded on the: East by: Property of Bayanga ; West by: Property of Hemantha ; North by: Property of Mahadevegowda ; South by: Road.

Sd/- O. Shama Bhat, B.A., LL.B.
O. Sathisha, B.Sc., LL.B., Advocates
#20/C, 2nd Floor, Near Airlines Hotel, Jayalakshmi Vilas Road, Chamarajapuram, Mysuru-570 005.
Mob: 9900788245
Date: 15-8-2025

PUBLIC NOTICE

This is to notify to the General Public that our client is intending to purchase the property more fully described in the schedule below from its joint owners Smt. Bharathi Vishnuvardhan and Smt. Keerthi S. Kumar who are the residents of Bangalore, Karnataka.

If anyone is having any right, title or interest or charge or mortgage or any encumbrance, Court attachment, right of maintenance etc., over the schedule property, they may file their written objections before the undersigned within 15 days, failing which our client will proceed further to purchase the schedule property from its owners.

SCHEDULE

All that piece and parcel of landed property bearing Sy. No.22/4 measuring 2 acre situated at Kohala Grama, Hampapura Hobli, H.D.Kote Taluk, Mysore and bounded on:
East by: Block 1 and land bearing survey No. 22/1
West by: Hampapura border.
North by: Block 1 and land bearing survey No. 22/1.
South by: Block 1 and Government Road.

Sd/- P.K. Ponnaiah, B.A., LL.B.
Advocate. Office No.: 1662/1A, First Floor, Radhamadhav Connect, Narayana Shastry Road, Beside Secure Hospital, Mysore.
Mob: 9632538866, 9448773611.
Date: 16-8-2025

IN THE COURT OF THE HON'BLE SENIOR CIVIL JUDGE, RANGA REDDY DISTRICT AT L.B.NAGAR

I.A. No. 344 OF 2025 IN and O.S. No. 434 OF 2025

Between: Akula Chandrakala ....Petitioner / Plaintiff
AND
Mr. V. Nagaraj ..Respondent / Defendant

To,
Mr. V. Nagaraj S/o G. Veerasangachar, R/o. H. No. 22, 1st Main 5th Cross, Near Appollo Medical, Jayanagar, Mysore, Karnataka-570014, Mob. No. 98453 17611.
.....Respondent / Defendant

NOTICE

Whereas the plaintiff have filed the above suit for "Cancellation of registered Sale Deed Vide Doc. No. 4287/2025, dt., 17-05-2025" against the Defendant and I.A. seeking for Ad-Interim Injunction against the Respondent/Defendant, Name: Mr. V. Nagaraj, S/o G. Veerasangachar, R/o. H. No. 22, 1st Main 5th Cross, Near Appollo Medical, Jayanagar, Mysuru, Karnataka 570 014, Mobile No. 98453 17611.

Therefore you are hereby informed to appear before the Hon'ble III Addl. Senior Civil Judge Ranga Reddy District, at L.B. Nagar, on 3-9-2025 AT 10:30 Am either in person or through an advocate otherwise the matter will be decided in your absence as exparte.

SUIT SCHEDULE A PROPERTY

All that the Open Land bearing Plot No.88, North Part (VVLTIN/Assessment No.2119501368), admeasuring 156 Sq. Yds., or equivalent to 130.43 Sq.Mtrrs., in Sy.Nos.57 & 58, situated at Under Block No. 9, Raghavendra Nagar, Jillelguda Village, Balapur Revenue Mandal, R.R. District and bounded by North: 25'-0 Wide Road ; South Plot No.88 South Part ; East: 30'-0 Wide Road ; West Plot No. 88/1

BY ORDER OF THE COURT
Sd/- A. Vinesh
V. Sinthia John, Advocates,
#2123, 23rd Cross, Rani Chennamma Circle, Hebbal 2nd Stage, Mysore-570 017.
Mob: 9342184760, 9652749047

ಮೈಸೂರು ಸಕ್ಕರೆ ಕಂಪನಿ ನಿಯಮಿತ,

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ, ಮಂಡ್ಯ–571 402.
ಎಂಎಸ್‌ಕೋ/ಎಸ್ಟೇಟ್/77/2025–26 ದಿ:12–08–2025

ತೆಂಗಿನ ಎಳನೀರು ಫಸಲಿನ 2ನೇ ಮರುಬಹಿರಂಗ ಟೆಂಡರ್ ಹರಾಜು ಪ್ರಕಟಣೆ

ಕಂಪನಿಯ ಸಾತನೂರು ಫಾರಂನಲ್ಲಿರುವ 226 ತೆಂಗಿನ ಮರಗಳ ಎಳನೀರು ಫಸಲನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಪಡೆದುಕೊಳ್ಳಲು 2ನೇ ಮರುಬಹಿರಂಗ ಹರಾಜು ಮಾಡಲಾಗುವುದು (Open Action) ಹರಾಜು ವೇಳಾಪಟ್ಟಿ ಈ ಕೆಳಕಂಡಂತ್ತಿರುತ್ತದೆ.

(1) ಕಂಪನಿಯ ಸಾತನೂರು ಫಾರಂನ 2ನೇ ಮರುಬಹಿರಂಗ ಹರಾಜನ್ನು ದಿನಾಂಕ 20.08.2025 ರಂದು ಬೆಳಿಗ್ಗೆ 11.00 ಗಂಟೆಗೆ ಕಂಪನಿಯಲ್ಲಿ ನಡೆಸಲಾಗುವುದು.
(2) ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಡ್ಡುದಾರರು ಸ್ಥಳದಲ್ಲಿ ರೂ.5000/– (ಐದು ಸಾವಿರ) ಗಳನ್ನು ಠೇವಣಿ ಆಗಿ ಪಾವತಿಸಿ ನಂತರ ಬಿಡ್ಡಿನಲ್ಲಿ ಭಾಗವಹಿಸುವುದು.
(3) ಹರಾಜು ಪ್ರಕ್ರಿಯೆ ಮುಗಿದ ನಂತರ ಯಶಸ್ವಿ ಬಿಡ್ಡುದಾರರನ್ನು ಹೊರತುಪಡಿಸಿ ಉಳಿದ ಬಿಡ್ಡುದಾರರಿಗೆ ಸ್ಥಳದಲ್ಲಿಯೇ ಅವರು ಪಾವತಿಸಿರುವ ಠೇವಣಿ ಹಣ ರೂ.5000/– ಗಳನ್ನು ವಾಪಸ್ ನೀಡಲಾಗುವುದು.
(4) ಹರಾಜಿನಲ್ಲಿ ವಿಜೇತರಾದವರು ಬಿಡ್ ನಿಂತ ಪೂರ್ತಿ ಹಣವನ್ನು ಲೆಕ್ಕಪತ್ರ ವಿಭಾಗಕ್ಕೆ ಪಾವತಿ ಮಾಡಿ ರಶೀದಿ ಪಡೆದು ಎಸ್ಟೇಟ್ ವಿಭಾಗಕ್ಕೆ ಸಲ್ಲಿಸತಕ್ಕದ್ದು, ಇಲ್ಲದಿದ್ದಲ್ಲಿ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಬಿಡ್ ನಿಂತ ಎರಡನೇ ಬಿಡ್‌ದಾರರಿಗೆ ಅವಕಾಶ ನೀಡಲಾಗುವುದು. ಈ ಹರಾಜು ಪ್ರಕ್ರಿಯೆ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಕಂಪನಿಯ ಎಸ್ಟೇಟ್ ವಿಭಾಗದವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಮೊ:8073950337, 9448740861

ಸಹಿ/–ಪ್ರಧಾನ ವ್ಯವಸ್ಥಾಪಕರು
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ//2025–26

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ ನಂ.0821–2474476,
ಇ–ಮೇಲ್ : purmymul@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ https://kppp.karnataka.gov.in ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ.ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	KMF/2025-26 /SE3779	ಒಕ್ಕೂಟದಿಂದ ಮೈಸೂರು ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ನಂದಿನಿ ವಸ್ತು ಪ್ರದರ್ಶನ ಮತ್ತು ಮಾರಾಟ ಮಳಿಗೆಯನ್ನು 100 ದಿನಗಳ ಅವಧಿಗೆ ಬಾಡಿಗೆ ಆಧಾರದಲ್ಲಿ ನಿರ್ಮಿಸಿ ನಿರ್ವಹಣೆ ಮಾಡುವ ಬಗ್ಗೆ.	22.08.2025 ಸಂಜೆ 5.00 ಗಂಟೆಯವರೆಗೆ
2	KMF/2025-26 /SE3775	ಒಕ್ಕೂಟದ ಉಪಹಾರ ಗೃಹದಲ್ಲಿ ಅಡುಗೆ ತಯಾರಿಸಲು ದ್ವೈವಾರ್ಷಿಕ ದರ ಗುತ್ತಿಗೆ ಆಧಾರದ ಮೇಲೆ ಕಾರ್ಮಿಕರನ್ನು (ಅಡುಗೆ ಬಟ್ಟರು ಮತ್ತು ಸಹಾಯಕರು) ನಿಯೋಜಿಸುವ ಬಗ್ಗೆ.	

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗವನ್ನು (6366430821,9482231739) ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ನಗರಸಭಾ ಕಾರ್ಯಾಲಯ, ನಂಜನಗೂಡು–571301 ಮೈಸೂರು ಜಿಲ್ಲೆ

ಕಛೇರಿ ದೂರವಾಣಿ: 08221–226236, 08221–226888
Website: www.nanjanaguducity.mrc.gov.in
Email:ka.nanjangud.cmc@Gamil.com

ಸಂಖ್ಯೆ: ನಸಕಾ/ಆ.ಶಾ/ಪು.ತೆ./ಪಿ.ಆರ್– / 2025–26 ದಿನಾಂಕ: 10–06–2025

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಮಾನ್ಯ ಸರ್ವೋಚ್ಚ ನ್ಯಾಯಾಲಯ ಮತ್ತು ಎಲ್ಲಾ ನ್ಯಾಯಾಲಯಗಳ ತೀರ್ಪಿನ ಆದೇಶಗಳಂತೆ ದಿನಾಂಕ: 13–05–2025 ರಂದು ನಡೆದ ಕೌನ್ಸಿಲ್ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 32 ರಲ್ಲಿ ಚರ್ಚಿಸಿ ತೀರ್ಮಾನಿಸಿರುವಂತೆ ಹಾಗೂ ದಿನಾಂಕ 30–05–2025 ರಂದು ವಿವಿಧ ಫುಟ್ ಪಾತ್ ವ್ಯಾಪಾರಿಗಳ ಸಂಘದ ಪದಾಧಿಕಾರಿಗಳು, ವಿವಿಧ ವರ್ತಕರ ಸಂಘದ ಪಧಾಧಿಕಾರಿಗಳು ಸೇರಿದಂತೆ ನಗರಸಭೆ ಪೊಲೀಸ್ ಇಲಾಖೆಯ ಸಹಯೋಗದಲ್ಲಿ ಸಭೆ ನಡೆಸಿ ತೀರ್ಮಾನಿಸಿರುವಂತೆ ಈಗಾಗಲೇ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ನಗರಸಭೆ ವತಿಯಿಂದ ದಿನಾಂಕ: 06–06–2025 ರಂದು ನೆಹರು ಸರ್ಕಲ್, ಬಜಾರ್ ರಸ್ತೆ, ಕಾಳೇಗೌಡ ರಸ್ತೆ ಹಾಗೂ ಬ್ರಾಡ್‌ವೇ ರಸ್ತೆಗಳಲ್ಲಿ ಫುಟ್‌ಪಾತ್ ತೆರವು ಮಾಡಲಾಗಿರುತ್ತದೆ. ಆದರೆ ತಳ್ಳುವ ಗಾಡಿ ಬೀದಿಬದಿ ವ್ಯಾಪಾರಿಗಳು ಪುನಃ ತೆರೆವುಗೊಳಿಸಿದ ಸ್ಥಳಗಳಲ್ಲೇ ವ್ಯಾಪಾರ ನಡೆಸುತ್ತಿದ್ದು ಹಾಗೂ ಅಂಗಡಿಯವರು ಪುನಃ ಫುಟ್‌ಪಾತ್ ಅತಿಕ್ರಮಣ ಅಂಗಡಿಗಳ ಮುಂದೆ ಮುಂಚಾಚುವಿಕೆ ಮಾಡಿಕೊಳ್ಳುತ್ತಿರುವುದು ಅಲ್ಲಲ್ಲಿ ಕಂಡುಬಂದಿರುತ್ತದೆ. ಈ ಕುರಿತು ದಿನಾಂಕ: 10–06–2025 ರಂದು ನಡೆದ ಸಭೆಯ ತೀರ್ಮಾನದಂತೆ ತಳ್ಳುವಗಾಡಿಯವರು ರಸ್ತೆಗಳಲ್ಲಿ ತಳ್ಳುತ್ತಾ ವ್ಯಾಪಾರ ಮಾಡಿಕೊಳ್ಳುವಂತೆ ಹಾಗೂ ಹೂ, ಹಣ್ಣು, ಎಲೆ ಅಡಿಕೆ ಮುಂತಾದ ವ್ಯಾಪಾರಿಗಳು ಡಬಲ್ ಥಿಯೇಟರ್ ಪಕ್ಕದ ಕವರ್‌ಡೆಕ್‌ನ ಮೇಲೆ ವ್ಯಾಪಾರ ಮಾಡುವಂತೆ ತೀರ್ಮಾನಿಸಲಾಗಿರುತ್ತದೆ. ಇದನ್ನು ಉಲ್ಲಂಘಿಸಿ ಒಂದು ವೇಳೆ ಅನಧಿಕೃತವಾಗಿ ರಸ್ತೆ ಹಾಗೂ ಫುಟ್ ಫಾತ್‌ಗಳ ಮೇಲೆ ವ್ಯಾಪಾರಿಗಳ ಅತಿಕ್ರಮಣ ಮತ್ತು ಮುಂಚಾಚುವಿಕೆ ಮಾಡುವುದು ಕಂಡುಬಂದಲ್ಲಿ ಪೊಲೀಸ್ ಇಲಾಖೆ ಹಾಗೂ ಟ್ರಾಫಿಕ್ ಪೊಲೀಸ್‌ನವರು ಖಡಾಖಂಡಿತವಾಗಿ ದಂಡವಿಧಿಸಿ ಕಾನೂನು ರೀತ್ಯಾ ಕ್ರಮಕೈಗೊಳ್ಳುವುದಾಗಿ ಈ ಮೂಲಕ ಪ್ರಕಟಿಸುತ್ತಾ ಎಲ್ಲಾ ಉದ್ದಿಮೆ ವ್ಯಾಪಾರಿಗಳು ನಿಗಧಿಪಡಿಸಿದ ಸ್ಥಳಗಳಲ್ಲೇ ವ್ಯಾಪಾರ ನಡೆಸಿ ಯಾವುದೇ ಅತಿಕ್ರಮಣ ನಿಷೇಧಿತ ಸ್ಥಳಗಳಲ್ಲಿ ವ್ಯಾಪಾರ ಮಾಡದೇ ನಗರದ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ನಗರಸಭೆ ಮತ್ತು ಪೊಲೀಸ್ ಇಲಾಖೆಯವರ ಸಹಮತಿಯಂತೆ ಈ ಮೂಲಕ ಪ್ರಕಟಿಸಿದೆ.

ಸಹಿ/– ಅಧ್ಯಕ್ಷರು, ನಗರಸಭೆ, ನಂಜನಗೂಡು
ಸಹಿ/– ಉಪಾಧ್ಯಕ್ಷರು, ನಗರಸಭೆ, ನಂಜನಗೂಡು
ಸಹಿ/– ಪೌರಾಯುಕ್ತರು, ನಗರಸಭೆ, ನಂಜನಗೂಡು
ಸಹಿ/– ಆರಕ್ಷಕ ನಿರೀಕ್ಷಕರು, ನಂಜನಗೂಡು ಪಟ್ಟಣ ಪೊಲೀಸ್ ಠಾಣೆ, ನಂಜನಗೂಡು

ಕರ್ನಾಟಕ ಸರ್ಕಾರ

ಉಪ ನಿರ್ದೇಶಕರವರ ಕಛೇರಿ,
ಕೈಮಗ್ಗ ಮತ್ತು ಜವಳಿ ಇಲಾಖೆ,
ಸಿ.ಟಿ.ಐ.ಕಟ್ಟಡ, ಸಯ್ಯಾಜಿರಾವ್ ರಸ್ತೆ, ಜಿಲ್ಲಾ ಪಂಚಾಯತ್, ಮೈಸೂರು–570001
Ph/Fax: 0821-2441353 E-Mail Id: ddmysore@gmail.com, handloomsmysore@yahoo.com
ಟೆಂಡರ್ ಸಂಖ್ಯೆ:ಮೈಜಿಪಂ/ಕೈಜಇ/ಆಡಳಿತ/ಮೈ.ದ.ವ./ಇ–ಟೆಂಡರ್/2025–26
ದಿನಾಂಕ: 13.08.2025

ಪ್ರಕಟಣೆ

ಇ–ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
2025–26ನೇ ಸಾಲಿನಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆವತಿಯಿಂದ ದಿನಾಂಕ:22.09.2025 ರಿಂದ 21.12.2025ರ ವರೆಗೆ ನಡೆಯುವ ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ವಸ್ತು ಪ್ರದರ್ಶನದ ಪೂರ್ಣ ಅವಧಿಗೆ ಕೈಮಗ್ಗ ಮತ್ತು ಜವಳಿ ಇಲಾಖೆಯ ವಿವಿಧ ಯೋಜನೆಗಳ ವಸ್ತು ಪ್ರದರ್ಶನ ಮಳಿಗೆ ನಿರ್ಮಾಣ ಮತ್ತು ಅಲಂಕಾರಿಕ ಲೈಟ್‌ಗಳ ಅಳವಡಿಕೆ, ಮೈಕ್‌ನೊಂದಿಗೆ ಸೌಂಡ್ ಸಿಸ್ಟಮ್, ಇತ್ಯಾದಿ ಅಗತ್ಯ ಸೇವೆಗಳನ್ನು/ವ್ಯವಸ್ಥೆಗಳನ್ನು ಒದಗಿಸುವ ಕಾಮಗಾರಿಗಳಿಗೆ ಇ–ಟೆಂಡರ್ ಕರೆಯಲಾಗಿದೆ. ಇ–ಟೆಂಡರ್‌ನಲ್ಲಿ ಭಾಗವಹಿಸುವ ಟೆಂಡರ್‌ದಾರರು/ಸಂಸ್ಥೆಗಳು ಜಿಲ್ಲಾ/ ರಾಜ್ಯ / ರಾಷ್ಟ್ರ ಮಟ್ಟದ ಇಲಾಖೆಗಳ ಕಾರ್ಯಕ್ರಮಗಳನ್ನು ಏರ್ಪಡಿಸಿದ ಬಗ್ಗೆ ಕನಿಷ್ಠ 03 ವರ್ಷಗಳ ಅನುಭವ ಹೊಂದಿರಬೇಕು. ಕೆಲಸದ ಸಂಕ್ಷಿಪ್ತ ವಿವರ: ಈ ಟೆಂಡರ್‌ನಲ್ಲಿ ನಮೂದಿಸಲಾದ ಸೇವೆ/ವ್ಯವಸ್ಥೆಗಳನ್ನು ಒದಗಿಸುವುದು. ಕೆಲಸದ ಅಂದಾಜು ವೆಚ್ಚ ರೂ.20.00 ಲಕ್ಷಗಳು. ಇ.ಎಂ.ಡಿ. ಮೊತ್ತ ರೂ.50,000/– ಇ–ಟೆಂಡರ್ ಅಧಿಸೂಚನೆ ದಿ: 13.08.2025. ಇ–ಟೆಂಡರ್ ಸಲ್ಲಿಸುವ ಕೊನೆಯ ದಿ: 02.09.2025 ಸಂಜೆ: 16.00 ಗಂಟೆವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿ: 03.09.2025 ಸಂಜೆ:17.00 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿ: 06.09.2025 ಬೆಳಿಗ್ಗೆ:11.30 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಮೈಸೂರು–570 001 ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ:0821–2441353.

ಸಹಿ/–ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿ.ಪಂ. ಮೈಸೂರು
DIPR/DDMYS/800/KSMCA/447/2025-26